ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 24 ಜೂನ್ 13, 2004 ಬೆಲೆ ರೂ. 3.00




ಸಲ್ಲದು ಭಾಷಾವಾರು ಪ್ರಾಂತ್ಯಗಳ ವಿಭಜನೆ

ಸಂಪುಟ ರಚನೆಯ ಕಸರತ್ತು



ಜನಾದೇಶ ಮತ್ತು ಎಡಶಕ್ತಿಗಳು



ಹಳಿಯಾಳದ ಭೂ ಹೋರಾಟಕ್ಕೀಗ ಇಪ್ಪತ್ತೈದು ವರುಷಗಳು

- ಶುಕ್ರಸಂಕ್ರಮಣ - ವೈಚಾರಿಕತೆ ಬೆಳೆಗಲಿ
- ದುಡಿವವರಿಗೆ ಸಿಕ್ಕಲಿ - ಸಿಕ್ಕ ಅಕ್ಕಿ
- ಪಾಲ್ ಸ್ವೀಝಿ - ಅಪ್ರತಿಮ ಚಿಂತಕ
- ಅಂಗನವಾಡಿ ಕಾರ್ಯಕರ್ತೆಯರಿಗೆ ಆಘಾತಕಾರಿ ಆದೇಶ

ಶಿಕ್ಷಣದ ಹಕ್ಕಿಗಾಗಿ ಧ್ವನಿಯೆತ್ತಿ

ಶಿಕ್ಷಕರ ಪುನಶ್ಚೇತನ ಕಾರ್ಯಾಗಾರದಲ್ಲಿ ಪ.ಬಂಗಾಳದ ಶಿಕ್ಷಣ ಸಚಿವ ಶಾಂತಿಬಿಸ್ವಾಸ್

ಭಾರತ ಶಾಲಾ ಶಿಕ್ಷಕರ ಒಕ್ಕೂಟ (STFI) ದ ರಾಷ್ಟ್ರೀಯ ಮಂಡಳಿಯ ಪುನಃಶ್ಚೇತನ ಕಾರ್ಯಾಗಾರವು ಮೇ 25 ರಿಂದ 27ರವರೆಗೆ ಕನ್ಯಾಕುಮಾರಿಯಲ್ಲಿ ನಡೆಯಿತು. ಹತ್ತು ರಾಜ್ಯಗಳಿಂದ 15 ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಪಶ್ಚಿಮ ಬಂಗಾಳದ ಶಿಕ್ಷಣ ಸಚಿವರಾದ ಬಿಸ್ವಾಸ್‌ರವರು ಶಿಕ್ಷಕರು ಸಾಮಾಜಿಕ ಬದ್ಧತೆಯಿಂದ ಕೆಲಸ ನಿರ್ವಹಿಸಬೇಕು. ದೇಶದ ವಿವಿಧ ಭಾಗಗಳಲ್ಲಿನ ಶಿಕ್ಷಕರಿಗೆ ಸಮಾನ ರೀತಿಯ ಸೌಲಭ್ಯಗಳಿಲ್ಲ. ಅವುಗಳನ್ನು ಪಡೆಯಲು ಸಂಘಟಿತ ಪ್ರಯತ್ನ ನಡೆಸಬೇಕೆಂದರು.

ದೇಶದ 7 ಮಹಾನಗರಗಳಲ್ಲಿ ಈಚೆಗೆ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಸಮಾಜಕ್ಕೆ ಉಪಯುಕ್ತವಾಗುವ ವೃತ್ತಿಗಳಲ್ಲಿ ಶಿಕ್ಷಕ ವೃತ್ತಿಗೆ ಶೇ,15.8 ರಷ್ಟು ಅಭಿಮತ ದೊರೆತಿದೆ. ಉಳಿದ ವೃತ್ತಿಗಳಿಗೆ ನಂತರದ ಸ್ಥಾನ ದೊರೆತಿದೆ ಎಂಬುದನ್ನು ಗಮನಿಸಿದಾಗ ಶಿಕ್ಷಕ ವೃತ್ತಿಯ ಬಗೆಗಿನ ಸಮಾಜದ ಗೌರವ ಭಾವನೆಯು ಸ್ಪಷ್ಟವಾಗಿದೆ. ಅದನ್ನು ಉಳಿಸಿ, ಬೆಳೆಸಬೇಕಾದುದು ಶಿಕ್ಷಕ ಮತ್ತು ಸಂಘಗಳ ಜವಾಬ್ದಾರಿಯಾಗಬೇಕು.

ವೆಚ್ಚ ಕಡಿತ ಅಪಾಯಕಾರಿ

ದೇಶದ ರಕ್ಷಣಾ ಆಯವ್ಯಯ ಹೆಚ್ಚುತ್ತಿದ್ದು ಶಿಕ್ಷಣದ ಆಯವ್ಯಯ ವರ್ಷದಿಂದ ವರ್ಷಾಕ್ಕೆ ಕುಸಿಯುತ್ತಿದೆ. ಶಿಕ್ಷಣದ ಕಡೆಗಣನೆ ತೀರಾ ಅಪಾಯಕಾರಿ ಬೆಳವಣಿಗೆ. ಶಿಕ್ಷಣಕ್ಕಾಗಿ ಜಗತ್ತಿನಾದ್ಯಂತ ಶೇ.6 ರಷ್ಟು ವ್ಯಯವಾದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅದರ ಪ್ರಮಾಣ ಶೇ.11 ರಷ್ಟು ಆದರೆ, ಭಾರತದಲ್ಲಿ ಶಿಕ್ಷಣಕ್ಕಾಗಿ ಕೇವಲ ಶೇ.2.2ರಷ್ಟು ಮಾತ್ರ ಬಳಕೆಯಾಗುತ್ತಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕಾಗಿ ಶೇ,7.2 ರಷ್ಟು ನೀಡಲಾಗಿತ್ತು. ಆದರೆ, ಹತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕಾಗಿನ ಪ್ರಮಾಣ ಶೇ,2.9 ಕ್ಕೆ ಕುಸಿದಿರುವುದನ್ನು ಕೇಂದ್ರ ಸರಕಾರದ ಅಂಕಿ ಅಂಶಗಳೇ ಸ್ಪಷ್ಟಪಡಿಸುತ್ತವೆ ಎಂದೂ ಬಿಸ್ವಾಸ್ ವಿವರಿಸಿದರು.

ಅಭಿವೃದ್ಧಿಶೀಲ ದೇಶಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಹಣದಲ್ಲೂ ಭಾರತ ಕೊನೆಯ ಸ್ಥಾನದಲ್ಲಿದೆ.

ಜಾತ್ಯತೀತ ಮೌಲ್ಯಗಳನ್ನು ಬೆಳೆಸಲು ಕರೆ
ಬದಲಾದ ವಾತಾವರಣದಲ್ಲಿ ಶಿಕ್ಷಕರ ಸಂಘಟನೆ-ಚಳುವಳಿ ಬೆಳೆಸಲು ನಿರ್ಧಾರ

ದೇಶದ ಕೇವಲ ಶೇ.8 ರಷ್ಟು ಕುಟುಂಬಗಳು ಮಾತ್ರ ತಮ್ಮ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವ ಸ್ಥಿತಿಯಲ್ಲಿವೆ ಎಂದು ಬಿಸ್ವಾಸ್ ಕಳವಳ ವ್ಯಕ್ತಪಡಿಸಿದರು.

ಕೇಂದ್ರ ಶಿಕ್ಷಣ ವೆಚ್ಚ ಶೇಕಡವಾರು	
ವಿಶ್ವ	6%
ಅಭಿವೃದ್ಧಿ ಶೀಲ ದೇಶಗಳು	11%
ಭಾರತ	2.2%

ಬದಲಾವಣೆ ಇದೆ ಆದರೆ....?

ಸ್ವಾತಂತ್ರ್ಯ ನಂತರದಲ್ಲಿ ದೇಶದ ಶಿಕ್ಷಣ ರಂಗದಲ್ಲಿ ಸಾಕಷ್ಟು ಪ್ರಮಾಣದ ಬದಲಾವಣೆಗಳು ಆಗಿವೆ ಎನ್ನುವುದರಲ್ಲಿ ಯಾವುದೇ ಸಂಶಯವೂ ಇಲ್ಲ. ಆದರೆ, ನಿರೀಕ್ಷಿಸಿದ ಪ್ರಮಾಣದಲ್ಲಿ ಆಗಿಲ್ಲ ಎನ್ನುವುದು ಗಮನಿಸಬೇಕಾದ ಅಂಶ.

ಕ್ಯೂಬಾದಲ್ಲಿ ಶೇ.90 ರಷ್ಟು ಹಾಗೂ ವಿಯೆಟ್ನಾಂನಲ್ಲಿ ಶೇ.98 ರಷ್ಟು ಶಿಕ್ಷಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ಭಾರತದಲ್ಲಿ ಸರಾಸರಿ 36 ರಷ್ಟು ಶಿಕ್ಷಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾಭ್ಯಾಸದ ವಿಷಯದಲ್ಲಿ ಬಾಲಕಿಯರದೇ ಮೇಲುಗೈ ಹೇಗಿದೆಯೋ ಹಾಗೆಯೇ ಕೆಲಸದ ವಿಷಯದಲ್ಲೂ ಶಿಕ್ಷಕರಿಗಿಂತ ಶಿಕ್ಷಕಿಯರದೇ ಮೇಲುಗೈ ಎಂಬುದನ್ನು ಈ ಕುರಿತು ನಡೆದ ವಿವಿಧ ಸಮೀಕ್ಷೆಗಳು ದೃಢಪಡಿಸಿವೆ ಎಂದರು.

ಪ್ರಾಥಮಿಕ ಶಿಕ್ಷಣಕ್ಕೆ ಮಾಡುತ್ತಿರುವ ಖರ್ಚು (ಶೇ)	ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ	ಪ್ರೌಢ ಶಿಕ್ಷಣ	ಉನ್ನತ ಶಿಕ್ಷಣ
ಭಾರತ	39.2	40.5	20
ಪಾಕಿಸ್ತಾನ	51.8	27.9	13
ಬಾಂಗ್ಲಾದೇಶ	46.7	43.0	10
ನೇಪಾಳ	60.0	24.6	12

ಪ.ಬಂಗಾಳಲ್ಲಿ

ಭಾರತದಲ್ಲಿನ ಎಲ್ಲಾ ರಾಜ್ಯಗಳು ಶಿಕ್ಷಣಕ್ಕಾಗಿ ವ್ಯಯಿಸುವ ಹಣಕ್ಕಿಂತಲೂ ಅಧಿಕ ಪ್ರಮಾಣದ, ಅಂದರೆ ರಾಜ್ಯ ಆಯವ್ಯಯದ ಶೇ.24 ರಷ್ಟು ಹಣವನ್ನು ಪಶ್ಚಿಮ ಬಂಗಾಳ ಸರಕಾರ ಖರ್ಚು ಮಾಡುತ್ತಿದೆ.

ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಅನುಪಾತವು ಪ್ರಪಂಚದ ಎಲ್ಲಾ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅತ್ಯಂತ ಅಂತರ ಹೊಂದಿದೆ. ಹಣಕಾಸು ಕೊರತೆಯ ಕಾರಣಕ್ಕಾಗಿಯೇ ಹಲವಾರು ರಾಜ್ಯಗಳಲ್ಲಿ ಶೇ.50 ರಷ್ಟು ಶಿಕ್ಷಕರನ್ನು ಭರ್ತಿ ಮಾಡದೇ ಹುದ್ದೆಗಳನ್ನು ಖಾಲಿಯಾಗಿಯೇ ಇರಿಸಲಾಗಿದೆ. ಶಿಕ್ಷಕರ ವರ್ಗಾವಣೆ ನೀತಿಗಳಲ್ಲೂ ವ್ಯತ್ಯಾಸಗಳಿರುವುದನ್ನು ಕಾಣುತ್ತಿವೆ.


ಗ್ಯಾಟ್ ಒಪ್ಪಂದದ ಪರಿಣಾಮವಾಗಿ ಶಿಕ್ಷಣ ರಂಗವೂ ಸೇರಿದಂತೆ ಅನೇಕ ಕ್ಷೇತ್ರಗಳು ತೀವ್ರ ಬಿಕ್ಕಟ್ಟಿಗೆ ಸಿಲುಕಿವೆ. ಶಿಕ್ಷಣದ ಸಾರ್ವತ್ರೀಕರಣ ಕುರಿತು ಸಂವಿಧಾನದ 86 ನೇ ತಿದ್ದುಪಡಿಯ ಅನ್ವಯ ಎಲ್ಲ ಆರ್ಥಿಕ ಹೊರೆಯೂ ರಾಜ್ಯ ಸರಕಾರಗಳ ಮೇಲೆಯೇ ಬಿದ್ದಿದೆ. ಶಿಕ್ಷಣ concurrent ನಲ್ಲಿರುವುದರಿಂದ ಕೇಂದ್ರ ಸರಕಾರವೂ ಸಮನಾದ ಭಾರ ಹೊರಬೇಕಾಗಿದೆ. ಈ ಕುರಿತಂತೆ ಶಿಕ್ಷಕ ಸಮುದಾಯವು ಧ್ವನಿಯತ್ತಬೇಕಾಗಿದೆ ಎಂದೂ ಬಿಸ್ವಾಸ್ ಕರೆ ನೀಡಿದರು.

ಸಂಘಟನೆ, ಚಳುವಳಿಗೆ ಗಮನ

ಕಾರ್ಯಾಗಾರದಲ್ಲಿ ಸಂಘಟನಾತ್ಮಕ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು. ಅಖಿಲಭಾರತ ಕಿಸಾನ್ ಸಭಾದ ಅಖಿಲ ಭಾರತದ ಪ್ರಧಾನ ಕಾರ್ಯದರ್ಶಿ ಡಬ್ಲ್ಯೂ ವರದರಾಜನ್‌ರವರು 'ಭಾರತದ ಪ್ರಸಕ್ತ ಪರಿಸ್ಥಿತಿ'ಯ ಕುರಿತು ವಿಚಾರ ಮಂಡಿಸಿದರು. ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಿರುವ 14 ನೇ ಲೋಕಸಭಾ ಚುನಾವಣಾ ಫಲಿತಾಂಶವು ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಕಟ್ಟಿ ಬೆಳೆಸಲು ಸೂಕ್ತ ಸಮಯವಾಗಿದ್ದು ಇದನ್ನು ಸರಿಯಾಗಿ ಬಳಸಿಕೊಂಡು ಶಿಕ್ಷಕರ ಸಂಘಟನೆಯನ್ನು ಕಟ್ಟಿಬೆಳೆಸಲು ಕರೆ ನೀಡಿದರು. ಶಿಕ್ಷಕ ಸಮಾಜದ ಅವಿಭಾಜ್ಯ ಅಂಗವಾಗಿದ್ದು ಸಮಾಜದ ಏಳಿಗೆಗೆ ತನ್ನ ಕೊಡುಗೆಯನ್ನು ಸದಾ ಕೊಡಬೇಕು ಎಂದು ಕರೆನೀಡಿದರು.

ಡಾ. ಪಣಿಕ್ಕರ್ ಮಾತುಗಳು

ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಕೆ.ಎನ್.ಫಣಿಕ್ಕರ್‌ರವರು "ಶಿಕ್ಷಣದ ಕೋಮುವಾದೀಕರಣ" ಕುರಿತು ವಿಷಯ ಮಂಡಿಸಿದರು. ಸಮಾಜದ ಶಾಂತಿಸ್ಥಿತಿಯನ್ನು ಕಾಪಾಡಬೇಕಾದಲ್ಲಿ ಶಿಕ್ಷಕ ಸಮುದಾಯದ ಪಾತ್ರ ಹಿರಿದು. ಕಳೆದ ದಶಕವು ಕೋಮುವಾದಿ ಶಕ್ತಿಗಳ ಅಟ್ಟಹಾಸಕ್ಕೆ ಒಳಗಾಗಿತ್ತು. ಅವರ ವರ್ತನೆಗಳಿಂದ ಬೇಸತ್ತು



ಜನತೆ 14ನೇ ಮಹಾ ಚುನಾವಣೆಯಲ್ಲಿ ಜಾತ್ಯಾತೀತ ಶಕ್ತಿಗಳ ಪರವಾಗಿ ಮತ ನೀಡಿದ್ದಾರೆ. ಜಾತ್ಯಾತೀತ ಮನೋಭಾವದ ವಿಚಾರಗಳನ್ನು ಹರಡಲು ಇದು ಸಕಾಲ ಎಂದು ಅಭಿಪ್ರಾಯಿಸಿದರು.

ಭಾರತ ಶಾಲಾ ಶಿಕ್ಷಕರ ಒಕ್ಕೂಟ (STFI)ದ ರಾಷ್ಟ್ರೀಯ ಮಂಡಳಿ ಸಭೆಯು

ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು, ಶಿಕ್ಷಣ ಕೋಮುವಾದೀಕರಣದ ವಿರುದ್ಧ ಹೋರಾಡುವುದು. ಕುರಿತಂತೆ ಪ್ರಮುಖ ತೀರ್ಮಾನ ಕೈಗೊಂಡಿತು. ಮೇ 27 ರಂದು ನಾಗರ್‌ಕೊಯಿಲ್‌ನಲ್ಲಿ 30 ಸಾವಿರ ಶಿಕ್ಷಕರ ಭಾರೀ ಮೆರವಣಿಗೆ ಹಾಗೂ ಬಹಿರಂಗ ಸಭೆ ನಡೆಯಿತು. ಅಖಿಲ ಭಾರತ ಅಧ್ಯಕ್ಷರಾದ ಡಿ.ರಾಮಿರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿ STFI ನ ಎಲ್ಲಾ ಚಟುವಟಿಕೆಗಳಿಗೂ ಸಹಕಾರ ನೀಡುವುದಾಗಿ ಹೇಳಿದರು.

ಒಟ್ಟು ಬಜೆಟ್ ವೆಚ್ಚ	
ಕೇಂದ್ರ ರಾಜ್ಯ ಸರ್ಕಾರಗಳು	13.17 %
ಪಶ್ಚಿಮ ಬಂಗಾಳ	24.52 %

ಈ ಪುನಃಶ್ಚೇತನ ಕಾರ್ಯಾಗಾರಕ್ಕೆ ಕರ್ನಾಟಕದಿಂದ ತಿಮ್ಮಪ್ಪ ವಜ್ರಬಂಡಿ (ಗಂಗಾವತಿ) ರಂಗನಾಥ ಹವಾಲ್ದಾರ್ (ಹ.ಬೊ.ಹಳ್ಳಿ) ಪಾಲ್ಗೊಂಡಿದ್ದರು.

ವರದಿ : ರವಿ

ತಿದ್ದುಪಡಿ

ಸಂಚಿಕೆ 22 ರಲ್ಲಿ ಮೇ 30ರ ಬದಲು ಜೂನ್ 6 ಎಂದು ಕಣ್ತಪ್ಪಿನಿಂದ ಮುದ್ರಿತವಾಗಿದೆ. ಜೂನ್ 6 ರ ಸಂಚಿಕೆ ಜೂನ್ 13 ಎಂದು ಪ್ರಕಟಿಸಲಾಗಿದೆ. 24 ರ ಸಂಚಿಕೆ ಜೂನ್ 13 ಆಗುತ್ತದೆ. ಓದುಗರು ಹಾಗೂ ಏಜೆನ್ಸಿದಾರರು ಸಹಕರಿಸಬೇಕಾಗಿ ವಿನಂತಿ

ಸಂ.


ವಿದೇಶಿ

ನಮಗಿಂದು ಮೈತುಂಬ ವಿದೇಶಿ ಸಾಲ
ಇದು ನೋಡಿ ನಿಜವಾದ ಪರದೇಶಿ ಮೂಲ
ಅದು ಬಿಟ್ಟು ಭಾರತದ ಸೊಸೆಯನ್ನು ನೀವು
ವಿದೇಶಿ ಅನ್ನುವಿರಿ ನಂಬವ್ವೆ ನಾವು

\- ವಿಡಂಬಾರಿ

ಸಂಪುಟ ರಚನೆಯ ಕಸರತ್ತು

ಸಂಪುಟ ರಚನೆ, ಅಧಿಕಾರ ಹಂಚಿಕೆಯ ಕಸರತ್ತಿನಲ್ಲಿ ಈ ಮೈತ್ರಿಕೂಟ ಸೊರಗಬಾರದು. ಬಾಧಿತ ಜನಸಮೂಹದ ಹೆಗಲ ಮೇಲೆ ಸಂಕಷ್ಟಗಳ ಹೊರೆಯೇ ಇದೆ. ಕೋಮುವಾದಿಗಳ ಸವಾಲು ಎದುರಾಗಲಿದೆ. ಇದರತ್ತವೇ ಗಮನ ಅಗತ್ಯ.



ವಾರದ ಉದ್ದಕ್ಕೂ ಸಂಪುಟ ರಚನೆಯದ್ದೇ ಕಸರತ್ತು. ಈ ಹಿಂದಿನ ವಾರ ಯಾರು ಸರ್ಕಾರದ ನೇತೃತ್ವ ವಹಿಸಬೇಕು? ಮುಖ್ಯಮಂತ್ರಿ ಸ್ಥಾನ ಯಾರಿಗೆ? ಯಾರಿಗೂ ಸ್ಪಷ್ಟ ಬಹುಮತ ನೀಡದೇ ಮತದಾರರು ಸೃಷ್ಟಿಸಿದ ಅತಂತ್ರ ವಿಧಾನಸಭೆಯಲ್ಲಿ ಕೋಮುವಾದಿಗಳ ಕೂಟದ ಕೈಗೆ ಅಧಿಕಾರ ಒಪ್ಪಿಸದೇ ಜಾತ್ಯಾತೀತ ಸರ್ಕಾರ ರಚಿಸುವ ಜನಾದೇಶದ ಪಾಲನೆಗೆ ದೇಶದ ಹಲವೆಡೆ ಇದ್ದ ಜಿದ್ದ 'ಅನುಕೂಲಕರ' ಮಾದರಿಗಳನ್ನು ಜಾಲಾಡಿ ಕೊನೆಗೆ 'ಮಹಾರಾಷ್ಟ್ರ ಮಾದರಿ'ಯನ್ನು ಆರಿಸಿಕೊಂಡದ್ದಾಯಿತು. ತಿರಸ್ಕೃತವಾದರೂ ಅಧಿಕಾರ ಬಿಡದ ದುರಾಸೆ ಕಾಂಗ್ರೆಸ್‌ಗೆ. ಮುಖ್ಯಮಂತ್ರಿಸ್ಥಾನ ಕಾಂಗ್ರೆಸ್ ಪಟ್ಟು ಹಿಡಿದು ಪಡೆದ ಬಳಿಕ ಉಪ ಮುಖ್ಯಮಂತ್ರಿ ಜನತಾದಳ(ಎಸ್)ಗೆ ಅನಿವಾರ್ಯವಾಯಿತು. ಆದರೆ ಗೃಹ, ಹಣಕಾಸು, ಪಂಚಾಯತ್ ಮುಂತಾದ ಪ್ರಮುಖ ಖಾತೆಗಳನ್ನು ತನಗೇ ಬರಬೇಕೆಂಬ ಒಪ್ಪಂದ ಈಗ ಜಾರಿಯಾಗಲಿ ಎಂದಿತು ಜೆಡಿ(ಎಸ್). ಅದಕ್ಕೂ ಕಾಂಗ್ರೆಸ್‌ನದು ತಕರಾರು. 'ಅವ ಕೊಡ, ಇವ ಬಿಡ' ಎಂದಾಗ ಉಪ ಮುಖ್ಯಮಂತ್ರಿಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್‌ನ್ನು ಬೆಂಬಲಲಿಸಿ ಹೊರಗುಳಿಯುವುದಾಗಿಯೂ, ಮೈತ್ರಿಕೂಟದ ಸರ್ಕಾರ ಮುರಿದುಕೊಳ್ಳುವುದಾಗಿಯೂ ಸುದ್ದಿಗಳು ಹೊರಬಂದವು. ಈ ರಾದ್ಧಾಂತದ ಬಳಿಕ ಈಗ ಒಂದು ಇತ್ಯರ್ಥಕ್ಕೆ ಬರಲಾಗಿದೆ. ಕಾಂಗ್ರೆಸ್ ಹಾಗೂ ಜೆಡಿ(ಎಸ್)ನ ತಲಾ ಐದು ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮತ್ತೊಮ್ಮೆ ಸಂಪುಟದ ವಿಸ್ತರಣೆಯಾಗುವುದು ಅನಿವಾರ್ಯವಾಗಿದೆ.

ಕರ್ನಾಟಕದ ಈ ವಿದ್ಯಮಾನಗಳಿಗೆ ಪ್ರತಿಹಂತದಲ್ಲಿಯೂ ದೆಹಲಿಯಲ್ಲಿಯೇ ಪರಿಹಾರ ಕಾಣುವುದು, ರಾದ್ಧಾಂತ ರಗಳೆಯ ಬಳಿಕವೇ ಇತ್ಯರ್ಥ ಕಾಣುವ ಈ ಪ್ರಸಂಗಗಳು ಜನರ ಎದುರು ಈ ಮೈತ್ರಿಕೂಟದ ಸರ್ಕಾರದ ಬಗ್ಗೆಯೇ ಒಂದು ದುರ್ಬಲವಾದ ಕೆಟ್ಟ ಚಿತ್ರಣ ನೀಡಿ ಜನರಲ್ಲಿ

ಈ ವಾರ ಕರ್ನಾಟಕ

ಎಸ್.ವೈ.ಗುರುಶಾಂತ್

ಭ್ರಮನಿರಸನವನ್ನು ಬಿತ್ತುತ್ತಿದೆ ಎಂಬುದನ್ನು ಗಮನಿಸಬೇಕಾಗಿದೆ. ಇನ್ನೂ ವಾಜಪೇಯಿ, ಅನಂತಕುಮಾರರ ಅಲೆಯ ಅಮಲಿನಲ್ಲೇ ಉಳಿದುಬಿಟ್ಟಿರುವ ಟಿವಿ, ಪತ್ರಿಕೆಯಂತಹ ಮಾಧ್ಯಮಗಳು ಇದಕ್ಕೆ ರಂಗಿನ ರಾಡಿಯನ್ನು ಎರಚುತ್ತಿವೆ.

ರಾಜ್ಯದ ಇಂತಹ ಸಂಕೀರ್ಣ ರಾಜಕೀಯ ಸಂದರ್ಭದಲ್ಲಿ ಇಂತಹ ಮೈತ್ರಿಕೂಟದ ಕಾರ್ಯ ವಿಧಾನವೂ ಹಲವು ಸಂಕೀರ್ಣತೆಗಳಿಂದ ಕೂಡಿದೆಯೆಂಬುದು ನಿಜ. ಅಧಿಕಾರ ಹಂಚಿಕೆಯ ಹಕ್ಕನ್ನು ಪ್ರತಿ ಹಂತದಲ್ಲಿಯೂ ಪ್ರಬಲವಾಗಿ ಪ್ರತಿಪಾದಿಸುವುದು ಮೈತ್ರಿಕೂಟದ ಭಾಗೀದಾರರಿಗೆ ಅನಿವಾರ್ಯವೆ ಇರಬಹುದು. ಆದರೆ ಇದೊಂದು ಬೀದಿರಂಪವಾಗಿ ರೇಜಿಗೆ ಹುಟ್ಟಿಸಬಾರದು. ಇಲ್ಲವಾದರೆ ಮುಖ್ಯಮಂತ್ರಿ ಧರಂಸಿಂಗ್ ಈಚೆಗೆ ದೆಹಲಿಯಲ್ಲಿ ಪುನರುಚ್ಚರಿಸದಂತೆ ಕೋಮುವಾದಿಗಳ ವಿರುದ್ಧ ಹೋರಾಟವೊಂದೇ ಒಂದಾಗಿರುವುದಕ್ಕೆ ಅರ್ಥವೇನಾದರೂ ಉಳಿದೀತೆ? ಆದ್ದರಿಂದ ಈ ನಿಲುವುಗೆ ಬದ್ಧತೆ ತೋರಬೇಕು. ಪ್ರಸಕ್ತವಾಗಿ ರಾಜ್ಯದ ಜನತೆಯ ಹೆಗಲ ಮೇಲೆ ಹಲವು ಸಂಕಟಗಳ ಹೊರೆಯೇ ಇದೆ. ಜನತೆ ಈ ಸರ್ಕಾರದಿಂದ ಕನಿಷ್ಠ ಪರಿಹಾರವನ್ನು ನಿರೀಕ್ಷಿಸುತ್ತಿದ್ದಾರೆ. ಮುಂದೆ ಇನ್ನೂ ಹಲವಾರು ಸಂದಿಗ್ಧ ಸವಾಲುಗಳು ಕೋಮುವಾದಿಗಳಿಂದ ಎದುರಾಗಲಿವೆ. ಆದ್ದರಿಂದ ಜನತೆಯ-ರಾಜ್ಯದ ಹಿತಕಾಯುವಂತಹ ಕನಿಷ್ಠ ಕಾರ್ಯಸೂಚಿ ಇರಿಸಿ ಕಾರ್ಯಾಚರಣೆಗೆ ಇಳಿಯಬೇಕು. ಇದು ತಕ್ಷಣದ ಆದ್ಯತೆಯಾಗಿದೆ.

ಹಗರಣದಲ್ಲಿ ಸಿಕ್ಕಿದಾಳು : ದುಡಿವವರಿಗೇ ದಕ್ಕಲಿ

ನಾಡಿನ ತುಂಬಾ ಬರದ ಬರೆ, ಜನತೆಯ ತತ್ವಾರ! ಆದರೆ ಭೂಮಾಲೀಕರಿಗೆ, ಬಂಡವಾಳಗಾರರಿಗೆ, ಕಟ್ಟಡ ನಿರ್ಮಾಣದ ಕಂಟ್ರಾಕ್ಟರುಗಳಿಗೆ, ಅಧಿಕಾರಿಗಳು - ಸಚಿವರಿಗೆ ವರ!! ಇದನ್ನು ಬಯಲಿಗೆಳೆದ ಲೇಖನಗಳನ್ನು ಈ ಹಿಂದೆ ಪತ್ರಿಕೆ ತೆರೆದಿಟ್ಟಿದೆ. ಬಡ ಜನರ-ಕೂಲಿಕಾರರ ಹಸಿದ ಒಡಲು ಸೇರಬೇಕಿದ್ದ, ಕಸುವಿನ ಕೆಲಸಕ್ಕೆ ಕೂಲಿಯಾಗಿ ಸಿಗಬೇಕಿದ್ದ ಲಕ್ಷಲಕ್ಷ ಟನ್ ಆಹಾರ ಧಾನ್ಯ ವಂಚನೆಯ ಜಾಲದಿಂದ ಎಲ್ಲೆಲ್ಲಿಂದಲೋ ಸೇರಿ ಕಡಲ ತೀರದ ಗೋದಾಮುಗಳಲ್ಲಿ ಸಂಗ್ರಹವಾಗಿ ಹಡಗುಗಳಲ್ಲಿ ಆಫ್ರಿಕಾದತ್ತ ಸಾಗಾಟಕ್ಕೆ ಅಣಿಯಾದವು. ಅಕಸ್ಮಾತ್ ಸಿಕ್ಕಿಬಿದ್ದ ಒಂದು ಹಗರಣ ಈಗ ಕರ್ನಾಟಕದಲ್ಲಿ ಹೊಸಹೊಸ ತಿರುವಿ ನೊಂದಿಗೆ ಹೊರಬರುತ್ತಿದೆ.

ಅಮಾನವೀಯತೆಯ, ದುಡಿಯುವ ವರ್ಗದ ದ್ವೇಷಿಯಾದ 10 ಕೋಟಿ ರೂ. ಮೌಲ್ಯ 1,66,100 ಟನ್ ಅಕ್ಕಿ ದೋಚಿದ ಈ ಹಗರಣದ ಆಳ ಅಗಲ ಬಗೆದಲ್ಲಿ, ಅಲ್ಲಿ ಎಲ್ಲವನ್ನೂ ತಿಂದು ಮುಕ್ಕುವ ಇಲಿ, ಹೆಗ್ಗಣ, ರಣಹದ್ದುಗಳನ್ನು ಈಚೆಗೆ ಎಳೆಯಬಹುದು. ಅವರನ್ನು ಶಿಕ್ಷಿಸಬೇಕಿದೆ. ಆದ್ದರಿಂದ ನಿಷ್ಪಕ್ಷಪಾತದ, ನಿಷ್ಠುರ ತನಿಖೆ ನಡೆಯಬೇಕು. ಈ ತನಿಖೆ ಕೇವಲ ಇದಕ್ಕೆ ಸೀಮಿತಗೊಳಿಸದೇ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿದರೆ ನೂರಾರು ಕೋಟಿ ರೂ.ಗಳ ವಂಚನೆ ಹಗರಣ ಹೊರ ಬಂದೀತು.

ಈಗ ಹಿಡಿಯಲಾದ ಹಗರಣದ ಮೊಕದ್ದಮೆ ನ್ಯಾಯಾಲಯದ ಮುಂದಿದೆ. ಈ ಅಕ್ಕಿಯನ್ನು ಏನು ಮಾಡುವುದು? ಅದನ್ನು ಹರಾಜಿಗೆ ಹಾಕಿ ಹಣ ಜಮಾ ಮಾಡಿಕೊಳ್ಳಿ ಎನ್ನುತ್ತದೆ ತನಿಖಾ ಸಂಸ್ಥೆ ಸಿಓಡಿ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಕೇಳುತ್ತಿದೆ ನಮಗೆ ಕೊಟ್ಟುಬಿಡಿ. ರೇಷನ್ ಅಂಗಡಿಯಲ್ಲಿ ಮಾರುತ್ತೇನೆ' ಎಂದು. ಆದರೆ ಇದು ಕೂಲಿಗಾಗಿ ಕೊಡಬೇಕಿದ್ದ ಕಾಳು. ಆದ್ದರಿಂದ ರಾಜ್ಯದಲ್ಲಿ ಮಳೆ ಹನಿಗಳು ಅಲ್ಲಲ್ಲಿ ಆಗೀಗ ಉದುರುತ್ತಿದ್ದರೂ ಬರದ ಆಘಾತಕಾರಿ ಪೀಡನೆ ಇನ್ನೂ ತಪ್ಪಿಲ್ಲ. ಆದ್ದರಿಂದ ಅದನ್ನು ಬರದ ಕಾಮಗಾರಿ ಕೆಲಸಕ್ಕೆ ತೊಡಗಿಸಿ ದುಡಿವ ಕೂಲಿಕಾರರಿಗೆ ಸಿಗಬೇಕು. ಹೀಗೆ ನೀಡುವಾಗ ಮತ್ತೇ ಅದು ಭ್ರಷ್ಟಾಚಾರದ ಸುಳಿಗೆ ಸಿಲುಕು ವುದನ್ನು ತಪ್ಪಿಸಬೇಕು. ಬಿಗಿಯಾದ, ವಿವಿಧ ಸಂಘಟನೆಗಳು, ಸಾರ್ವಜನಿಕರೂ ಒಳಗೊಂಡ ಪಾರದರ್ಶಕ ವಾಗಿರುವಂತೆ ನೋಡಿಕೊಳ್ಳಬೇಕು. ಅಲ್ಲದೇ ಮಳೆಗಾಲ ಆರಂಭವಾಗಿರುವುದರಿಂದ ಅಕ್ಕಿ ಹಾಳಾಗುವ ಸಂಭವವಿದ್ದಲ್ಲಿ ಅದರಲ್ಲಿ ಇನ್ನೊಂದು ಭಾಗವನ್ನು ಪಡಿತರ ಅಂಗಡಿಗಳ ಮೂಲಕ ಅತ್ಯಂತ ಕಡಿಮೆ ದರಕ್ಕೆ (ಅಂತ್ಯೋದಯ ಬೆಲೆಗೆ ರೂ. 3.50) ವಿತರಿಸಬೇಕು. ಈ ವಿಷಯದಲ್ಲಿ ವಿಳಂಬ ಸಲ್ಲದು, ಸರ್ಕಾರ ಕೂಡಲೇ ಕಾರ್ಯಪ್ರವೃತ್ತರಾಗಬೇಕಿದೆ. ಇದಕ್ಕಾಗಿ ಒಂದೆಡೆ ಹೋರಾಟ ಮತ್ತು ಅಗತ್ಯ ಬಂದಲ್ಲಿ ನ್ಯಾಯಾಲಯದ ಮುಂದೆ ಪ್ರಕರಣವಿದ್ದು ಅಲ್ಲಿಯೂ ಕೇಳಿಕೆ ಮಂಡಿಸಬಹುದು.

ಕಳ್ಳ ಹಾದಿ ಹಿಡಿದ ವೆಂಕಯ್ಯ ನಾಯ್ಡು

60 ರಾಜ್ಯಸಭಾ ಸದಸ್ಯರ ಅವಧಿಯು ಮುಗಿಯುತ್ತಿರುವುದರಿಂದ ಇದೇ ಜೂನ್ 21 ರಂದು ಚುನಾವಣೆ ನಡೆಯಬೇಕಿತ್ತು. ಹಿರಿಯ ಪತ್ರಕರ್ತ ಕುಲದೀಪ ನಯ್ಯರ್ ಸರ್ವೋಚ್ಚ ನ್ಯಾಯಾಲಯದ ಮೊರೆ ಹೊಕ್ಕದ್ದರಿಂದ ಚುನಾವಣೆಗೆ ತಡೆಯಾಜ್ಞೆ ದೊರತಿದೆ. ವಿಚಾರಣೆ ನಂತರ ಆಜ್ಞೆ ಹೊರಬೀಳಲಿದೆ.

ಕರ್ನಾಟಕದ ವಿಧಾನಸಭೆಯು ನಾಲ್ಕು ಜನ ಎಂಪಿಗಳನ್ನು ಆರಿಸಬೇಕಿದೆ. ಈ ಸ್ಥಾನಗಳ ಮೇಲೆ ಅನೇಕರ ಕಣ್ಣು. ಅದನ್ನು ಕಾಯುವ ತನಗೇ ಬೇಕೆಂದು ಕಾಡುವ ಕೆಲಸದಲ್ಲಿ ಅನೇಕರಿದ್ದಾರೆ. ಜನತೆಯಿಂದ ತಿರಸ್ಕೃತರಾದವರು, ಜನರನ್ನು ಎದುರಿಸಲಾರದವರು ಅಥವಾ ರಾಜಕೀಯ ನಿರಾಶ್ರಿತರು, ಅತೃಪ್ತರಿಗೆ, ಆಪ್ತರಿಗೆ ಉಡುಗೊರೆ ಎಂಬಂತೆ ಈ ಸ್ಥಾನಗಳನ್ನು ಹಂಚುವುದನ್ನೇ ಮಾನದಂಡವಾಗಿ ಪರಿಗಣಿಸುತ್ತಾ ಬಂದ ಸಂದರ್ಭಗಳೇ ಹೆಚ್ಚು. ಇದು ರಾಜ್ಯಸಭಾ ಸದಸ್ಯರ(ಹಿರಿಯರ ಮೇಲ್ಮನೆಗೆ) ಆಯ್ಕೆಯ ಮೂಲ ಚಿಂತನೆ-ತರ್ಕದ ಮಾನದಂಡಗಳ ನಗ್ನ ಉಲ್ಲಂಘನೆ ಹಾಗೂ ವಿಕೃತ ಆಚರಣೆ. ಯಾಕೆಂದರೆ ರಾಜ್ಯಸಭೆಗೆ ಆಯ್ಕೆಯಾಗಬೇಕಾದವರು ಹಿರಿಯ ನಾಗರಿಕರು-ಮುಖ್ಯವಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಚಿಂತಕರು, ವಿವಿಧ ವಿಭಾಗಗಳ ಪ್ರತಿನಿಧಿಗಳು.... ಆದರೆ ಎಡಪಕ್ಷಗಳನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಪಕ್ಷಗಳು ಈ ಮಾನದಂಡವನ್ನು ಗಾಳಿಗೆ ತೂರಿವೆ, ಸ್ವಲ್ಪವೂ ಅಳುಕಿಲ್ಲದೇ ಧಿಕ್ಕರಿಸಿವೆ. ಹಾಲಿ ರಾಜ್ಯಸಭಾ ಸದಸ್ಯರು ಹಾಗೂ ಆಗಬೇಕಿರುವ ಶಿಫಾರಸಿನ ಹೆಸರುಗಳನ್ನೇ ಹಿಡಿದು ನೋಡಿದರೆ ವಾಸ್ತವ ಎದ್ದು ತೋರುವುದು.

ಇದು ಅಭ್ಯರ್ಥಿಗಳ ವಿಚಾರವಾದರೆ - ಇನ್ನು ಇಂತಹ ಅಭ್ಯರ್ಥಿಗಳು - ನಾಡಿನ ಸಾಂಸ್ಕೃತಿಕ, ಸಾಮಾಜಿಕ ವೈವಿಧ್ಯಗಳನ್ನು ಪ್ರತಿನಿಧಿಸ ಬೇಕಿರುವುದರಿಂದ ಆಯ್ಕೆಯಾಗಬಯಸುವವರು ಅದೇ ರಾಜ್ಯದ ವಾಸಿಗಳಾಗಿರಬೇಕು ಎಂದಿದೆ. ಇದರ ಹಿಂದಿನ ಸ್ಫೂರ್ತಿ ಮತ್ತು ಅಗತ್ಯತೆಯನ್ನೇ ತಿರಸ್ಕರಿಸುವವರು ವಿಧಾನಸಭೆಯಿಂದ ಆಯ್ಕೆಯಾಗಬೇಕಾದ ರಾಜ್ಯಗಳಲ್ಲಿನ ಯಾವುದೋ ಒಂದು ವಿಳಾಸವನ್ನು (ನಮ್ಮಲ್ಲಿ ಬಹುತೇಕ ಬೆಂಗಳೂರು ಎನ್ನಿ) ಅರ್ಜಿಯಲ್ಲಿ ನೀಡಿ ಆಯ್ಕೆಯಾಗುವುದನ್ನು ಸರಾಗವಾಗಿಸಿಕೊಂಡಿದ್ದಾರೆ. ಇದೂ ಸಹ ನೀತಿಯ ಸ್ಪಷ್ಟ ಉಲ್ಲಂಘನೆ ಮಾತ್ರವಲ್ಲ, ವಂಚನೆಯೂ ಕೂಡ. ಈ ವಂಚನೆಯ ವಿರುದ್ಧವೇ ಕುಲದೀಪನಯ್ಯರ್ ಧ್ವನಿ ಎತ್ತಿರುವುದು. ಅಲ್ಲದೆ ಎಡಪಕ್ಷಗಳು ಹಿಂದಿನಿಂದಲೂ ಪ್ರತಿಭಟಿಸುತ್ತಿರುವುದು.

ಈ ಬಾರಿಯೂ ಸಹ ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡುರನ್ನು ವಿಧಾನಸಭೆಯಿಂದ ರಾಜ್ಯಸಭೆಗೆ ಆರಿಸಲು ತನ್ನ ಅಭ್ಯರ್ಥಿಯೆಂದು ಬಿಜೆಪಿ ಪ್ರಕಟಿಸಿದೆ. ಈ ಮಹನೀಯರ ಮೇಧಾವಿತನವೇನು ಹಾಗೂ ಎರಡನೇ ಬಾರಿ ಆಯ್ಕೆ ಮಾಡುವಲ್ಲಿ ಕರ್ನಾಟಕಕ್ಕೆ ಇವರ ಅಮೋಘ ಸೇವೆಯೇನು ಎಂಬ ಬಗ್ಗೆ ಬಿಜೆಪಿ ಏನನ್ನು ಹೇಳುತ್ತಿಲ್ಲ. ಆದರೆ ಈತ ಮೂಲತಃ ಆಂಧ್ರಪ್ರದೇಶದವರು. (ದಲಿತರ ಭೂಮಿಯನ್ನು ಅನಾಯಸವಾಗಿ ನುಂಗಿ ಹಗರಣ ಹೊರಬಂದ ಬಳಿಕ ಒತ್ತಡದಿಂದಾಗಿ ಕಕ್ಕಿದವರು!) ತತ್ವನಿಷ್ಠರೆಂದೂ, ಕಳಂಕಿತರು ಸಚಿವರಾಗಬಾರದು ಎಂದೆಲ್ಲಾ ಪಟ್ಟು ಹಿಡಿದು ರಾಜಕೀಯ ಶುದ್ಧೀಕರಣಕ್ಕೆ ಬಡಿದಾಡುವ ವಂಚಕ ಚಡ್ಡಿ ಪಡೆಗೆ ಇಷ್ಟು ಕನಿಷ್ಟ ಜ್ಞಾನವಿಲ್ಲವೇ? ಅಥವಾ ತಾನು ಸಂವಿಧಾನದ ಕಾನೂನಿನ-ನೀತಿ ನಿಮಯಗಳ ಉಲ್ಲಂಘನೆ ಮಾಡಿದರೆ ಅದನ್ನೇ 'ದೇಶಸೇವೆ' ಯೆಂದು ಭಾವಿಸಿದಂತಿದೆ. ಇಂತಹದ್ದಕ್ಕೆ ಉಳಿದ ರಾಜಕೀಯ ಪಕ್ಷಗಳು ಮೌನ ಸಮ್ಮತಿ ನೀಡದೇ (ಒಳಹೊಂದಾಣಿಕೆಗೆ ಇಳಿಯದೇ) ಪ್ರತಿಭಟಿಸ ಬೇಕು. ಈಗಾಗಲೇ ಬಿಜೆಪಿಯೊಳಗೆ 'ಮಹಾ ವೇದಾಂತಿ' ವೆಂಕಯ್ಯ ನಾಯ್ಡುವಿನ ಹೆಸರಿನ ವಿರುದ್ಧ ಧ್ವನಿ ಕೇಳಿದೆ. ಆದರೆ ಅದೆಷ್ಟು ಫಲಿಸಿತು? ಅಥವಾ ಅದನ್ನೇ ರಾಜಕೀಯ ಮೆಟ್ಟಿಲೇರಲು ಬಳಸಲು ಅಂತಹವರು ಯೋಚಿಸಿಲ್ಲ ಎಂದು ಹೇಳುವುದಾದರೂ ಹೇಗೆ?

ಆದರೆ ಇಂತಹ ಆಯ್ಕೆಗಳ ವಿರುದ್ಧ ಜನತೆ ಧ್ವನಿ ಎತ್ತಬೇಕಿದೆ.

ಧನದ ಮದ

ಇಲ್ಲಿ ತುತ್ತನು ತಿಂದು ಮತ್ತೆಲ್ಲೊ ಹೋಗಿ
ತಿಂದುದನು ಮರೆಯುತ್ತ ಮೆರೆಯುವರು ಬೇಗ
ಇಂಥವರ ಹಳಿವುದಕೆ ಹೋಗಲೇ ಬಿಡಿ
ಅದು ಅವರ ತಪ್ಪಲ್ಲ ಧನದ ಮದ ನೋಡಿ.

ತ್ಯಾಗ-ಭೋಗ

ದಾಸ್ಯತೆಯನು ತೊಲಗಿಸಲು ಸೆಣಸಾಟ ಮಾಡಿ
ತ್ಯಾಗವನು ಗೈದವರು ಇಂದಿಲ್ಲ ನೋಡಿ
ಆ ತ್ಯಾಗ ಕುಲುಮೆಯೊಳು ಸರಿದವರು ಹಿಂದೆ
ಅಧಿಕಾರ ಭೋಗವನು ಉಣ್ಣುವರು ಇಂದೆ.

- ವಿಡಂಬಾರಿ

ಅಂಗನವಾಡಿ ಕಾರ್ಯಕರ್ತರಿಗೆ ಅಘಾತ ತಂದಿರುವ ಆದೇಶ!

ಅಂಗನವಾಡಿ ಕೇಂದ್ರಗಳನ್ನು ಗ್ರಾಮಪಂಚಾಯತ್‌ಗಳಿಗೆ ಒಪ್ಪಿಸಲು ಹೊಸ ಸರ್ಕಾರದ ಒಪ್ಪಿಗೆಯನ್ನೂ ಕೇಳದೇ ಸರ್ಕಾರದ ಇಲಾಖೆ ಆದೇಶ ಹೊರಡಿಸಿದೆ. ಈ ನಿರ್ಧಾರ ಹಲವಾರು ಗಂಭೀರವಾದ ವಾಸ್ತವಾಂಶಗಳನ್ನು ನಿರಾಕರಿಸಿದೆ. ಕರ್ನಾಟಕದಲ್ಲಿರುವ ವ್ಯವಸ್ಥೆ-ಅಧಿಕಾರ ಹಿಡಿದ ಪಾಳೆಗಾರಿ ಶಕ್ತಿಗಳ ಅಟ್ಟಹಾಸಅತಂತ್ರ ಸ್ಥಿತಿಯಲ್ಲಿರುವ ಅಂಗನವಾಡಿ ಕೆಲಸಗಾರರಿಗೆ ಏನನ್ನು ತಂದೀತು? ಅದೂ ಮಹಿಳಾ ಕಾರ್ಯಕರ್ತೆಯರೇ ಪ್ರಧಾನವಾಗಿರುವಾಗ....

1975ರಲ್ಲಿ ಪ್ರಾರಂಭವಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಇದುವರೆಗೂ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿದೆ. ಈ ಯೋಜನೆಯನ್ನು ಬಲಿಷ್ಠಪಡಿಸಬೇಕು ಹಾಗೂ ವಿಸ್ತರಣೆ ಮಾಡಬೇಕೆಂದು ದೇಶದ ಸರ್ವೋಚ್ಚ ನ್ಯಾಯಾಲಯ ಈಗಾಗಲೇ ತೀರ್ಪು ನೀಡಿದೆ. ಈ ಯೋಜನೆಯಲ್ಲಿ ಕೆಲಸ ಮಾಡುವ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕೂಡಾ. ಈ ಯೋಜನೆಯನ್ನು ಖಾಯಂ ಮಾಡಬೇಕೆಂದು 27 ವರ್ಷಗಳಿಂದ ಸರ್ಕಾರಗಳನ್ನು ಒತ್ತಾಯಿಸುತ್ತಾ ಬಂದಿದೆ.

26-05-2004 ರಂದು ಅಧಿಕೃತವಾಗಿ ಅಂಗನವಾಡಿ ನೌಕರರನ್ನು ಪಂಚಾಯ್ತಿಗಳ ವ್ಯಾಪ್ತಿಗೆ ತಂದಿರುವುದನ್ನು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ ತೀವ್ರವಾಗಿ ವಿರೋಧಿಸಿದೆ.

ಇದರಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಬಲಿಷ್ಠಗೊಳ್ಳುವ ಬದಲಿಗೆ ಇನ್ನು ಹೆಚ್ಚು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಯೋಜನೆಯನ್ನು ಅತ್ಯಂತ ಅಲ್ಪ ಗೌರವಧನದಲ್ಲಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿಕೊಂಡು ಬಂದ



ನೌಕರರನ್ನು ಮತ್ತಷ್ಟು ಶೋಷಣೆಗೊಳಿಸುವ ಪ್ರಯತ್ನ ಇದಾಗಿದೆ. ಅಂಗನವಾಡಿ ನೌಕರರು ಇದುವರೆಗೂ ಸಂಬಳದ ನಿಗದಿತ ದಿನಾಂಕವಿಲ್ಲದೆ 2-3 ತಿಂಗಳಿಗೊಮ್ಮೆ ಗೌರವದನ ಪಡೆಯುತ್ತಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿಯೇ 7 ತಿಂಗಳು ಗೌರವಧನ ನೀಡದ ಉದಾಹರಣೆಗಳಿವೆ. ಇಂತಹ ಸಮಯದಲ್ಲಿ ಪಂಚಾಯ್ತಿ ಒಪ್ಪಿಗೆ ಪತ್ರ ಪಡೆದರೆ ಮಾತ್ರ ಗೌರವಧನ ಎಂಬ ಅಂಶಗಳು ಹಾಗೂ ರಜೆಯನ್ನು ಪಡೆಯಲು ಪಂಚಾಯ್ತಿ ಅನುಮತಿ ತೆಗೆದುಕೊಳ್ಳಬೇಕೆಂಬ ಆದೇಶ ಎಷ್ಟರ ಮಟ್ಟಿಗೆ ಈ ನೌಕರರಿಗೆ ಅನುಕೂಲವಾಗುತ್ತದೆ ಎಂಬುದನ್ನು ಚಿಂತಿಸಬೇಕಾಗಿದೆ.

ಅಂಗನವಾಡಿ ಕೇಂದ್ರಗಳಿಗೆ ಈಗಾಗಲೇ ಯಾರೂ ಬೇಕಾದರೂ ನುಗ್ಗಿ ಹಲ್ಲೆ ಮಾಡಿ ಕೊಲೆ ಮಾಡಿದ ಪ್ರಕರಣಗಳು ಇನ್ನು ಜೀವಂತವಾಗಿವೆ. ಇನ್ನು ಮುಂದೆ ಇದು ಇನ್ನು ಹೆಚ್ಚಾಗಿ ದೈಹಿಕ ಮತ್ತು ಲೈಂಗಿಕ ದಬ್ಬಾಳಿಕೆಗಳು ನಡೆಯುವ ಸಾಧ್ಯತೆ ಇದೆ. ಹಾಜರಾತಿ ದೃಢೀಕರಣ ಒಪ್ಪಿಗೆ ಪತ್ರಕ್ಕೆ ಪಂಚಾಯ್ತಿ ಅನುಮತಿ ಪಡೆಯಬೇಕಾದರೆ ಇದು ಲಂಚ ಕೊಡುವವರಿಗೂ ಅವಕಾಶ

ಅಂಗನವಾಡಿ ಕೇಂದ್ರಗಳ ಗ್ರಾ.ಪಂಚಾಯಿತಿ ನೀಡದಂತೆ ಆಗ್ರಹ

ಮಾಡಿಕೊಡಬಹುದು.

ಅಂಗನವಾಡಿಗಳ ಮೇಲ್ವಿಚಾರಣೆ ನಡೆಸಲು ಈಗಾಗಲೇ 25 ಕೇಂದ್ರಗಳನ್ನೊಳಗೊಂಡ 1 ಸರ್ಕಲ್‌ಗೆ ಒಬ್ಬ ಮೇಲ್ವಿಚಾರಕಿಯನ್ನು ಸರ್ಕಾರ ನೇಮಿಸಿದೆ. ಇವರು ಈಗಾಗಲೇ ರಾಜ್ಯದಾದ್ಯಂತ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿದ್ದಾರೆ ಮತ್ತು ಅದಕ್ಕೆ ಬೇಕಾದಂತಹ ಆಡಳಿತಾತ್ಮಕ ವ್ಯವಸ್ಥೆಯೂ ಇದೆ.

ಗ್ರಾಮ ಪಂಚಾಯ್ತಿ ಹಲವಾರು ರಾಜಕೀಯ ಪಕ್ಷಗಳ ತಾಣವು ಆಗಿರುವುದರಿಂದ ನೌಕರರು ನಿಷ್ಠಾವಂತರಾಗಿ ಕೆಲಸ ನಿರ್ವಹಿಸಿದರೂ ರಾಜಕೀಯ ಕಾರಣಗಳಿಗೆ ಅವರನ್ನು ಕೆಲಸದಿಂದ ತೆಗೆಯುವ ಸಂಭವ ಮತ್ತು ದೃಢೀಕರಣ ಪತ್ರ ಕೊಡದ ಸಂದರ್ಭಗಳು ಇವೆ. ಆಗ ನೌಕರರು ಅದನ್ನು ಎದುರಿಸಲಿಕ್ಕೆ ನೆರವು ಇಲ್ಲ.

ಈ ಕಾರಣಗಳಿಗಾಗಿ ಅಂಗನವಾಡಿ ಕಾರ್ಯಕರ್ತೆಯರು ಈ ಆದೇಶವನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಮೊದಲು ಅಂಗನವಾಡಿ ನೌಕರರ ಕೆಲಸದ ಭದ್ರತೆಗೆ ಸಂಬಂಧಿಸಿದಂತೆ ಸೇವಾ ನಿಯಮಾವಳಿಗಳನ್ನು ರಚಿಸಬೇಕೆಂದೂ ಹಾಗೂ ಈ ಆದೇಶವನ್ನು ವಾಪಾಸ್ಸು ತೆಗೆಯಬೇಕೆಂದೂ ಒತ್ತಾಯಿಸಿದ್ದಾರೆ.

ಪ್ರತಿಭಟನೆಗೆ ಸಿದ್ಧ

ಅಂಗನವಾಡಿ ನೌಕರರ ಸಂಘವು ಈ ಆದೇಶವನ್ನು ತೀವ್ರವಾಗಿ ವಿರೋಧಿಸಿ ರಾಜ್ಯದಾದ್ಯಂತ ತಾಲೂಕು ಮಟ್ಟದ ಪ್ರತಿಭಟನಾ ಸಮಾವೇಶಗಳನ್ನು ಈಗಾಗಲೇ ನಡೆಸುತ್ತಿದೆ. ಜುಲೈನಲ್ಲಿ ಎಲ್ಲಾ ಜಿಲ್ಲಾ ಪಂಚಾಯ್ತಿಗಳ ಮುತ್ತಿಗೆ, ಆಗಸ್ಟ್‌ನಲ್ಲಿ ವಿಧಾನಸೌಧ ಮುತ್ತಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಆಗಲೂ ಸರ್ಕಾರ ಆದೇಶ ವಾಪಸ್ಸು ಪಡೆಯದಿದ್ದರೆ ನಿರಂತರ ಧರಣೆ -ಸತ್ಯಾಗ್ರಹವನ್ನು ರಾಜ್ಯಮಟ್ಟದಲ್ಲಿ ಕೈಗೊಳ್ಳಲಾಗುವುದೆಂದು ಎಚ್ಚರಿಸಿದೆ.

- ಎಸ್.ವರಲಕ್ಷ್ಮಿ

ಅಂಗನವಾಡಿಗಳನ್ನು ಯಾಕೆ ಒಪ್ಪಿಸಬಾರದು?


ಐಸಿಡಿಎಸ್ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿರುವುದರಿಂದ ಇದರ ಮೂಲ ರೂಪುರೇಶೆಗಳನ್ನು ಕೇಂದ್ರ ಸರ್ಕಾರವೇ ಮಾಡಬೇಕಾಗುತ್ತದೆ.

ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಬರುವ ಅನುದಾನವನ್ನು ಹಲವಾರು ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಸರ್ವಾನುಮತದಿಂದ ತೀರ್ಮಾನಿಸಿದರೆ ಬೇರೆ ಯೋಜನೆಗಳಿಗೆ ಉಪಯೋಗಿಸಬಹುದು. ಆಗ ನಿಜವಾದ ಫಲಾನುಭವಿಗಳಿಗೆ ಇದರ ಉಪಯೋಗ ಸಿಗುವುದಿಲ್ಲ.

ಅಂಗನವಾಡಿ ನೌಕರರು ಯಾವುದೇ ಪಂಚಾಯಿತಿ ಸದಸ್ಯರ ವಿಷಯದಲ್ಲಿ ಚಕಾರವೆತ್ತಿದರೆ ಅಥವಾ ಅವರ ಹಿತಾಸಕ್ತಿಗಳಿಗೆ ಅನುಗುಣವಾಗಿ ನಡೆದುಕೊಳ್ಳದಿದ್ದರೆ ಅವರು ಕೂಡಲೇ ಈ ಮಹಿಳೆಯರನ್ನು ಕೆಲಸದ ಭದ್ರತೆಯಲ್ಲದಿರುವುದರಿಂದ ಕೆಲಸದಿಂದ ತೆಗೆಯಬಹುದು ಹಾಗೂ ಬೇಕೆನಿಸಿದವರಿಗೆ ಕೆಲಸ ಕೊಡಿಸಲು ಇರುವ ನೌಕರರಿಗೆ ಕಿರುಕುಳ ಕೊಡುವುದು ಈಗಾಗಲೇ ನಡೆಯುತ್ತಿದೆ. ಇದು ಇನ್ನು ಮುಂದೆ ಹೆಚ್ಚಾಗುತ್ತದೆ. ಉದಾಹರಣೆಗೆ ಲಿಂಗಸುಗೂರು ತಾಲೂಕಿನ ಲಕ್ಷ್ಮಿಬಾಯಿ, ಸಿಂಧಗಿ ತಾಲೂಕಿನ ಅಯ್ಯಮ್ಮ ಇ.ಸಿಂಧಗಿ, ಮತ್ತು ಗುಬ್ಬಿ ತಾಲೂಕಿನಲ್ಲಿಯೂ ಹೀಗೆ ನಡೆದಿದೆ.

ಅಂಗನವಾಡಿ ನೌಕರರ ಮೇಲೆ ಈಗಾಗಲೇ ಹಲವಾರು ರೀತಿಯ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರದ ಪ್ರಯತ್ನಗಳು ನಡೆಯುತ್ತಿದ್ದು ಇನ್ನು ಮೇಲೆ ಇನ್ನೂ ಹೆಚ್ಚಾಗುತ್ತದೆ. ಉದಾಹರಣೆಗೆ ಮೊಳಕಾಲ್ಮೂರು ತಾಲೂಕಿನ ಖಾದರ್ ಬಿ. ಕಾರ್ಯಕರ್ತೆಯ ಮೇಲೆ ಜನವರಿ 1997 ರಲ್ಲಿ ನಡೆದ ಅತ್ಯಾಚಾರ ಪ್ರಯತ್ನ. ಆಳಂದ ತಾಲೂಕಿನ ಜವಳಗಾ.ಕೆ. ಕಾರ್ಯಕರ್ತೆ ಚಂದ್ರಕಲಾ ಎಂಬುವವರ ಮೇಲೆ ಜನವರಿ 1996ರಲ್ಲಿ ನಡೆದ ಸಾಮೂಹಿಕ ಅತ್ಯಾಚಾರ, ಚಾಮರಾಜ ನಗರ ತಾಲೂಕಿನ ಕೊತ್ತಳವಾಡಿ ಗ್ರಾಮದ ಕಾರ್ಯಕರ್ತೆಯನ್ನು ಬೇರೆ ಕಡೆ ವರ್ಗ ಮಾಡಿಸಬೇಕೆಂದು ಒತ್ತಾಯಿಸಿ ಸ್ಥಳೀಯರು ಆಕೆಯ ಮೇಲೆ ಅಪಪ್ರಚಾರ ಮಾಡಿದ್ದರಿಂದ ಅವಮಾನವನ್ನು ಸಹಿಸದೆ ಒಆಗಸ್ಟ್ 1996 ರಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಜನವರಿ 4 ರಂದು ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿ ಕಾರ್ಯಕರ್ತೆ ಮನೆ ಭೇಟಿಗೆ ಹೋದ ಸಂದರ್ಭದಲ್ಲಿ ಹಲ್ಲೆ, ಬೆಳಗಾಂ ಜಿಲ್ಲೆಯ ರಾಯಭಾಗ್ ತಾಲೂಕಿನ ಸವಸುದ್ದಿ ಗ್ರಾಮದ ಕಾರ್ಯಕರ್ತೆ ಕೆಲಸ ಮುಗಿಸಿ ಬರುತ್ತಿದ್ದಾಗ ನಡೆದ ಅತ್ಯಾಚಾರ, ಹೊಸಪೇಟೆ ತಾಲೂಕಿನ ಪ್ರೇಮಬಾಯಿ ಕಾರ್ಯಕರ್ತೆ ಕೆಲಸ ನಿರ್ವಹಿಸುತ್ತಿದ್ದಾಗ ಕೇಂದ್ರದಲ್ಲಿಯೇ ನಡೆದ ಹಲ್ಲೆ. ಕೊಪ್ಪಳದ ಮಳ್ಳಖೇರಿಯ ಕಾರ್ಯಕರ್ತೆ ಕೇಂದ್ರದಲ್ಲೇ ಕೊಲೆ, ದೊಡ್ಡಬಳ್ಳಾಪುರದಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯರು ಕಾರ್ಯಕರ್ತೆಗೆ ಚಪ್ಪಲಿ ಮತ್ತು ಪೊರಕೆಯಿಂದ ಹೊಡೆದದ್ದು.

ಅಂಗನವಾಡಿ ಕೇಂದ್ರಗಳಿಗೆ ಸೌದೆ ಹಣ ಕೊಡಬೇಕೆಂದು ಗ್ರಾಮ ಪಂಚಾಯಿತಿಗಳಿಗೆ ಸೂಚನೆ ಇದ್ದರೂ ಶೇ.90 ಭಾಗ ಜಾರಿಯಾಗದೆ 1998ರಲ್ಲಿ ಜಿಲ್ಲಾ ಪಂಚಾಯತಿಗಳಿಂದ ನೇರವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಕೊಡಲು ನಿರ್ದೇಶನವಾಗಿದೆ. ಇಷ್ಟು ಸಣ್ಣ ಮೊತ್ತವನ್ನು ಭರಿಸಲು ಅಥವಾ ವ್ಯವಸ್ಥೆ ಮಾಡಲು ಸಾಧ್ಯವಾಗದ ಗ್ರಾಮ ಪಂಚಾಯಿತಿಗಳು ಐಸಿಡಿಎಸ್ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದೇ?



ಸರ್ಕಾರಿ ಆದೇಶ



ವೃತ್ತಿ ಶಿಕ್ಷಣ ಶುಲ್ಕದ ತೀವ್ರ ಹೆಚ್ಚಳವನ್ನು ಪ್ರತಿಭಟಿಸಿ ಸಿಪಿಐ(ಎಂ) ಕಾರ್ಯಕರ್ತರು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು.

ರಕ್ಕಸರು

ಬೆಂಗ್ಳೂರು ದಿಲ್ಲಿಯೊಳು ಮಾತ್ರವೇ ಹಿಂದೆ
ರಕ್ಕಸರ ಸಂತಾನ ಇದ್ದುದನು ಕಂಡೆ
ಈಗಿತ್ತ ನಗರ ಸಭೆ ಪಂಚಾಯ್ತಿಯಲ್ಲೂ
ಉಪಟಳವು ಹೆಚ್ಚಾಗಿ ಊರೆಲ್ಲ ಗುಲ್ಲು.

ವಿಡಂಬಾರಿ

ಜನಾದೇಶ - ಸಮಾನ ಕನಿಷ್ಟ ಕಾರ್ಯಕ್ರಮ ಮತ್ತು ಎಡಶಕ್ತಿಗಳು



ಬಹಳಷ್ಟು ಸಂಪಾದಕೀಯಗಳು ಮತ್ತು ಅಂಕಣಕಾರರು ಮನಮೋಹನಸಿಂಗ್ ಸರ್ಕಾರದ ಸಮಾನ ಕನಿಷ್ಠ ಕಾರ್ಯಕ್ರಮಕ್ಕೆ (ಸಿಎಂಪಿ) ಎಡಶಕ್ತಿಗಳ ಅಂಕಿತ ಗುರುತಿಸುವಲ್ಲಿ ತಲ್ಲೀನವಾಗಿರುವುದು ಆಶ್ಚರ್ಯವೇನಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ತನ್ನ ಸಂಪಾದಕೀಯದಲ್ಲಿ "ಅಗೋಚರ ಕೈ" (ಎಡ ಎಂದು ಓದುವುದು) ಸರ್ಕಾರಕ್ಕೆ "ಮಾರ್ಗದರ್ಶನ" (ತೋಳ ತಿರುಚುವ) ಮಾಡುತ್ತಿದೆ ಎಂಬ ಮಾತನಾಡಿದೆ. ಸಂಕ್ಷಿಪ್ತವಾಗಿ ಹಣಕಾಸು ಬಂಡವಾಳಶಾಹಿಯ ಕೂಗುಗಳನ್ನು ಪ್ರತಿಧ್ವನಿಸುತ್ತಿರುವ ಅವರ ಸಂಕಟವೆಂದರೆ, ಪ್ರಸಕ್ತ ಸರ್ಕಾರ ನಿರ್ಲಕ್ಷಿಸಲಾರದಷ್ಟು ಶಕ್ತಿಯಾಗಿ ಎಡಶಕ್ತಿಗಳು ಹೊರಹೊಮ್ಮಿರುವುದಾಗಿದೆ.

ವಾಸ್ತವಾಂಶವನ್ನು ಸ್ಪಷ್ಟವಾಗಿ ಎದುರಿಸಬೇಕಿದೆ. ಲೋಕಸಭೆಯಲ್ಲಿ ಎಡಶಕ್ತಿಗಳ 61 ಸದಸ್ಯರೊಂದಿಗೆ ಕಾಂಗ್ರೆಸ್ ಮತ್ತದರ ಚುನಾವಣಾಪೂರ್ವ ಮಿತ್ರರು ಸೇರಿ ಸದನದಲ್ಲಿ ಸ್ಪಷ್ಟ ಬಹುಮತ ಹೊಂದಿವೆ. ಕೇಂದ್ರದಲ್ಲಿ ಪರ್ಯಾಯ ಜಾತ್ಯಾತೀತ ಸರ್ಕಾರ ಸ್ಥಾಪಿಸುವ ಭರವಸೆಯನ್ನು ಎಡಪಕ್ಷಗಳ ಬೆಂಬಲ ವಿಲ್ಲದೆ ಸಾಧಿಸಲಾಗದು. ಪ್ರತಿಫಲವಾಗಿ ಎಡಶಕ್ತಿಗಳು ತಮ್ಮ ಪಾಲನ್ನು ಪಡೆಯುವುದ ರೊಂದಿಗೆ, ಜವಾಬ್ದಾರಿಯುತವಾಗಿ ಜನಾದೇಶ ವನ್ನು ಸಾಧ್ಯವಾದಷ್ಟು ಗರಿಷ್ಠ ಪ್ರಮಾಣದಲ್ಲಿ ಪ್ರತಿಫಲಿಸುವ ಸಮಾನ ಕನಿಷ್ಠ ಕಾರ್ಯಕ್ರಮಕ್ಕಾಗಿ ಶ್ರಮಿಸುವುದು.

ತಾವು ಅನುಸರಿಸಿದ ನೀತಿಗಳ ಬದಲಾವಣೆಯನ್ನು ಜನತೆ ಬಯಸಿದರೆಂಬುದನ್ನು ಸ್ವೀಕರಿಸಲು ಒಲ್ಲದ ಆರ್.ಎಸ್.ಎಸ್/ ಬಿಜೆಪಿ/ ಎನ್.ಡಿ.ಎ, 2004ರ ಜನಾದೇಶ 'ಛಿದ್ರವಾದದ್ದು' ಎಂಬ ಸತ್ಯವಲ್ಲದ ಪ್ರತಿಪಾದನೆಯನ್ನು ಮುಂದುವರಿಸಿವೆ. **ಬದಲಾವಣೆ ಬಯಸಿದ ಜನತೆಯ ಆಶಯದಲ್ಲಿ ಸ್ಪಷ್ಟವಾದ ಮೂರು ಪ್ರಧಾನ ಅಂಶಗಳಿವೆ. ಮೊದಲನೆಯದಾಗಿ ಭಾರತ ಗಣರಾಜ್ಯದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗುಣ ಲಕ್ಷಣವನ್ನು ಸಂರಕ್ಷಿಸುವುದು, ಹಾಗೂ ವಾಜಪೇಯಿ ಸರ್ಕಾರ ಮಾಡಿದ ಅನಾಹುತಗಳನ್ನು ಸರಿಪಡಿಸುವುದು.** ಎರಡನೆಯದಾಗಿ ಜನತೆಯ ಜೀವನವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಆರ್ಥಿಕ ಸುಧಾರಣೆಗಳನ್ನು ಪುನರ್ ರೂಪಿಸುವುದು. ಮೂರನೆಯದಾಗಿ ವಾಜಪೇಯಿ ಸರ್ಕಾರದಲ್ಲಿ ತೀಕ್ಷ್ಣವಾಗಿ ಹಾಗೂ ನಾಚಿಕೆಗೇಡಿನಿಂದ ಸವೆತ ಕಂಡಿದ್ದ ಆಡಳಿತದಲ್ಲಿನ ರಾಜಕೀಯ ನೈತಿಕತೆಯನ್ನು ಪುನರ್ ಸ್ಥಾಪಿಸುವುದು.

ಸಮಾನ ಕನಿಷ್ಠ ಕಾರ್ಯಕ್ರಮವು ಈ ಮೂರು ಒತ್ತಾಸೆಗಳನ್ನು ಪ್ರತಿಫಲಿಸುತ್ತದೆ. ಮೊದಲ ಹಾಗೂ ಮೂರನೇ ಅಂಶಗಳ ಬಗ್ಗೆ ಬಹಳಷ್ಟು ಜನ ಸಮ್ಮತಿಸುವಾಗಲೆ, ಆರ್ಥಿಕ ಸುಧಾರಣೆಗಳು ಒಳಗೊಂಡಿರುವ ಅಂಶಗಳ ಕುರಿತಂತೆ ಬಿನ್ನಾಭಿಪ್ರಾಯವಿದೆ. ಯಾವುದೇ ಆರ್ಥಿಕತೆಯಲ್ಲಾದರೂ ಬದಲಾಗುತ್ತಿರುವ ಸನ್ನಿವೇಶ ಹಾಗೂ ಬೆಳವಣಿಗೆಗಳ ಆಧಾರದಲ್ಲಿ ಸುಧಾರಣೆಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಇಲ್ಲಿನ ಪ್ರಶ್ನೆ ಸುಧಾರಣೆ ಪರವೋ ಅಥವಾ ವಿರುದ್ಧವೋ ಎಂಬುದಕ್ಕಿಂತ ಸುಧಾರಣೆ ಒಳಗೊಂಡಿರುವ ಅಂಶಗಳೇನು? ಎಂಬುದಾಗಿದೆ. ಕಳೆದ 6 ವರ್ಷಗಳಲ್ಲಿ ಲಾಭಕೋರ ಬಂಡವಾಳಶಾಹಿಯನ್ನು ಸಲಹುವ ನಿಟ್ಟಿನಲ್ಲಿ ಇಡೀ ಸುಧಾರಣಾ ಪ್ರಕ್ರಿಯೆಯನ್ನು ವಾಜಪೇಯಿ ಸರ್ಕಾರ ವಿರೂಪಗೊಳಿಸಿತ್ತು. ಲಾಭಕಾರಕ ಸಾರ್ವಜನಿಕ ಆಸ್ತಿಯನ್ನು ಅರುಕಾಸಿಗೆ ಮೂರು ಕಾಸಿಗೆ ಮಾರಲಾಯಿತು. ಶ್ರೀಮಂತರಿಗೆ ಸಬ್ಸಿಡಿ ಎಂಬುದು ದಿನಸಿತ್ಯದ ಮಾತಾಗಿತ್ತು. ವಿಶಾಲ ಜನಸಮುದಾಯದ ಹಿತಾಸಕ್ತಿ ಬಲಿಕೊಟ್ಟು ಈ ಎಲ್ಲವನ್ನು ಮಾಡಲಾಯಿತು. ಹಸಿವಿನ ಸಾವು ಮತ್ತು ಸಂಕಷ್ಟದ ಆತ್ಮಹತ್ಯೆಗಳ ಮೂಲಕ ಇದು ಪ್ರತಿಫಲನವಾಯಿತು. ಜನಾದೇಶದ ನಿಜಾರ್ಥವೆಂದರೆ (ಪ್ರಾಥಮಿಕವಾಗಿ ಜನತೆಯ ಕಲ್ಯಾಣದ ದೃಷ್ಟಿಯಿಂದ) ಆರ್ಥಿಕ ಸುಧಾರಣೆಗಳ ಅಂಶಗಳಲ್ಲಿ ಸಮತೋಲನ ಕಾಪಾಡುವುದು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಂಡವಾಳಿಗರ ಲಾಭವು ಖಂಡಿತವಾಗಿಯೂ ಆರ್ಥಿಕ ಚಟುವಟಿಕೆಯ ಪ್ರಧಾನ ಉತ್ತೇಜಕ ಶಕ್ತಿಯಾಗಿಲಿದೆ ಮತ್ತು ಇದು ಅವಶ್ಯಕವಾಗಿ ಜನತೆಯ ಕಲ್ಯಾಣವನ್ನು ಉತ್ತಮಪಡಿಸುವ ಅಂಶಕ್ಕೆ ವ್ಯತಿರಿಕ್ತವಾಗಿರುತ್ತದೆ. ವಾಸ್ತವದಲ್ಲಿ ಇದು ಬಂಡವಾಳಶಾಹಿ ವ್ಯವಸ್ಥೆಯ ಮೂಲಭೂತ ವೈರುಧ್ಯ, ಆದ್ದರಿಂದ ಶೋಷಣೆ ರಹಿತ ಸಮಾಜವಾದಿ ಸಮಾಜದ ನಿರ್ಮಾಣ ಕ್ಕೋಸ್ಕರ ನಾವು ನಮ್ಮ ವರ್ಗ ಸಂಘರ್ಷವನ್ನು ಮುಂದುವರಿಸುತ್ತೇವೆ. ಹೇಗಾದರೂ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ವಿಶಾಲ ಜನಸಮುದಾಯದ ದಾರಿದ್ರ್ಯದ ಮೇಲೆ ಲಾಭಗಳಿಕೆ ಮುಂದುವರಿದಾಗ ಜನತೆಯ ಮೇಲೆ ಹೇರಲಾಗುವ ಆರ್ಥಿಕ ಹೊರೆಯ ವಿರುದ್ಧ ತಿರುಗಿಬೀಳುವುದು (ಪ್ರತಿರೋಧಿಸುವುದು) ಸಹಜ. ಜನಾದೇಶದಲ್ಲಿ ಹೊರಹೊಮ್ಮಿದ ಪ್ರಮುಖ ಅಂಶಗಳಲ್ಲಿ ಇದೂ ಸಹಾ ಒಂದು.

ಸೀತಾರಾಂ ಯೆಚೂರಿ


ಜನಾದೇಶಕ್ಕೆ ಅನುಗುಣವಾಗಿ ಸಮಾನ ಕನಿಷ್ಠ ಕಾರ್ಯಕ್ರಮವು, ಜನತೆಯ ಕಲ್ಯಾಣವನ್ನು ರಕ್ಷಿಸುವ - ಮುಂದುವರಿಸುವ ಹಾಗೂ ಆರ್ಥಿಕ ಸುಧಾರಣೆಗಳ ಒತ್ತಾಸೆಯನ್ನು ಅದಕ್ಕನುಗುಣವಾಗಿ ಬದಲಾಯಿಸುವ ನಡುವಿನ ಸಮತೋಲನವನ್ನು ಪುನರ್‌ಸ್ಥಾಪಿಸಬಯಸುತ್ತದೆ. ಇದನ್ನೇ ಎಡಶಕ್ತಿಗಳು ಖಾತ್ರಿಪಡಿಸಬಯಸುವುದು. ಆ ಮಟ್ಟಿಗೆ ಸಮಾನ ಕನಿಷ್ಠ ಕಾರ್ಯಕ್ರಮವನ್ನು ಜಾರಿಗೊಳಿಸುವುದನ್ನು ಎಡಶಕ್ತಿಗಳು ಒತ್ತಾಯಿಸಲಿವೆ. ಆದರೂ ಸಮಾಜವಾದಿ ಸಮಾಜದೆಡೆಗೆ ಮುಂದಾಗುವುದು ಎಡಶಕ್ತಿಗಳ ಉದ್ದೇಶವಾಗಿರುವಾಗಲೆ, IMF ಉತ್ತೇಜಿತ ಆರ್ಥಿಕ ಸುಧಾರಣೆಗಳ ಮೂಲಭೂತ ಒತ್ತಾಸೆ ಬಂಡವಾಳಶಾಹಿ ಆರ್ಥಿಕತೆಯನ್ನು ಬಲಗೊಳಿಸುವುದಾಗಿದೆ. ಈ ಮೂಲಭೂತ ವೈರುಧ್ಯವು ಕಾರ್ಯನಿರ್ವಹಿಸಲಿವೆ. ಇಂತಹ ಪರಿಸ್ಥಿತಿಯಲ್ಲಿ ಸಹಜವಾಗಿ, ರಾಷ್ಟ್ರ ಹಾಗೂ ಜನತೆಯ ಹಿತದೃಷ್ಟಿಯಿಂದ ಕೋಮುವಾದಿ ಶಕ್ತಿಗಳಿಗೆ ಮರಳಿ ಅಧಿಕಾರಕ್ಕೆ ಬರಲು ಅವಕಾಶ ನೀಡದಂತೆ ಮತ್ತು ವಿಶಾಲ ಜನಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸುತ್ತಾ ಸಂಪೂರ್ಣ ಜವಾಬ್ದಾರಿಯೊಂದಿಗೆ ಪ್ರಸಕ್ತ ಸರ್ಕಾರವನ್ನು ಎಡ ಪಕ್ಷಗಳು ಬೆಂಬಲಿಸಬೇಕಾಗಿದೆ. ಸಿಪಿಐ(ಎಂ) ಹಾಗೂ ಎಡ ಶಕ್ತಿಗಳು ಈ ಪಾತ್ರವನ್ನು ವಹಿಸಬಯಸುತ್ತವೆ. ಇದು ಪ್ರಸ್ತುತ ಸರ್ಕಾರವನ್ನು ಎಚ್ಚರಿಸುವ ಕಾವಲುಗಾರನ ಪಾತ್ರವೇ ಹೊರತು ಅದರ ಅಡಿ ಆಳಿನ ಪಾತ್ರವಲ್ಲ.

ಕೇಂದ್ರ ಸರ್ಕಾರದ ಕಾರ್ಯಸೂಚಿಯಾಗಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ರೂಪುಗೊಂಡಿದೆ. ದೇಶದ ಜನತೆಯ ಆಶೋತ್ತರಗಳು, ಜನಾದೇಶ ಕಾಯುವಲ್ಲಿ ವಹಿಸಬೇಕಾದ ಎಚ್ಚರವೇನು? ಬದ್ಧತೆಯೇನು?

ಇಂತಹದರಲ್ಲಿ ಅಭದ್ರತೆಯ ಸಂಕೇತದ ಪ್ರಮಾಣವನ್ನು ನೋಡ ಬಯಸುವವರು ಈ ಹಿಂದಿನ ಸರ್ಕಾರಗಳಿಗೆ ಎಡಪಕ್ಷಗಳ ಬಾಹ್ಯಬೆಂಬಲದ ಇತಿಹಾಸವನ್ನು ನೋಡುವುದು ಒಳಿತು. 1977 ರ ಮುರಾರ್ಜಿ ದೇಸಾಯಿ ಸರ್ಕಾರದಿಂದ, 1989'ರ ವಿ.ಪಿ.ಸಿಂಗ್ ಸರ್ಕಾರ, 1996'ರ ದೇವೇಗೌಡ ಸರ್ಕಾರ, 1998'ರ ಐ.ಕೆ.ಗುಜ್ರಾಲ್ ಸರ್ಕಾರಗಳಿಗೆ ಎಡಪಕ್ಷಗಳು ನೀಡಿದ ಬಾಹ್ಯ ಬೆಂಬಲ ಅಬಾಧಿತವಾಗಿ ಉಳಿದಿತ್ತು. ಆ ಸರ್ಕಾರಗಳು ಉರುಳಿದ್ದು ಇತರರು ಆ ಸರ್ಕಾರಗಳಿಗೆ ನೀಡಿದ್ದ ತಮ್ಮ ಬೆಂಬಲವನ್ನು ಹಿಂದೆ ಪಡೆದಿದ್ದರಿಂದ ಹಾಗಾಗಿ ಸರ್ಕಾರದ ಸುಭದ್ರತೆ ಕುರಿತಂತೆ ಎಡಪಕ್ಷಗಳ ಬೆಂಬಲ ಕುರಿತು ಚಿಂತಿಸುವ ಅಗತ್ಯವಿಲ್ಲ. ಅಂತಿಮವಾಗಿ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ಕೆಳಗಿಳಿಸಿ ಜನತೆ ನಿಟ್ಟುಸಿರು ಬಿಡುತ್ತಿದ್ದಾರೆ ಎಂಬುದನ್ನು ಸದಾ ಗಮನದಲ್ಲಿರಿಸಬೇಕಾಗಿದೆ. **1977 ರಲ್ಲಿ ಸರ್ವಾಧಿಕಾರಿ ತುರ್ತು ಪರಿಸ್ಥಿತಿ ಆಳ್ವಿಕೆಯನ್ನು ಸೋಲಿಸಿದಾಗ ಜನತೆ ಬಿಟ್ಟ ನಿಟ್ಟುಸಿರಿಗೆ ಬಹುತೇಕ ಸಮಾನಾಂತರವಾಗಿ ಪ್ರಸಕ್ತ ಪರಿಸ್ಥಿತಿ ಇದೆ. ಆ ಸಂದರ್ಭದಲ್ಲಿ ಆಧುನಿಕ ಭಾರತದ ನಿರ್ಮಾಣಕ್ಕಾಗಿ ರಾಜಿರಹಿತವಾಗಿ ಪ್ರಜಾಸತ್ತೆಯ ರಕ್ಷಣೆಗೆ ಜನತೆ ಮುಂದಾದರು.** ಇಂದಿನ 2004 ರಲ್ಲಿ ಆಧುನಿಕ ಭಾರತದ ಅಸ್ತಿತ್ವ ಹಾಗೂ ಅಭಿವೃದ್ಧಿಗಾಗಿ ಜಾತ್ಯಾತೀತತೆಯ ರಕ್ಷಣೆ ಜನತೆ ಮುಂದಾಗಿದ್ದಾರೆ. ಆಧುನಿಕ ಭಾರತ ಗಣರಾಜ್ಯದ ಮೂಲಭೂತ ಜಾತ್ಯಾತೀತ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ನಾಶಗೊಳಿಸುವ ಯಾವುದೇ ಯತ್ನಕ್ಕೆ ಅನುಮತಿಸುವುದಿಲ್ಲ ಎಂಬ ಸಂಕಲ್ಪ ಹಾಗೂ ದೃಢತೆಯನ್ನು ಜನತೆ ಮೆರೆದಿದ್ದಾರೆ. ಭಾರತದ ಜನತೆಯು ವ್ಯಕ್ತಪಡಿಸಿರುವ ಈ ಆಶಯವನ್ನು ಸಮಾನ ಕನಿಷ್ಠ ಕಾರ್ಯಕ್ರಮ ಬಹುಮಟ್ಟಿಗೆ ಪ್ರತಿಫಲಿಸುತ್ತದೆ.

ಸೋಮನಾಥ ಚಟರ್ಜಿ ಮೊದಲ ಕಮ್ಯೂನಿಸ್ಟ್ ಸಭಾಧ್ಯಕ್ಷರು

ಸ್ವತಂತ್ರ ಭಾರತ ತನ್ನ 14 ನೇ ಲೋಕಸಭೆ ಒಬ್ಬ ಕಮ್ಯೂನಿಸ್ಟ್ ಸಭಾಧ್ಯಕ್ಷನನ್ನು ಪಡೆದಿದೆ. ಕಾಂಗ್ರೆಸ್ ಪಕ್ಷ ಸೋಮನಾಥ ಚಟರ್ಜಿಯವರನ್ನು ಲೋಕಸಭೆಯ ಅಧ್ಯಕ್ಷರಾಗಬೇಕೆಂಬ ಆಹ್ವಾನವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೊ ಸ್ವೀಕರಿಸಿ ತೀರ್ಮಾನಿಸಿತು. ಕೇಂದ್ರ ಸರ್ಕಾರದಲ್ಲಿ ಸೇರಬಾರದು ಎಂಬ ಪಕ್ಷದ ಹಿಂದಿನ ತೀರ್ಮಾನಕ್ಕೆ ಇದು ಯಾವ ರೀತಿಯಲ್ಲೂ ವಿರೋಧವಲ್ಲ. ಸಂಸದೀಯ ಪ್ರಜಾಸತ್ತೆಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಮೂರು ಅಂಗಗಳಿವೆ. ಸರ್ಕಾರವು ಕಾರ್ಯನಿರ್ವಹಣಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರೆ, ಅಧ್ಯಕ್ಷರು ಶಾಸಕಾಂಗದ ನೇತೃತ್ವ ವಹಿಸುತ್ತಾರೆ. ಸಿಪಿಎಂ ಮತ್ತು ಎಡಪಕ್ಷಗಳು ಚುನಾವಣೆಯಲ್ಲಿ ಭಾಗವಹಿಸಿ, ಅವುಗಳ ಸದಸ್ಯರು ಚುನಾಯಿತರಾಗಿರುವುದರಿಂದ ಈಗಾಗಲೇ ಅವುಗಳು, ಶಾಸಕಾಂಗದ ಭಾಗವಾಗಿವೆ. ಆದ್ದರಿಂದ, ಸಭಾಧ್ಯಕ್ಷರ ಪಾತ್ರ. ಕಾರ್ಯಾಂಗದ ಪಾತ್ರ ಮತ್ತು ಅಧಿಕಾರದ ನಡುವೆ ಯಾವ ರೀತಿಯ ಗೊಂದಲಕ್ಕೂ ಆಸ್ಪದವಿಲ್ಲ.



ಇದನ್ನು ಹೇಳುವಾಗಲೇ, ಸಂಸತ್ತು ಮತ್ತು ಶಾಸಕಾಂಗಗಳು ಆಳುವ ಮತ್ತು ವಿರೋಧ ಪಕ್ಷಗಳನ್ನು ಒಳಗೊಂಡಿರುತ್ತವೆ ಮತ್ತು ವಿರೋಧ ಪಕ್ಷದ ನಾಯಕನಿಗೆ ಸಂಪುಟ ದರ್ಜೆಯ ಮಂತ್ರಿಯ ಸ್ಥಾನಮಾನವಿರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ಸಂಸದೀಯ ಪ್ರಜಾಸತ್ತೆಯಲ್ಲಿ ಚುನಾವಣೆಗೆ ಸ್ಪರ್ಧಿಸಿದ ನಂತರ, ಎಲ್ಲಾ ರಾಜಕೀಯ ಪಕ್ಷಗಳು ಜನಾದೇಶವನ್ನು ಒಪ್ಪುತ್ತವೆ ಮತ್ತು ಅವರ ಜವಾಬ್ದಾರಿಗಳನ್ನು ಜನಾದೇಶದ ಪ್ರಕಾರ ನಿರ್ವಹಿಸುತ್ತವೆ ಎಂದು ಭಾವಿಸಲಾಗುತ್ತದೆ.


ಈ ಹಿನ್ನೆಲೆಯಲ್ಲಿ, ಸಂಸತ್ತಿನಲ್ಲಿ 5 ವರ್ಷಗಳ ಕಾಲ ಸಂಪೂರ್ಣವಾಗಿ ವಿರೋಧ ಪಕ್ಷವಾಗಿ ಕುಳಿತುಕೊಳ್ಳಲು ತಾನು ತಯಾರಿಲ್ಲ ಎಂಬ ವಾಜಪೇಯಿಯವರ ಹೇಳಿಕೆ ಆಶ್ಚರ್ಯಕರವಾಗಿದೆ. ಆರ್.ಎಸ್.ಎಸ್/ ಬಿಜೆಪಿ ಜನರ ಆದೇಶವನ್ನು ಅತ್ಯಂತ ತುಚ್ಛವಾಗಿ ಪರಿಗಣಿಸಿರುವುದು ವ್ಯಕ್ತವಾಗುತ್ತದೆ. ವಾಜಪೇಯಿಯವರು ಇಲ್ಲಿಯವರೆಗೆ ನೀಡುತ್ತಾ ಬಂದಿರುವ ನಾಟಕೀಯ ಪ್ರವಚನಗಳು ಏನೇ ಇರಲಿ; ಬಿಜೆಪಿ ಒಂದು ರಚನಾತ್ಮಕ ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸಲು ಸಿದ್ಧವಿಲ್ಲ ಎಂದೂ ಇದರಿಂದ ವ್ಯಕ್ತವಾಗುತ್ತದೆ. ಆರ್.ಎಸ್.ಎಸ್‌ನ ನೈಜ ಗುಣವನ್ನು ಬಲ್ಲವರಿಗೆ ಇದೇನು ಆಶ್ಚರ್ಯವನ್ನುಂಟು ಮಾಡಲಾರದು. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬುಡಮೇಲು ಮಾಡುವುದರ ಮೇಲೆಯೇ ಅವರ ಅಸ್ತಿತ್ವ ಅವಲಂಬಿಸಿದೆ. ಅವರು ಅದರ ಬದಲು ಆರ್.ಎಸ್.ಎಸ್ ಕಣ್ಣೋಟದ ಒಂದು ಫ್ಯಾಸಿಸ್ಟ್ 'ಹಿಂದೂ ರಾಷ್ಟ್ರ'ವನ್ನು ತರಲು ಬಯಸುತ್ತಿದ್ದಾರೆ.

14ನೇ ಲೋಕಸಭೆಯು ಭಾರತದ ಗಣತಂತ್ರವನ್ನು ರಕ್ಷಿಸುವವರ ಹಾಗೂ ಮುನ್ನಡೆಸುವವರ ಮತ್ತು ಇದನ್ನು ಬುಡಮೇಲು ಮಾಡುವವರ ನಡುವಿನ ರಾಜಕೀಯ ರಣಭೂಮಿಯಾಗಿ ಪರಿವರ್ತನೆಯಾಗುವ ಎಲ್ಲಾ ಸಾಧ್ಯತೆಗಳಿವೆ. ನಮ್ಮ ಚುನಾಯಿತ ಪ್ರತಿನಿಧಿಗಳು ಮಾತ್ರವಲ್ಲದೆ, ನಾವೆಲ್ಲರೂ, ಭಾರತದ ಎಲ್ಲಾ ದೇಶಪ್ರೇಮಿಗಳು ಈ ಒಂದು ಸಮರದಲ್ಲಿ ಭಾಗಿಯಾಗಲು ಸನ್ನದ್ಧರಾಗಬೇಕಿದೆ.

ಭಾಷಾವಾರು ರಾಜ್ಯಗ

ಸಂಯುಕ್ತ ಪ್ರಗತಿಪರ ಮೈತ್ರಿಕೂಟದ (ಯುಪಿಎ) ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ವಿವಾದಾತ್ಮಕ ಪ್ರಶ್ನೆಗಳಲ್ಲಿ ಒಂದೆಂದರೆ ಪ್ರತ್ಯೇಕ ತೆಲಂಗಾಣದ ರಚನೆ. ಎಲ್ಲರೂ ತಿಳಿದಿರುವಂತೆ ಎಡಪಕ್ಷಗಳು ಈಗಿರುವ ಭಾಷಾವಾರು ರಾಜ್ಯಗಳ ವಿಭಜನೆಗೆ ಒಪ್ಪಲಾರವು. ಈಗಿರುವ ಭಾಷಾವಾರು ಪ್ರಾಂತ್ಯಗಳು ಅಸ್ತಿತ್ವಕ್ಕೆ ಬಂದಿರುವುದೇ ದೀರ್ಘ ಹೋರಾಟಗಳ ನಂತರ. ಹಿಂದಿನ ಬಿಜೆಪಿ ನೇತೃತ್ವದ ಆಡಳಿತ ಮೂರು ಹೊಸ ರಾಜ್ಯಗಳನ್ನು ನಿರ್ಮಿಸಿದ ರೀತಿ ಈ ಭಾಷಾವಾರು ರಾಜ್ಯಗಳ ವಿಭಜನೆಯ ಬೇಡಿಕೆಗಳ ಬೆಂಕಿ ಹೊತ್ತಿಸಿದೆ. ಈಗ ಪ್ರತ್ಯೇಕ ತೆಲಂಗಾಣದ ಬೇಡಿಕೆಯನ್ನು ಪರಿಶೀಲಿಸಲಾಗುವುದು ಎಂಬ ಯುಪಿಎ ಭರವಸೆ ಒಂದು ಪ್ರತ್ಯೇಕ ವಿದರ್ಭಾ ಮತ್ತಿತರ ಬೇಡಿಕೆಗಳಿಗೆ ಇನ್ನಷ್ಟು ಕುಮ್ಮಕ್ಕು ನೀಡುತ್ತದೆ.

ಭಾಷಾವಾರು ರಾಜ್ಯಗಳ ವಿಚಾರ ನಮ್ಮ ಸ್ವಾತಂತ್ರ್ಯ ಹೋರಾಟಗಳಲ್ಲಿ ಮೂಡಿಬಂದ ವಿಚಾರ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ದೇಶದ ಹಲವಾರು ಭಾಗಗಳನ್ನು ವಶಪಡಿಸಿಕೊಂಡ ಬ್ರಿಟಿಷರು ಕೇವಲ ತಮ್ಮ ಅನುಕೂಲವನ್ನಷ್ಟೇ ಆಧರಿಸಿ ಒಂದು ಆಡಳಿತ ವ್ಯವಸ್ಥೆಯನ್ನು ನಿರ್ಮಿಸಿದರು. ಇದು ವಿವಿಧ ಭಾಷೆಗಳನ್ನಾಡುವ ಜನರಿಗೆ ಬಹಳ ತೊಂದರೆಗಳನ್ನುಂಟು ಮಾಡಿತು. ಏಕೆಂದರೆ ಇವುಗಳಲ್ಲಿ ಹೆಚ್ಚಿನ ಭಾಷೆಗಳು ಆದಾಗಲೇ ಬೆಳೆದಿದ್ದ ಭಾಷೆಗಳಾಗಿದ್ದವು. ಭಾಷೆ ಜನಗಳನ್ನು ಅವರ ದೈನಂದಿನ ಚಟುವಟಿಕೆಗಳಲ್ಲಿ ಪರಸ್ಪರ ಒಟ್ಟುಗೂಡಿಸುತ್ತದೆಯಾದ್ದರಿಂದ ಒಂದೇ ಭಾಷೆಯನ್ನಾಡುವ ಜನಗಳನ್ನು ಈ ರೀತಿ ಕೃತಕವಾಗಿ ಪ್ರತ್ಯೇಕಿಸಿದ್ದ ಅವರು ಒಟ್ಟುಗೂಡುವುದಕ್ಕೆ ಅಡ್ಡಿಯಾಯಿತು. ಇದು ಬ್ರಿಟಿಷ್ ಹಿತಾಸಕ್ತಿಗಳಿಗೆ ಅನುಕೂಲವಾಗಿಯೇ ಪರಿಣಮಿಸಿತು.



ಟಿಆರ್‌ಎಸ್‌ನ ಕೆ.ಚಂದ್ರಶೇಖರ್

ನಮ್ಮ ಸ್ವಾತಂತ್ರ್ಯ ಹೋರಾಟದ ಮುಖಂಡರು ಜನಗಳನ್ನು ಸಾಮ್ರಾಜ್ಯಶಾಹಿ-ವಿರೋಧಿ ಐಕ್ಯ ಹೋರಾಟಕ್ಕೆ ಸೆಳೆಯುವಲ್ಲಿ ಭಾಷಾವಾರು ನೀತಿಯ ಮಹತ್ವವನ್ನು ಮನಗಂಡರು. 1922 ರಷ್ಟು ಹಿಂದೆಯೇ ಕಾಂಗ್ರೆಸ್ ತನ್ನ ಶಾಖೆಗಳನ್ನು ಬ್ರಿಟಿಷ್ ಪ್ರೆಸಿಡೆನ್ಸಿಗಳು, ಪ್ರಾಂತ್ಯಗಳ ಆಧಾರದಲ್ಲಿ ಸಂಘಟಿಸದೆ ಭಾಷಾವಾರು ಗುಂಪುಗಳ ಆಧಾರದಲ್ಲಿ ಸಂಘಟಿಸಿತು. 1928 ರಲ್ಲಿ ಮೋತಿಲಾಲ್ ನೆಹರೂ ಅಧ್ಯಕ್ಷರು ಹಾಗೂ ಜವಹರಲಾಲ್ ನೆಹರೂ ಕಾರ್ಯದರ್ಶಿಯಾಗಿದ್ದ ನೆಹರೂ ಸಮಿತಿ ಸ್ವಾತಂತ್ರ್ಯದ ನಂತರ ಭಾರತವನ್ನು ಭಾಷಾವಾರು ಆಧಾರದಲ್ಲಿ ಮರುಸಂಘಟಿಸಬೇಕು ಎಂದು ಸ್ಪಷ್ಟವಾಗಿ ಹೇಳಿತು. ಈ ವರದಿಯ ಬೇರೆ ಕೆಲವು ಶಿಫಾರಸುಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಈ ವಿಚಾರವನ್ನು ಮಾತ್ರ ಆಗ ಎಲ್ಲಾ ಪ್ರಮುಖ ಪಕ್ಷಗಳು ಅನುಮೋದಿಸಿದವು.

ಆದರೆ ಸ್ವಾತಂತ್ರ್ಯಾನಂತರ ಬಂಡವಾಳಶಾಹಿ - ಭೂಮಾಲಕ ಆಡಳಿತ ಈ ಮಾತಿಗೆ ಬದ್ಧವಾಗಲಿಲ್ಲ. ಅದು ಭಾಷಾವಾರು ಪ್ರಾಂತ್ಯಗಳನ್ನು ರಚಿಸಲು ನಿರಾಕರಿಸಿತು. ಏಕೆಂದರೆ ಈಗ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಭಾರತದಲ್ಲಿ ನೆಲೆಸಿದ್ದ ವಿವಿಧ ದೇಶೀಯತೆಗಳ ಆಕಾಂಕ್ಷೆಗಳನ್ನು ಲೆಕ್ಕಿಸಲಿಲ್ಲ. ದೇಶದ ಸಂವಿಧಾನದಲ್ಲಿ ಒಂದು ಒಕ್ಕೂಟ ಸ್ವರೂಪ ವಿಚಾರ ಸೇರಿದ್ದರೂ ಇಂತಹ ಒಂದು ಒಕ್ಕೂಟದಲ್ಲಿ ವಿವಿಧ ದೇಶೀಯತೆಗಳ ಐಕ್ಯತೆಯನ್ನು ಅದು ಲೆಕ್ಕಿಸಲಿಲ್ಲ. ಅಲ್ಲಲ್ಲಿ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಹಿಂದಿನ ಬ್ರಿಟಿಷ್ ಪ್ರಾಂತ್ಯ ವ್ಯವಸ್ಥೆಯನ್ನೇ ಅದು ಹಾಗೆಯೇ ಉಳಿಸಿತು. ಒಂದು ವ್ಯತ್ಯಾಸವೆಂದರೆ ಅಖಿಲ ಭಾರತ ರಾಜ್ಯ ಜನಗಳ ಸಮ್ಮೇಳನ (All India Dtate Peoples Confernce) ಆರಂಭಿಸಿದ ಹೋರಾಟದ ಒತ್ತಡದಿಂದ ಅದು ಬ್ರಿಟಿಷರ ಕಾಲದ ಪ್ರಾಂತ್ಯಗಳನ್ನೇ ಮೂರು ಗುಂಪುಗಳಾಗಿ ಅಂದರೆ ಎ, ಬಿ ಮತ್ತು ಸಿ ರಾಜ್ಯಗಳೆಂದು ವಿಂಗಡಿಸಿತು. ಆಗಲೂ ಪೆಪ್ಸು (ಪಟಿಯಾಲ ಮತ್ತು ಪೂರ್ವ ಪಂಜಾಬ್ ಸಂಘ), ಹೈದರಾಬಾದ್, ತಿರುವಾಂಕೂರು, ಕೊಚ್ಚಿ ಮತ್ತು ಇತರ ಕೆಲವು ಸಂಸ್ಥಾನಗಳನ್ನು ಪ್ರತ್ಯೇಕವಾಗಿ ಉಳಿಸಲಾಯಿತು.

ಸಂಸ್ಥಾನಗಳ ವಿಲೀನ

ಭಾರತದಲ್ಲಿನ ರಾಜ-ಮಹಾರಾಜರುಗಳ ಸಂಸ್ಥಾನಗಳ ವಿಲೀನ ಅಂತಹ ದೊಡ್ಡ ಸಮಸ್ಯೆಯೇನೂ ಆಗಲಿಲ್ಲ. ಈ ಸುಮಾರು 560 ಸಂಸ್ಥಾನಗಳಲ್ಲಿ ಕೆಲವಂತೂ ಕೆಲವೇ ಮೈಲುಗಳಷ್ಟು ವಿಸ್ತೀರ್ಣ ಹೊಂದಿದ್ದವುಗಳು. ಈ ಸಂಸ್ಥಾನಗಳ ನಿರಂಕುಶ ಪ್ರಭುಗಳು ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಮನಗಂಡರು. ಅವರ ಜನಗಳ ಹೋರಾಟಗಳ ಒತ್ತಡವೂ ಇತ್ತು. ಆದ್ದರಿಂದ ಯಾವುದೇ ಪ್ರತಿರೋಧವಿಲ್ಲದೆ ಅವರು ತಮ್ಮ ರಾಜಧನವನ್ನು ಮುಂದುವರೆಸಬೇಕು ಎಂಬ ಶರತ್ತಿನ ಮೇಲೆ ಭಾರತೀಯ ಸಂಘದಲ್ಲಿ ವಿಲೀನಗೊಂಡರು. ಈ ರಾಜಧನವನ್ನು ನಂತರ 1969 ರಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ರದ್ದು ಮಾಡಲಾಯಿತು.

ಸಾಮ್ರಾಜ್ಯವಾದದ ಕುತಂತ್ರಗಳು

ಈ ಹಂತದಲ್ಲಿ ಮೂರು ರಾಜ್ಯಗಳು - ಹೈದರಾಬಾದ್, ಜುನಾಗಢ ಮತ್ತು ಕಾಶ್ಮೀರ - ಭಾರತದಲ್ಲಿ ವಿಲೀನಗೊಳ್ಳಲು ನಿರಾಕರಿಸಿದವು. **ಮೌಂಟ್‌ಬ್ಯಾಟನ್ ಅವಾರ್ಡಿನಲ್ಲಿ ಒಂದು ಕಿಡಿಗೇಡಿ ಅಂಶವಿತ್ತು.** ಬ್ರಿಟಿಷರು ಭಾರತ ಬಿಟ್ಟುಹೋದ ಮೇಲೆ, ಸಂಸ್ಥಾನಗಳು ರಾಜರುಗಳು ಭಾರತದೊಡನೆ ವಿಲನಗೊಳ್ಳಬಹುದು, ಪಾಕಿಸ್ತಾನದೊಡನೆ ವಿಲೀನಗೊಳ್ಳಬಹುದು ಅಥವಾ ಸ್ವತಂತ್ರವಾಗಿರಬಹುದು ಎಂದು ಹೇಳಲಾಗಿತ್ತು. ತಾವು ಕಾಲು ಕಿತ್ತ ಮೇಲೂ ಈ ಉಪಖಂಡದಲ್ಲಿ ಒಂದು ಕಾಲಿಟ್ಟಿರಲು ಬ್ರಿಟಿಷ್ ಸಾಮ್ರಾಜ್ಯಶಾಹಿ ಮಾಡಿದ ಚತುರ ತಂತ್ರ ಇದು. ಇವರು ಈ ಅಂಶದ ಪ್ರಯೋಜನ ಪಡೆಯಬಯಸಿದ್ದರು.

ಇವುಗಳಲ್ಲಿ ಹೈದರಾಬಾದ್ ಮತ್ತು ಕಾಶ್ಮೀರಗಳ ವಿಲೀನ ಕಷ್ಟಕರವಾಯಿತು. ಆಗ ಹೈದರಾಬಾದಿನ ನಿಜಾಮನ ವಿರುದ್ಧ ಕಮ್ಯುನಿಸ್ಟ್ ಪಕ್ಷ ಸಶಸ್ತ್ರ ಹೋರಾಟ ನಡೆಸಿತ್ತು. ಆ ಹೋರಾಟದ ಒಂದು ಬೇಡಿಕೆಯೆಂದರೆ ಹೈದರಾಬಾದ್ ಭಾರತದೊಡನೆ ವಿಲೀನಗೊಳ್ಳಬೇಕು ಎಂಬುದು. ಅಂತಿಮವಾಗಿ ನಿಜಾಮ ವಿಲೀನವನ್ನು ಒಪ್ಪಿಕೊಳ್ಳುವಂತೆ ಮಾಡುವ ಹೆಸರಿನಲ್ಲಿ ನೆಹರೂ ಆಡಳಿತ ಹೈದರಾಬಾದಿಗೆ ತನ್ನ ಪಡೆಗಳನ್ನು ಕಳಿಸಿತು. ಇದರ ಹಿಂದಿದ್ದ ಉದ್ದೇಶಗಳಲ್ಲಿ ಒಂದೆಂದರೆ ಕಮ್ಯುನಿಸ್ಟ್ ಪಕ್ಷ ಮತ್ತು ಆಂಧ್ರ ಮಹಾಸಭಾದ ಹೆಚ್ಚುತ್ತಿದ್ದ ಬಲವನ್ನು ಮುರಿಯುವುದು. ನಿಜಾಮ ತಲೆಬಾಗಿದ.

ಕಾಶ್ಮೀರದ ಜನತೆ ಭಾರತದೊಡನೆ ವಿಲೀನಗೊಳ್ಳ ಬಯಸಿದರೂ ಅಲ್ಲಿಯ ಮಹಾರಾಜ ಹರಿಸಿಂಗ್ ಪ್ರತ್ಯೇಕವಾಗಿರಬಯಸಿದ್ದ. ಆದರೆ ಅಲ್ಲಿನ ಘಟನೆಗಳಲ್ಲಿ ತೀವ್ರ ತಿರುವು ಬಂತು. ದೇಶ ವಿಭಜನೆಯಾದ ಕೂಡಲೇ ಹೊಸದಾಗಿ ನಿರ್ಮಾಣಗೊಂಡ ಪಾಕಿಸ್ತಾನದ ಆಳರಸರು ಕಾಶ್ಮೀರ ಕಣಿವೆಯೊಳಗೆ ಸಶಸ್ತ್ರ ಲೂಟಿಕೋರರನ್ನು ಕಳಿಸಿದರು. ಅವರು ತ್ವರಿತವಾಗಿ ಶ್ರೀನಗರದ ಸಮೀಪಕ್ಕೆ ಬಂದರು. ಕಾಶ್ಮೀರದಲ್ಲಿ ಮುಸ್ಲಿಮರು ಬಹುಸಂಖ್ಯಾತರು, ಆದ್ದರಿಂದ ಅದು ಪಾಕಿಸ್ತಾನಕ್ಕೆ ಸೇರಬೇಕು ಎಂಬುದು ಅವರು ನೀಡುವ ಕ್ಷುಲ್ಲಕ ಕಾರಣ. ಆದರೆ ನ್ಯಾಶನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ಕಾಶ್ಮೀರದ ಜನತೆ ಎದ್ದು ನಿಂತು ತಿಂಗಳಾನುಗಟ್ಟಲೆ ಆ ಲೂಟಿಕೋರರೊಡನೆ ಸೆಣಸಿದರು. ಒಂದೆಡೆ ಪಾಕ್ ಬೆಂಬಲಿತ ಲೂಟಿಕೋರರರು, ಇನ್ನೊಂದೆಡೆ ಜನತಾ ಆಂದೋಲನ ಇವುಗಳ ನಡುವೆ ಸಿಲುಕಿ ಕೊಂ

ಹರಕಿಶನ್ ಸಿಂಗ್ ಸುರ್ಜೀ

ಮಹಾರಾಜ ತಕ್ಷಣವೇ ನೆರವು ಬೇಕು ಎಂದು ನೆಹರೂ ಸರ್ಕಾರವನ್ನು ಕೇಳಿಕೊಂಡ. ಅದು ಕಾಶ್ಮೀರಕ್ಕೆ ತನ್ನ ಪಡೆಗಳನ್ನು ಕಳಿಸಿತು. ಲೂಟಿಕೋರರು ಹಿಂದೆ ನೂಕಲ್ಪಟ್ಟರು. ಆದರೆ ಅಷ್ಟರಲ್ಲೇ ಪಾಕಿಸ್ತಾನ ಕಾಶ್ಮೀರದ ಹಲವು ಭಾಗಗಳನ್ನು ಆಕ್ರಮಿಸಿಕೊಂಡಿತ್ತು - ಈಗಲೂ ಅವು ಅದರ ವಶದಲ್ಲೇ ಇವೆ. ಮಹಾರಾಜ ವಿಧಿಯಿಲ್ಲದೆ ಭಾರತದೊಡನೆ ವಿಲೀನದ ಸಂಧಿಗೆ ಸಹಿ ಹಾಕಬೇಕಾಯಿತು. ಧರ್ಮನಿರಪೇಕ್ಷ ಭಾರತದ ಒಂದು ಭಾಗವಾಗುವ ಕಾಶ್ಮೀರದ ಜನತೆಯ ಕನಸು ನನಸಾಯಿತು.



ವೀ

ಆ ಸಮಯದ ಇತಿಹಾಸದ ಒಂದು ಗಮನಾರ್ಹ ಸಂಗತಿಯೆಂದರೆ ಆಗ ಪ್ರಜಾಪರಿಷದ್ ಎಂಬ ಹೆಸರಿನಲ್ಲಿ ಕಾಶ್ಮೀರದಲ್ಲಿ ಸಕ್ರಿಯವಾಗಿದ್ದ ರಾಷ್ಟ್ರೀಯವಾದಿ ಎನಿಸಿಕೊಳ್ಳುವ ಆರ್‌ಎಸ್‌ಎಸ್ ಕಾಶ್ಮೀರವು ಸ್ವತಂತ್ರವಾಗಿರಬೇಕೆಂಬ ಮಹಾರಾಜರ ಆಟವನ್ನು ನಾಚಿಕೆಯಿಲ್ಲದೆ ಬೆಂಬಲಿಸುತ್ತಿತ್ತು. ಅಷ್ಟೇ ಏಕೆ, ಪ್ರಜಾ ಪರಿಷದ್ ಮಂದಿ ಧಾಳಿಕೋರರ ವಿರುದ್ಧ ಸಮರಕ್ಕೆ ನಿಲ್ಲಲಿಲ್ಲ, ಬದಲು ಕಾಶ್ಮೀರ ಭಾರತದೊಡನೆ ವಿಲೀನಗೊಳ್ಳಬೇಕು ಎಂದು ಪ್ರಯತ್ನಿಸುತ್ತಿದ್ದವರನ್ನು ಸಾಯುಸುತ್ತಿತ್ತು.

ಪ್ರಾದೇಶಿಕ ಹಿಂದುಳಿಕೆ ಮತ್ತು ವಿಭಜ

ಇವು ನಮ್ಮನ್ನು ಪ್ರಾದೇಶಿಕ ಹಿಂದುಳಿದ ಪ್ರಶ್ನೆಗೆ ತರುತ್ತವೆ. ಹಿಂದುಳಿಕೆಯ ಪ್ರಶ್ನೆಯನ್ನೆತ್ತಿ ಎಲ್ಲಾ ವಿಧದ ವಿಭಜನಕಾರೀ ಶಕ್ತಿಗಳು ಜನಗಳನ್ನು ಅಣಿನೆರೆಸಬಯಸುತ್ತವೆ. ಇಂದು ದೇಶದ ಕೆಲವು ರಾಜ್ಯಗಳು, ರಾಜ್ಯಗಳೊಳಗೆ ಕೆಲವು ಪ್ರದೇಶಗಳು ಬೇರೆಯವುಗಳಿಗಿಂತ ಹಿಂದುಳಿದಿದೆ. ಮುಂದುವರೆದ ರಾಜ್ಯಗಳು ಹಾಗೂ ಪ್ರದೇಶಗಳಲ್ಲೂ ಕೆಲವು ವಿಭಾಗಗಳು (ಪರಿಶಿಷ್ಟ ಜಾತಿ, ಬುಡಕಟ್ಟುಗಳು) ಇತರರಿಗಿಂತ ಹಿಂದುಳಿದಿವೆ.

ಈ ಅಸಮಾನ ಬೆಳವಣಿಗೆ ಬಂಡವಾಳ ಶಾಹಿ ಅಭಿವೃದ್ಧಿಯ ದಿವಾಳಿಕೋರ ದಾರಿಯ ಒಂದು ದುಷ್ಫಲ. ನಮ್ಮ ಬಂಡವಾಳಶಾಹಿ - ಭೂಮಾಲಕ ವ್ಯವಸ್ಥೆ ಇದನ್ನು ತೃಪ್ತಿಕರವಾಗಿ ಪರಿಹರಿಸಲು ಅಸಮರ್ಥವಾಗಿದೆ ಎಂಬುದು ಸ್ಪಷ್ಟ. ನಮ್ಮ ಸಾಮೂಹಿಕ ಜೀವನದ ಈ ಶಾಪಕ್ಕೆ ಒಂದ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವ ಆಸಕ್ತಿಯೂ ಬಂಡವಾಳಶಾಹಿ - ಭೂಮಾಲಕ ಪಕ್ಷಗಳಿಗಿಲ್ಲ. ಬದಲಾಗಿ ಅವು ಸತತ ಹಿಂದುಳಿಕೆಯಿಂದ ಉಂಟಾದ ಅಸಂತೃಪ್ತಿಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳಲು ಮುಂದಾಗುತ್ತವೆ. ಸ್ವಾತಂತ್ರ್ಯಾನಂತರದ ನಮ್ಮ ದೇಶದ ಇತಿಹಾಸದಲ್ಲಿ ಇಂತಹ ವಿಭಜನಕಾರಿ ರಾಜಕೀಯದ ಹಲವು ಉದಾಹರಣೆಗಳನ್ನು ಕಾಣುಸಿಗುತ್ತವೆ. ಭಾಷಾವಾರು ರಾಜ್ಯಗಳನ್ನು ಮುರಿಯುವ ಬೇಡಿಕೆ ಇಂತಹ ವಿಭಜನಕಾರಿ ರಾಜಕೀಯ ಒಂದು ಉದಾಹರಣೆ.

ಹಿಂದುಳಿಕೆಯನ್ನು ನಿವಾರಿಸಲು ಒಂದು ಆಮೂಲಾಗ್ರ ಪರಿಹಾರದ ತುರ್ತು ಅಗತ್ಯವಿದೆ. ನಮ್ಮ ಜನಗಳ ಹೋರಾಟದಲ್ಲಿನ ಐಕ್ಯತೆಯನ್ನು ರಕ್ಷಿಸಲು ಮತ್ತು ನಮ್ಮ ರಾಷ್ಟ್ರೀಯ ಐಕ್ಯತೆಯನ್ನು ಬಲಗೊಳಿಸಲು ಇದು ಅಗತ್ಯ ಎಂಬುದು ನಿಜವಾದರೂ ಭಾಷಾವಾರು ರಾಜ್ಯಗಳನ್ನು ತುಂಡರಿಸಿರುವುದರಿಂದ ಇದಕ್ಕೆ ಯಾವುದೇ ಪರಿಹಾರ ಸಿಗುವುದಿಲ್ಲ ಎಂಬುದು ಖಂಡಿತ. ಉತ್ತರಾಂಚಲ ಮತ್ತು ಝಾರ್ಖಂಡ್‌ನ್ನು ಈ ರೀತಿ ವಿಭಜಿಸಿದರೂ ಅಲ್ಲಿ ಯಾವುದೇ ಅಭಿವೃದ್ಧಿಯ ಲಕ್ಷಣಗಳು ಕಾಣದಿರುವುದು ಇದಕ್ಕೊಂದು ಉದಾಹರಣೆ. ಅಭಿವೃದ್ಧಿಯ ಬದಲು ಭೂಮಿ, ನೆಲಸಿಕೆ ಇತ್ಯಾದಿ ಪ್ರಶ್ನೆಗಳನ್ನೆತ್ತಿ ನಿಜವಾದ ನಿವಾಸಿಗಳ ಹಕ್ಕುಗಳನ್ನು ವಂಚಿಸುವಲ್ಲಿ ಈ ರಾಜ್ಯಗಳ ವಿಭಜನಕಾರೀ ಶಕ್ತಿಗಳು ಸಕ್ರಿಯವಾಗಿವೆ. ಝಾರ್ಖಂಡ್‌ನಲ್ಲಿ ಬಿಜೆಪಿ ಸರ್ಕಾರ ಛೋಟಾನಾಗಪುರ ಮತ್ತು ಸಂತಾಲ್ ಪರಗ

ವಿಭಜನೆ ಬೇಡ

ಭಾಷಾವಾರು ರಾಜ್ಯಗಳಿಗಾಗಿ ಹೋರಾಟ

ಆಗಲೂ ಕೂಡಾ ಭಾರತದ ಆಳರಸರು ದೇಶವನ್ನು ಭಾಷಾವಾರು ಆಧಾರದಲ್ಲಿ ಮರುಸಂಘಟಿಸಲು ನಿರಾಕರಿಸಿದರು. ಇದರಿಂದ ದೇಶದ ವಿವಿಧ ಭಾಗಗಳಲ್ಲಿ ಭಾರತದ ಭಾಷಾವಾರು ಪುನರ್ವಿಂಗಡಣೆಗಾಗಿ ಹೋರಾಟಗಳ ಹೊಸದೊಂದು ಅಲೆಯೇ ಎದ್ದುಬಂತು. ವಿಶಾಲಾಂಧ್ರ, ಐಕ್ಯ ಕೇರಳ ಮತ್ತು ಸಂಯುಕ್ತ ಮಹಾರಾಷ್ಟ್ರದ ಹೋರಾಟಗಳು ಈ ಅವಧಿಯ ಪ್ರಮುಖ ಹೋರಾಟಗಳು. ಈ ಹೋರಾಟಗಳ ನೈಜ ಸ್ವರೂಪವನ್ನು ಒಂದು ಉದಾಹರಣೆಯಿಂದ ತಿಳಿಯಬಹುದು. ಬ್ರಿಟಿಷರ ಕಾಲದಲ್ಲಿ ಮಲೆಯಾಳದ ಭಾಷಿಕ ಜನ ತಿರುವಾಂಕೂರು, ಕೊಚ್ಚಿ ಮತ್ತು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಹಂಚಿಹೋಗಿದ್ದರು. ಇದು ಒಂದು ಪ್ರತ್ಯೇಕ ದೇಶಿಯತೆಗಾಗಿ ಅವರ ಬೆಳವಣಿಗೆಯನ್ನು ಕುಂಠಿತಗೊಳಿಸಿತು. ಆದ್ದರಿಂದಲೇ ಐಕ್ಯ ಕೇರಳ ಎಂಬ ಘೋಷಣೆ ಬಂತು. ಇದೇ ರೀತಿ ಮರಾಠಿ ಮತ್ತು ಗುಜರಾತಿನ ಜನ ಬ್ರಿಟಿಷ್ ಆಳರಸರು ಸೃಷ್ಟಿಸುವ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಒಂದೇ ಗುಂಪಾಗಿ ಕರೆ ನೀಡಿತ್ತು.

ಬಲಿಷ್ಟ ಹೋರಾಟಗಳು ನಡೆದವು. ಕಮ್ಯುನಿಸ್ಟ್ ಪಕ್ಷ ಇವುಗಳಲ್ಲಿ ಕೆಲವು ಹೋರಾಟಗಳಿಗೆ ನೇತೃತ್ವ ನೀಡಿತು. ಎಕೆಜಿ, ಇಎಂಎಸ್ ಮತ್ತು ಅವರ ಸಂಗಾತಿಗಳು ಕೇರಳ ಸ್ಥಾಪನೆಯಲ್ಲಿ ಒಂದು ನೇತೃತ್ವದ ಪಾತ್ರ ವಹಿಸಿದರು. ಆಂಧ್ರ ಪ್ರದೇಶದ ಸ್ಥಾಪನೆಯಲ್ಲೂ ಪಿ.ಸುಂದರಯ್ಯ ಮುಂತಾದವರು ಅಷ್ಟೇ ಪ್ರಮುಖವಾದ ನೇತೃತ್ವ ನೀಡಿದರು. ಸಂಯುಕ್ತ ಮಹಾರಾಷ್ಟ್ರ ಆಂದೋಲನದಲ್ಲಿ ಎಸ್.ಎ. ಡಾಂಗೆ ಮತ್ತಿತರರು ಮುಂಚೂಣಿಯಲ್ಲಿದ್ದರು. ಉಜ್ವಲ ತೆಲಂಗಾಣ ಹೋರಾಟ 1947 ರ ಮೊದಲೇ ಆರಂಭವಾಗಿತ್ತು. ಹೈದರಾಬಾದ್ ಸಂಸ್ಥಾನ ಮತ್ತು ಮದ್ರಾಸ್ ಹಾಗೂ ಬಾಂಬೆ ಪ್ರೆಸಿಡೆನ್ಸಿಗಳಲ್ಲಿ ಹಂಚಿಹೋಗಿದ್ದ ತೆಲುಗು ಭಾಷಿಕ ಜನಗಳನ್ನು ಒಂದು ಪ್ರತ್ಯೇಕ ಘಟಕವಾಗಿ ಒಟ್ಟುಗೂಡಿಸುವುದು ಈ ಹೋರಾಟದ ಮಹತ್ವದ ಬೇಡಿಕೆಗಳಲ್ಲಿ ಒಂದು. ಸ್ವಾತಂತ್ರ್ಯನಂತರದ ಬದಲಾದ ಸನ್ನಿವೇಶದಲ್ಲಿ ಅಕ್ಟೋಬರ್ 1951 ರಲ್ಲಿ ತೆಲಂಗಾಣಾ ಹೋರಾಟವನ್ನು ಹಿಂತೆಗೆದುಕೊಂಡರೂ ಈ ಹೋರಾಟ ಪಟ್ಟು ಹಿಡಿದಿದ್ದ ನಿಜಾಮ ಭಾರತದೊಡನೆ ವಿಲೀನವಾಗುವಂತೆ ಮಾಡಿತಷ್ಟೇ ಅಲ್ಲ, ಭಾರತದ ಭಾಷಾವಾರು ಪುನರ್ವಿಂಗಡಣೆಯ ಪ್ರಶ್ನೆಯನ್ನು ದೇಶದ ಮುಂದೆ ಎಷ್ಟು ಪರಿಣಾಮಕಾರಿಯಾಗಿ ಇಟ್ಟಿತೆಂದರೆ, ಈ ಬೇಡಿಕೆಯನ್ನು ಉಪೇಕ್ಷಿಸುವುದು ಇನ್ನೂ ಸಾಧ್ಯವಿರಲಿಲ್ಲ. ಆಳರಸು ಈಗ ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಬೇಕಾಗಿ ಬಂತು. ಈ ಆಯೋಗದ ಶಿಫಾರಸಿನಂತೆ ಭಾಷಾವಾರು ರಾಜ್ಯಗಳು ರಚನೆಗೊಂಡವು. 1956 ರ ಈ ವೇಳೆಗೆ ಈ ಕೆಲಸ ಸುಮಾರಾಗಿ ಪೂರ್ಣಗೊಂಡಿತು.



...ರಾಟದಲ್ಲಿ ಸಶಸ್ತ್ರ ಪಡೆ

ಕೇರಳ, ಆಂಧ್ರ ಪ್ರದೇಶ, ಮಹಾರಾಷ್ಟ್ರದ ರಚನೆಗಾಗಿ ಕಮ್ಯುನಿಸ್ಟ್‌ರು ನಡೆಸಿದ ಹೋರಾಟಗಳು ಪಕ್ಷಕ್ಕೆ ಭಾರಿ ಪ್ರತಿಷ್ಠೆ ತಂದಿವೆ. 1952 ರ ಲೋಕಸಭಾ ಚುನಾವಣೆಗಳಾದಾಗ ಈ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷ ಹಲವು ಸ್ಥಾನಗಳನ್ನು ಗೆದ್ದಿತು. ಅದೇ ರೀತಿ ಹೀಗೆ ಹೊಸದಾಗಿ ರಚನೆಗೊಂಡ ರಾಜ್ಯಗಳು 1957 ರಲ್ಲಿ ವಿಧಾನಸಭಾ ಚುನಾವಣೆಗಳನ್ನು ನಡೆಸಿದಾಗ ಪಕ್ಷ ಮಹತ್ವದ ಪ್ರಯೋಜನ ಗಳಿಸಿತು. ಆ ವರ್ಷ ಕಾಮ್ರೇಡ್ ಇಎಂಎಸ್ ನೇತೃತ್ವದ ಒಂದು ಕಮ್ಯುನಿಸ್ಟ್ ಸರ್ಕಾರ ಕೇರಳದಲ್ಲಿ ಅಧಿಕಾರಕ್ಕೆ ಬಂತು.

ಸಂಘ ಪರಿವಾರದ ಆಟ

ಹೀಗೆ ಈಗಿರುವ ಭಾಷಾವಾರು ರಾಜ್ಯಗಳು ಅಪಾರ ತ್ಯಾಗಗಳಿಂದ ಗಳಿಸಿದವುಗಳು. ಉದಾಹರಣೆಗೆ, ಸಂಯುಕ್ತ ಮಹಾರಾಷ್ಟ್ರ ಚಳುವಳಿಯಲ್ಲಿ ಒಂದೇ ದಿನ ಪೊಲೀಸ್ ಗೋಲಿಬಾರಿನಲ್ಲಿ 36ಕ್ಕೂ ಹೆಚ್ಚು ಜೀವಗಳನ್ನು ಬಲಿತೆಗೆದುಕೊಳ್ಳಲಾಯಿತು. ಆದರೆ ಸ್ವತಂತ್ರ್ಯ ಹೋರಾಟದಲ್ಲಿ ಎಂದೂ ಭಾಗವಹಿಸದ ಆರ್‌ಎಸ್‌ಎಸ್ ಮತ್ತು ಅದರ ರಾಜಕೀಯ ವೇದಿಕೆ (ಆಗಿನ ಜನಸಂಘ, ಈಗಿನ ಬಿಜೆಪಿ) ಎಂದೂ ಜನಗಳ ಈ ಭಾಷಾ ಸ್ವಂತಿಕೆಯನ್ನು ಮಾನ್ಯ ಮಾಡಿಲ್ಲ. ಏಕೆಂದರೆ ಇದು ಅದರ ಏಕ ಘಟಕ ರಾಷ್ಟ್ರದ ಪರಿಕಲ್ಪನೆಗೆ ವಿರುದ್ಧವಾದದ್ದು. ಭಾರತ ವಿವಿಧತೆಯಲ್ಲಿ ಏಕತೆಗೆ ಹೆಸರರಾದದ್ದು. ಇದನ್ನು ಸಂಘ ಪರಿವಾರ ಎಂದೂ ಮಾನ್ಯ ಮಾಡಿಲ್ಲ. ನಮಗೆಲ್ಲಾ ಗೊತ್ತಿರುವಂತೆ ನಮ್ಮ ದೇಶ ಹಲವಾರು ಭಾಷೆಗಳು, ಧರ್ಮಗಳು, ಜನಾಂಗೀಯ ಗುಂಪುಗಳು, ಸಂಸ್ಕೃತಿಗಳು, ಹಬ್ಬಗಳು, ವೇಷಭೂಷಣಗಳು, ಆಹಾರ-ಪಾನೀಯಗಳು ಇತ್ಯಾದಿಗಳ ಒಂದು ದೇಶ. ಆದ್ದರಿಂದಲೇ ನಮ್ಮ ಸಂವಿಧಾನ ಕರ್ತೃಗಳು ಒಕ್ಕೂಟ ತತ್ವ ಮತ್ತು ಧರ್ಮನಿಪೇಕ್ಷತೆಯನ್ನು ನಮ್ಮ ರಾಜಕೀಯ ವ್ಯವಸ್ಥೆಯ ಸ್ತಂಭಗಳಾಗಿ ಮಾಡಿದರು.

ಆದರೆ ಸಂಘ ಪರಿವಾರಕ್ಕೆ ಇವೆಲ್ಲಾ ಶಾಪಗಳು. ಅದು ಈ ವೈವಿಧ್ಯತೆಯ ಮೇಲೆ ಒಂದು ಕೃತಕ ಐಕ್ಯತೆಯನ್ನು ಹೇರಬಯಸುತ್ತದೆ. ಇದರಿಂದ ಯಾವುದೇ ಜನವಿಭಾಗದ ಆಕಾಂಕ್ಷೆಗಳನ್ನು ಕೊಲ್ಲುವಂತಾಗಿದೆ. ಅದು ನಮ್ಮ ಐಕ್ಯತೆಗೆ ಎಂತಹ ಅಪಾಯ ಒಡ್ಡುತ್ತದೆ ಎಂಬುದು ಅದಕ್ಕೆ ಬೇಕಿಲ್ಲ. ಅರಿವು ಅದಕ್ಕಿಲ್ಲ. ಎಲ್ಲಾ ವಿಭಾಗಗಳ ಜನರಿಗೆ ಬೆಳೆಯಲು ಸಮಾನ ಅವಕಾಶ ದೊರೆತು, ತಾವೆಲ್ಲಾ ಒಂದು ಮಹಾನ್ ಸಮಷ್ಠಿಯ ಭಾಗಗಳು ಎಂಬ ಭಾವನೆ ಉಂಟಾದಾಗಲೇ ವೈವಿಧ್ಯತೆಯಲ್ಲಿ ಏಕತೆ ಬೆಳೆಯಲು ಸಾಧ್ಯ. ಸಂಘ ಪರಿವಾರದ ಹಿಂದುತ್ವ ರಾಷ್ಟ್ರೀಯ ಐಕ್ಯತೆಗೆ ಮರಣಾಂತಿಕವಾಗಬಲ್ಲದು. ಪಾಕಿಸ್ತಾನದಲ್ಲಿ ಪೂರ್ವಪಾಕಿಸ್ತಾನಗಳ ಜನಗಳ ಆಕಾಂಕ್ಷೆಗಳ ದಮನದಿಂದಾಗಿ ಬಾಂಗ್ಲಾದೇಶ ಜನ್ಮ ತಾಳಿದ ಅನುಭವದಿಂದ ಅವರಿನ್ನೂ ಪಾಠ ಕಲಿತಿಲ್ಲ.

ಆದ್ದರಿಂದ ಅಧಿಕಾರಕ್ಕೆ ಬಂದಾಗ ಬಿಜೆಪಿ ಭಾಷಾವಾರು ರಾಜ್ಯಗಳನ್ನು ಕಳಚಿ ಹಾಕಲು ಪ್ರಯತ್ನಿಸಿದರೆ ಆಶ್ಚರ್ಯವಿಲ್ಲ. ಇದಕ್ಕಾಗಿ ಅದೊಂದು ಸಂವಿಧಾನ ಪರಾಮರ್ಶೆ ಆಯೋಗವನ್ನು ನೇಮಿಸಿತು. ಬಿಜೆಪಿಯ ಈ ಆಟಕ್ಕೆ ಬಲವಾದ ಪ್ರತಿರೋಧ ಬಂತು ಎಂಬುದು ಬೇರೆ ಮಾತು. ತನ್ನ ಪ್ರಯತ್ನವನ್ನು ಸುಲಭಗೊಳಿಸಲು ಅದು ತನ್ನ ವಿಚಾರಕ್ಕೆ ಆಡಳಿತ ಅನುಕೂಲದ ವೇಷ ತೊಡಿಸಿತು. ಇದರ ವಾಸ್ತವಾರ್ಥವೆಂದರೆ ಇಡೀ ದೇಶವನ್ನು ಹತೋಟಿಯಲ್ಲಿಡುವ ಒಂದು ಸರ್ವಾಧಿಕಾರಿ ಕೇಂದ್ರವನ್ನು ನಿರ್ಮಿಸುವ ಅನುಕೂಲವಷ್ಟೆ. ಆಡಳಿತ ಅನುಕೂಲ ಭಾರತದ ಅಂಗವಾಗಿರುವ ವಿವಿಧ ಭಾಷಾ ಗುಂಪುಗಳ ಆಕಾಂಕ್ಷೆಗಳನ್ನು ಬಲಿಗೊಟ್ಟು ಬರುವ ಅನುಕೂಲ. ಸಣ್ಣ ರಾಜ್ಯಗಳಿದ್ದರೆ, ಜಾತಿ-ಧರ್ಮಗಳ ಹೆಸರಲ್ಲಿ ಜನಗಳನ್ನು ದಾರಿ ತಪ್ಪಿಸಿ ಅಧಿಕಾರಕ್ಕೆ ಬರಲು ಸುಲಭವಾಗುತ್ತದೆ ಎಂಬುದು ಬಿಜೆಪಿಯ ನಿರೀಕ್ಷೆ. ಸಂಘ ಪರಿವಾರದ ಈ ಆಟ ಸದ್ಯಕ್ಕೆ ವಿಫಲವಾದರೂ ಮತ್ತೆ ಅದು ಯಾವಾಗ ವಿಭಜನಕಾರೀ ಘೋಷಣೆಗಳನ್ನು ಎತ್ತಬಹುದು ಎಂದು ಹೇಳಲು ಸಾಧ್ಯವಿಲ್ಲ.

ದೀ ರಾಜಕಾರಣ

ಗೇಣಿದಾರ ಕಾಯ್ದೆಗಳನ್ನು ಕೊಲ್ಲಲು ಮುಂದಾಗಿದ್ದು, ಅದರಲ್ಲಿ ಅದು ಯಶಸ್ವಿಯಾದರೆ ಬುಡಕಟ್ಟು ಜನಗಳ ಹಿಂದುಳಿಕೆ ಇನ್ನಷ್ಟು ಹೆಚ್ಚಬಹುದಷ್ಟೇ. ಅದರಿಂದ ಅವರ ಅಸಂತೃಪ್ತಿ ವಿಪರೀತವಾಗಿ ಉಲ್ಬಣಗೊಳ್ಳಬಹುದು. ಈ ರಾಜ್ಯವನ್ನು ನಿರ್ಮಿಸಿದ್ದು ಬುಡಕಟ್ಟು ಜನಗಳ ಅಭಿವೃದ್ಧಿಯ ಹೆಸರಿನಲ್ಲಿ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. **ಭಾಷಾವಾರು ರಾಜ್ಯಗಳ ವಿಭಜನೆ ಸಮಸ್ಯೆಗಳನ್ನು ಹೆಚ್ಚಿಸಬಹುದೇ ಹೊರತು, ಅದನ್ನ ಪರಿಹರಿಸುವುದಿಲ್ಲ ಎಂಬುದು ಸ್ಪಷ್ಟ.**

ಆದರೆ ಕೆಲವು ಪಕ್ಷಗಳು ಪ್ರತ್ಯೇಕ ತೆಲಂಗಾಣ ಅಥವಾ ಪ್ರತ್ಯೇಕ ವಿದರ್ಭದ ಘೋಷಣೆಗಳನ್ನು ಬೆಂಬಲಿಸಲು ಆತುರವಾಗಿವೆ. ಇದರ ಹಿಂದಿರುವ ಅಪಾಯದ ಅರಿವು ಅವರಿಗಿದ್ದಂತಿಲ್ಲ. ಆಂಧ್ರಪ್ರದೇಶದಲ್ಲಿ, ಪ್ರತ್ಯೇಕ ತೆಲಂಗಾಣಾ ಕೇಳುವ ತೆಲಂಗಾಣ ರಾಷ್ಟ್ರ ಸಮಿತಿಯೊಂದಿಗೆ ಕಾಂಗ್ರೆಸ್ ಮೈತ್ರಿ ಹೊಂದಿದೆ. ಕಾಂಗ್ರೆಸ್ ಮಹಾರಾಷ್ಟ್ರದ ವಿಭಜನೆಗೆ ವಿರುದ್ಧವಾಗಿದ್ದರೂ ಒಂದೊಮ್ಮೆ ಈ ಪ್ರಶ್ನೆಯ ಮೇಲೆ ಅದು ಚಂಚಲತೆಯನ್ನು ಲಕ್ಷಣಗಳನ್ನು ತೋರಿತ್ತು.

ಸಿಪಿಐ(ಎಂ) ನಿಲುವು

ತೆಲಂಗಾಣಾ ಮತ್ತು ಇತರ ಪ್ರದೇಶಗಳ ಹಿಂದುಳಿಕೆಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವ ಅಗತ್ಯದ ಅರಿವು ಸಿಪಿಐ(ಎಂ)ನಲ್ಲಿರುವ ನಮಗಿದೆ. ಜತೆಗೆ ವಿಭಜನಕಾರೀ ಘೋಷಣೆಗಳ ಹಿಂದಿರುವ ಅಪಾಯದ ಅರಿವೂ ನಮಗಿದೆ. ಆದ್ದರಿಂದಲೇ ಭಾಷಾವಾರು ರಾಜ್ಯಗಳ ರಕ್ಷಣೆ ಕುರಿತ ನೀತಿಬದ್ಧ ನಿಲುವನ್ನು ತ್ಯಜಿಸುವುದೆಂದರೆ ಕೆಲವು ತಾತ್ಕಲಿಕ ಪ್ರಯೋಜನಗಳಿಗಾಗಿ ಭವಿಷ್ಯದ ಹಿತಾಸಕ್ತಿಗಳನ್ನು ಕೊಂದುಹಾಕಿದಂತಾಗುತ್ತದೆ ಎಂದು ನಾವು ಹೇಳುತ್ತೇವೆ. ಭಾಷಾವಾರು ರಾಜ್ಯಗಳು ದೀರ್ಘ ಹೋರಾಟಗಳ ಫಲ, ಭಾರತದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಅದು ಅಗತ್ಯ. ಭಾಷಾವಾರು ರಾಜ್ಯಗಳನ್ನು ಕಾಯ್ದುಕೊಳ್ಳುವ ಅಗತ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ರಾಜ್ಯಗಳನ್ನು ವಿಭಜಿಸಿದರೆ ಒಕ್ಕೂಟ ವ್ಯವಸ್ಥೆಯಲ್ಲಿ ಅವು ತಮ್ಮಮ ಬಲವನ್ನು ಗಳಿಸಿಕೊಳ್ಳುವುದೂ ಖಂಡಿತ.

ಇದನ್ನು ಪರಿಗಣಿಸಿ ನಾವು ಸಿಪಿಐ(ಎಂ)ನವರು ರಾಜ್ಯಗಳಿಗೆ ಸ್ವಾಯತ್ತತೆ ಇರಬೇಕೆಂದಷ್ಟೇ ಅಲ್ಲ, ಈ ಸ್ವಾಯತ್ತತೆ ಕೆಳಗಿನ ಹಂತಗಳಿಗೂ ನಿಜವಾಗಿಯೂ ಇಳಿಯಬೇಕೆಂಬ ನಿಲುವು ತಳೆದಿದ್ದೇವೆ. ಯಾವ ರಾಜ್ಯಗಳಲ್ಲಿ ಹಿಂದುಳಿಕೆಯ ಸಮಸ್ಯೆ ತೀವ್ರವಾಗಿದೆಯೋ ಅಲ್ಲಿ ಸ್ವಾಯತ್ತ ಮಂಡಳಿಗಳನ್ನು ರಚಿಸಬೇಕು ಎಂದು ನಾವು ಪ್ರತಿಪಾದಿಸುತ್ತಾ ಬಂದಿದ್ದೇವೆ. ಅಷ್ಟೇ ಅಲ್ಲ, ತ್ರಿಪುರಾ ಮತ್ತು ಪಶ್ಚಿಮ ಬಂಗಾಳದಲ್ಲಿ ಇದನ್ನು ಆಚರಣೆಗೂ ತಂದಿದ್ದೇವೆ. ಬಹಳ ಹಿಂದೆ 1970 ರ ದಶಕದ ಕೊನೆಯಲ್ಲಿ ತ್ರಿಪುರಾದ ಎಡರಂಗದ ಸರ್ಕಾರ ಹಿಂದುಳಿದ ಬುಡಕಟ್ಟು ಪ್ರದೇಶಗಳಿಗೆ ಒಂದು ಸ್ವಾಯತ್ತ ಮಂಡಳಿಯನ್ನು ರಚಿಸಿತು. ಈ ಮಂಡಳಿ ಬುಡಕಟ್ಟು ಜನಗಳ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಇತರರೊಂದಿಗೆ ಅವರ ಐಕ್ಯತೆಯನ್ನು ಬೆಸೆಯುವಲ್ಲಿ ಶ್ಲಾಘನಾರ್ಹ ಕೆಲಸ ಮಾಡಿದೆ. ತ್ರಿಪುರಾ ಇಂದು ಪ್ರತ್ಯೇಕತೆಯ ಸಮಸ್ಯೆ ಎದುರಿಸುತ್ತಿದ್ದರೆ ಅದು ಬುಡಕಟ್ಟು ಜನಗಳಲ್ಲಿರುವ ಅತೃಪ್ತಿಯಿಂದಾಗಿ ಅಲ್ಲ, ಬದಲಾಗಿ ಭಾರತವನ್ನು ತುಂಡು-ತುಂಡಾಗಿ ಮಾಡುವ ಸಾಮ್ರಾಜ್ಯಶಾಹಿ ಆಟದ ಭಾಗವಾಗಿ ಈಶಾನ್ಯ ಭಾಗವನ್ನು, ಅದರ ಭಾಗವಾದ ತ್ರಿಪುರಾವನ್ನು ಅಸ್ಥಿರಗೊಳಿಸಲಿಕ್ಕಾಗಿ ಬುಡಕಟ್ಟು ಮತ್ತು ಇತರ ಜನಗಳ ನಡುವಿನ ಐಕ್ಯತೆಯನ್ನು ಒಡೆಯುವ ಕೆಲವು ಸಾಮ್ರಾಜ್ಯಶಾಹಿ ಬೆಂಬಲಿತ ಶಕ್ತಿಗಳಿಂದಾಗಿ ಈ ಸಮಸ್ಯೆಯಿದೆ. ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿ ಹಲವಾರು ವರ್ಷಗಳ ಕಾಲ ಒಂದು ಹಿಂಸಾತ್ಮಕ ಚಳುವಳಿಯಿತ್ತು. ಅಲ್ಲಿ ಒಂದು ಸ್ವಾಯತ್ತ ಮಂಡಳಿಯ ರಚನೆ ಅಭಿವೃದ್ಧಿಯ ಸಮಸ್ಯೆಯನ್ನು ಎದುರಿಸಲು ಬಹಳಷ್ಟು ಸಹಾಯಕವಾಯಿತು.

ರಾಜ್ಯಗಳ ಹಿಂದುಳಿಕೆಯ ಸಮಸ್ಯೆಯನ್ನು ನಿವಾರಿಸಲು ಸಿಪಿಐ(ಎಂ) ಪ್ರತಿಪಾದಿಸುವ ನಿಲುವು ಇದು. ಈ ನಿಲುವು ಈ ಸಮಸ್ಯೆಯನ್ನು ತೃಪ್ತಿಕರವಾಗಿ ಪರಿಹರಿಸಬಲ್ಲುದಷ್ಟೇ ಅಲ್ಲ, ಜನಗಳ, ದೇಶದ ಐಕ್ಯತೆಯನ್ನು ಕಾಪಾಡುತ್ತದೆ ಎಂಬುದು ನಮ್ಮ ದೃಢ ಅಭಿಪ್ರಾಯ. ಆದ್ದರಿಂದ ನಾವು ನಮ್ಮ ಕಣ್ಣೋಟವನ್ನು ಸಂಪೂರ್ಣ ಶಕ್ತಿಯಿಂದ ಜನಗಳ ಮುಂದಿಡಲು ಮತ್ತು ಜನಗಳನ್ನು ಈ ನಿಟ್ಟಿನಲ್ಲಿ ಅಣಿನೆರೆಸಲು ನಿರ್ಧರಿಸಿದ್ದೇವೆ.

ಗ್ರಾಮೀಣ ಬಡವರು ತಮ್ಮ ಭೂ ಹಸಿವನ್ನು ಇಂಗಿಸಿಕೊಳ್ಳಲು ಪ್ರಯತ್ನಪಡುವಾಗ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಪರವಾದ ಸರ್ಕಾರ ಹೇಗೆ ದಮನಕಾರಿ ಹೆಜ್ಜೆ ಇಡುತ್ತದೆ ಎಂಬುದು ಹಳಿಯಾಳದ ಭೂಹೀನರ ಚಳುವಳಿಯಲ್ಲಿ ಬಹಳ ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಇಡೀ ರಾಜ್ಯದ ಗಮನವನ್ನು ಸೆಳೆದಿದ್ದ ಈ ಚಳುವಳಿ ನಡೆದು 25 ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಈ ಲೇಖನ.

ಹಳಿಯಾಳ ಭೂ ಹೋರಾಟಕ್ಕೆ 25 ವರ್ಷ

ಜೂನ್ 7, 1979. ಕರ್ನಾಟಕ ಪ್ರಾಂತ ರೈತ ಸಂಘವು ಅಂದು ಹಳಿಯಾಳ್ ಬಂದ್‌ಗೆ ಕರೆ ನೀಡಿತ್ತು. ತಾಲ್ಲೂಕ್ ಕೇಂದ್ರದಲ್ಲಿ ಬಂದ್ ಅನ್ನು ಯಶಸ್ವಿಗೊಳಿಸಲು ಹತ್ತಾರು ಹಳ್ಳಿಗಳಿಂದ ಸುಮಾರು 3000 ಜನ ಬಡ ರೈತರೂ, ಕೃಷಿ ಕೂಲಿಕಾರರೂ ಹಳಿಯಾಳದಲ್ಲಿ ಬಂದು ಸೇರಿದ್ದರು. ಮಹಿಳೆಯರೂ ನೂರಾರೂ ಸಂಖ್ಯೆಯಲ್ಲಿದ್ದರು. ಜೂನ್ 5 ರಂದು ಅದೇ ಹಳ್ಳಿಗಳಲ್ಲಿ ಜರುಗಿದ ಭೂ ಆಕ್ರಮಣ ಚಳುವಳಿಯ ಸಂದರ್ಭದಲ್ಲಿ ಬಂಧಿಸಲ್ಪಟ್ಟ ರೈತರನ್ನು ಮತ್ತು ರೈತ ಕಾರ್ಮಿಕ ಮುಖಂಡ ಆರ್.ಜಿ.ಸ್ಥಳೇಕರ್ ಅವರನ್ನು ಬಿಡುಗಡೆ ಮಾಡಬೇಕು, ಕೃಷಿ ಯೋಗ್ಯ ಅರಣ್ಯ ಭೂಮಿಯನ್ನು ಭೂಹೀನ ಬಡವರಿಗೆ ಹಂಚಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಬಂದ್ ಕರೆ ನೀಡಲಾಗಿತ್ತು.

ಮಧ್ಯಾಹ್ನದ ವರೆಗೆ ಪರಿಸ್ಥಿತಿ ಶಾಂತವಾಗಿಯೇ ಇತ್ತು. ಬಂದ್ ನೂರಕ್ಕೆ ನೂರು ಯಶಸ್ವಿಯಾಗಿತ್ತು. ಸುಮಾರು ಎರಡು ವರೆ ಗಂಟೆಗೆ ಬೆಳಗಾವಿಯಿಂದ ಕಾಯ್ದಿಟ್ಟ ಪಡೆಯ ಪೋಲೀಸರು ಆಗಮಿಸಿ, ಪ್ರದರ್ಶನಕಾರರನ್ನು ಚದುರಿಸಲು ಏಕಾಏಕಿಯಾಗಿ ಅಶ್ರು ವಾಯು ಪ್ರಯೋಗಿಸಿದರು. ಜನ ಚದುರದೆ ಇದ್ದಾಗ, ಲಾಠಿ ಪ್ರಹಾರ ಮಾಡಲಾರಂಭಿಸಿದರು. ಓಡುತ್ತಿದ್ದ ಜನರನ್ನು ಊರಾಚೆ ಸುಮಾರು ಅರ್ಧ ಕಿ.ಮೀ. ದೂರದವರೆಗೆ ಬೆನ್ನಟ್ಟಿ ಬಂದ ಪೊಲೀಸರು ಅವರ ಮೇಲೆ ಗುಂಡು ಹಾರಿಸಿದರು. ತೆಗ್ಗಿನಳ್ಳಿ ಗ್ರಾಮದ ಮಾರುತಿ ಗಣೇಶಪ್ಪ ಪವಾರ್ ಎಂಬ ಸುಮಾರು 40 ವರ್ಷ ವಯಸ್ಸಿನ ಬಡರೈತನ ತಲೆಗೆ ಗುಂಡು ತಗಲಿ ಸ್ಥಳದಲ್ಲೇ ಅಸುನೀಗಿದರು.

ಹಿನ್ನೆಲೆ

ಉತ್ತರ ಕನ್ನಡ ಜಿಲ್ಲೆಯ 10,24,679 ಹೆಕ್ಟೇರ್ ಒಟ್ಟು ಭೂಪ್ರದೇಶದಲ್ಲಿ ಶೇಕಡ 80 ರಷ್ಟು ಅರಣ್ಯ ಭೂಮಿಯಾಗಿದೆ. ಲಭ್ಯವಿರುವ ಅತ್ಯಲ್ಪ ಕಂದಾಯ ಭೂಮಿಯಲ್ಲಿ ಬಹುಭಾಗ ವಿವಿಧ ಯೋಜನೆಗಳಿಗೆ ಬಳಕೆಯಾಗಿದೆ. ಭೂಹಿಡುವಳಿದಾರರಿಗಿಂತ ಭೂಹೀನ ಕುಟುಂಬಗಳ ಸಂಖ್ಯೆಯೇ ಅಧಿಕವಾಗಿರುವ ಈ ಜಿಲ್ಲೆಯಲ್ಲಿ ಅನ್ಯ ಮಾರ್ಗವಿಲ್ಲದೆ ಜನ ಅರಣ್ಯ ಜಮೀನು ಸಾಗುವಳಿ ಮಾಡಿ ಬದುಕಿಕೊಳ್ಳಲು ಪ್ರಯತ್ನ ಪಡುತ್ತಾ ಬಂದಿದ್ದಾರೆ. ಇಲ್ಲಿ ಹೆಚ್ಚು ಕಡಿಮೆ ಪ್ರತಿವರ್ಷವೂ ಸಾಕಷ್ಟು ಮಳೆಯಾಗುತ್ತಿರುವುದೂ ಜನ ಅರಣ್ಯ ಭೂಮಿ ಸಾಗುವಳಿಯತ್ತ ಆಸಕ್ತಿವಹಿಸಲು ಕಾರಣವಾಗಿದೆ. ಜನಸಂಖ್ಯೆ ಹೆಚ್ಚಾಗುತ್ತಾ ಹೋದಂತೆ ಜನರ ಭೂಮಿಯ ಹಸಿವು ಸ್ವಾಭಾವಿಕವಾಗಿ ಹೆಚ್ಚಾಗಿದೆ. ಹೀಗೆ ಕಳೆದ ಕೆಲವು ದಶಕಗಳಿಂದ ಉತ್ತರ ಕನ್ನಡ ಜಿಲ್ಲೆಯ ಸರಿಸುಮಾರು ಎಲ್ಲಾ ತಾಲೂಕುಗಳ ಜನ ಅರಣ್ಯ ಭೂಮಿ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಾ ಬಂದಿರುತ್ತಾರೆ. ಅತಿಕ್ರಮಣ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಿ ಪಟ್ಟಾ ನೀಡುವ ಭರವಸೆಯನ್ನು ನೀಡುತ್ತಾ ಬಂದಿರುವ ಕಾಂಗ್ರೆಸ್ ಪುಡಾರಿಗಳನ್ನೇ ಜಿಲ್ಲೆಯ ಜನ ಶಾಸಕರಾಗಿ, ಸಂಸತ್ ಸದಸ್ಯರಾಗಿ ಗೆಲ್ಲಿಸುತ್ತಾ ಬಂದಿದ್ದಾರೆ.

ಉತ್ತರ ಕನ್ನಡ (ಅದು ಕಾರವಾರ) ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದ ದಿನಗಳಿಂದಲೂ ಕಮ್ಯೂನಿಸ್ಟ್ ಆಂದೋಲನದ ಪ್ರಭಾವ ಹರಡಿಕೊಂಡಿದ್ದು ಇನ್ನೊಂದು ಗಮನಾರ್ಹ ಐತಿಹಾಸಿಕ ಅಂಶವಾಗಿದೆ. 1930ರ ದಶಕದಿಂದಲೇ ಇಲ್ಲಿ ಕಮ್ಯೂನಿಸ್ಟರು ರೈತರನ್ನು, ಗೇಣಿದಾರರನ್ನು ಸಂಘಟಿಸುವ ಕೆಲಸವನ್ನು ಆರಂಭಿಸಿದ್ದರು. ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಗ್ರಾಮೀಣ ಜನತೆಯ ಹೋರಾಟಗಳನ್ನು ಕ್ರೋಢೀಕರಿಸುವ ಪ್ರಯತ್ನದ ಅಂಗವಾಗಿ 1936 ರಲ್ಲಿ ಅಖಿಲ ಭಾರತ ಕಿಸಾನ್ ಸಭಾ(AIKS) ಸ್ಥಾಪನೆಯಾದ ನಂತರ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ರೈತ ಚಳುವಳಿಯನ್ನು ಕಿಸಾನ್ ಸಭಾದ ಅಡಿಯಲ್ಲಿ ಮುಂದುವರೆಸಲಾಯಿತು. ಗೇಣಿದಾರರ ಹೆಸರುಗಳನ್ನು ದಾಖಲೆಗಳಲ್ಲಿ ನಮೂದು ಮಾಡಲು, ದುಬಾರಿ ಗೇಣಿ ದರಗಳನ್ನು ಕಡಿತ ಮಾಡಲು ಒತ್ತಾಯಿಸಿ ಸಮರಶೀಲ ಹೋರಾಟಗಳನ್ನು ಸಂಘಟಿಸಲಾಗಿತ್ತು. ಎನ್.ಜಿ.ಮಾಳ್ಸೇಕರ್,



ಸೈಯದ್ ಹೈದರ್ ಸಾಬ್, ಹೊನ್ನಪ ರಾಮಚಂದ್ರ ನಾಯಕ್ ಮೊದಲಾದವರು ಚಳುವಳಿಯ ಪ್ರಮುಖ ಮುಖಂಡರಾಗಿದ್ದರು. ಚಳುವಳಿಗಾರರನ್ನು ಬಂಧಿಸಿ ನಾಸಿಕ್ ಜೈಲಿನಲ್ಲಿ ಇಡಲಾಗುತ್ತಿತ್ತು. ನಾಸಿಕ್ ಜೈಲಿನಲ್ಲಿ ಒಮ್ಮೆ ನಡೆದ ಪೊಲೀಸ್ ಗೋಲಿಬಾರ್‌ನಲ್ಲಿ ಕಾರವಾರ ತಾಲೂಕಿನ ಉಳಗಾದ ಗಣು ಮಾಬ್ಲು ನಾಯ್ಕ ಪ್ರಾಣ ಕಳೆದುಕೊಂಡು ಹುತಾತ್ಮರಾದರು.

1956ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದ ಬಳಿಕ ಈವರೆಗೆ ಮುಂಬೈ ಪ್ರಾಂತ್ಯದಲ್ಲಿದ್ದ ಕಾರವಾರ ಜಿಲ್ಲೆ ಮೈಸೂರು ಪ್ರಾಂತ್ಯಕ್ಕೆ ಸೇರ್ಪಡೆಯಾಯಿತು. 1957 ರಲ್ಲಿ ಬೆಂಗಳೂರಿನಲ್ಲಿ ಅಖಿಲ ಭಾರತ ಕಿಸಾನ್ ಸಭಾದ ವಿವಿಧ ಘಟಕಗಳನ್ನು ಒಳಗೊಂಡ ಪ್ರಾಂತ ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಸ್ಥಾಪನೆಯಾಯಿತು. ಅಂದಿನಿಂದ ಜಿಲ್ಲೆಯಲ್ಲಿ ಪ್ರಾಂತ ರೈತ ಸಂಘದ ಮಾರ್ಗದರ್ಶನದಲ್ಲಿ ಚಳುವಳಿ ಮುಂದುವರೆಯಿತು. ಮುಂಬೈ ಟೆನೆನ್ಸಿ ಕಾಯ್ದೆ ಜಾರಿಗೆ ಒತ್ತಾಯಿಸಿ, ಜಮೀನ್ದಾರಿ ಪದ್ಧತಿಯ ನಿರ್ಮೂಲನೆಗೆ ಆಗ್ರಹಿಸಿ ಹೋರಾಟಗಳನ್ನು ನಡೆಸುವುದರ ಜೊತೆಗೆ ಸರ್ಕಾರಿ ಬಂಜರು ಭೂಮಿಯನ್ನು ಭೂಹೀನ ಬಡವರಿಗೆ ವಿತರಣೆ ಮಾಡಬೇಕೆಂಬ ಬೇಡಿಕೆಗಾಗಿಯೂ ಚಳುವಳಿಗಳನ್ನು ಸಂಘಟಿಸಲಾರಂಭಿಸಲಾಯಿತು. ಕಾರವಾರದಲ್ಲಿ ಎನ್.ಜಿ.ಮಾಳ್ಸೇಕರ್, ಅಂಕೋಲಾದಲ್ಲಿ ಎಸ್.ವಿ.ಪಿಕಳೆ ವಕೀಲರು, ಹೊನ್ನಾವರದಲ್ಲಿ ಮಂಜುನಾಥ ಪುಲ್ಕರ್, ಹಳಿಯಾಳದಲ್ಲಿ ಡಿ.ವಿ.ಸಿಂಗ್, ಶಿರಸಿಯಲ್ಲಿ ಎಂ.ಎಸ್.ಧಾರೇಶ್ವರ್ ಮತ್ತು ಪರಶುರಾಮ ಮಶಾಲ್ಕಿ ಮೊದಲಾದವರು. ರೈತರ ಚಳುವಳಿಗೆ ನೇತೃತ್ವ ನೀಡುತ್ತಾ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಭಾವವನ್ನು ಬೆಳೆಸಿದರು. ಪ್ರಾಂತ ರೈತ ಸಂಘವು ನೀಡಿದ ಪ್ರೋತ್ಸಾಹ ಹಾಗೂ ಧೈರ್ಯದ ಬಲದಿಂದ ಜಿಲ್ಲೆಯಾದ್ಯಂತ ಭೂಹೀನ ಬಡವರು ದೊಡ್ಡ ಸಂಖ್ಯೆಯಲ್ಲಿ ಅರಣ್ಯ ಭೂಮಿಯಲ್ಲಿ ವ್ಯವಸಾಯ ಮಾಡಿ ಜೀವನ ಸಾಗಿಸಲು ಮುಂದಾದರು. ಅರಣ್ಯ ಅತಿಕ್ರಮಣದಾರರು ಅರಣ್ಯದಲ್ಲಿರುವ ದೊಡ್ಡ ದೊಡ್ಡ ಮರಗಳನ್ನು ಕಡಿಯುತ್ತಿರಲಿಲ್ಲ. ಮರಗಳ ಕೆಳಗೆ ಬೆಳೆದಿರುತ್ತಿದ್ದ ಮುಳ್ಳಿನ ಗಿಡಗಂಟೆಗಳನ್ನು ಕಡಿದು ಲಭ್ಯವಾಗುವ ನೆಲವನ್ನು ಹದಮಾಡಿ ಸಾಗುವಳಿ ಮಾಡುತ್ತಿದ್ದರು. ಈಗಲೂ ಅರಣ್ಯ ಅತಿಕ್ರಮಣಗೊಂಡ ಪ್ರದೇಶಗಳಲ್ಲಿ ಮೊದಲಿನಿಂದ ಬೆಳೆದು ನಿಂತ ಕಾಡು ಮರಗಳು ಹಾಗೆಯೇ ಉಳಿದಿರುವುದನ್ನು ಕಾಣಬಹುದು.

ನಿತ್ಯಾನಂದಸ್ವಾಮಿ

ಹಳಿಯಾಳದಲ್ಲಿ ಭೂಸ್ವಾಧೀನ ಚಳುವಳಿ:

ಹಳಿಯಾಳ ತಾಲೂಕಿನ ಬಡರೈತರು ಮತ್ತು ಕೃಷಿ ಕೂಲಿಕಾರರು ಐದಾರು ವರ್ಷಗಳಿಂದ ಕೃಷಿ ಯೋಗ್ಯ ಅರಣ್ಯ ಭೂಮಿಯನ್ನು ತಮಗೆ ವಿತರಣೆ ಮಾಡಬೇಕೆಂದು ಅರಣ್ಯ ಅಧಿಕಾರಿಗಳಿಗೂ, ಸರ್ಕಾರಕ್ಕೂ ಮನವಿ ಸಲ್ಲಿಸುತ್ತಾ ಬಂದಿದ್ದರು. ಆದರೆ ಸರ್ಕಾರವಾಗಲಿ, ಅರಣ್ಯ ಅಧಿಕಾರಿಗಳಾಗಲಿ ಭೂಹೀನ [illegible]ತವರ ಭೂ ಹಸಿವೆಯನ್ನು ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗಿರಲಿಲ್ಲ.

ದಿನಾಂಕ 21-5-1979ರಂದು ತಾಲೂಕಿನ ಬಡರೈತರ ಮತ್ತು ಕೃಷಿ ಕೂಲಿಕಾರರ ಸಭೆಯೊಂದನ್ನು ಸಾತ್ಮಣಿ ಎಂಬ ಹಳ್ಳಿಯಲ್ಲಿ ಕರೆಯಲಾಗಿತ್ತು. ಸಾತ್ಮಣಿ ಗ್ರಾಮದವರಲ್ಲದೆ ಜಾವಳ್ಳಿ, ಯಾಡೋಗಾ, ಮೊದಿಲಗೇರಿ, ಅಜಗಾಂವ, ಅಸಕಲಕಟ್ಟಾ, ಆಲೂರ, ತಾಟಗೇರಾ, ರಾಮಾಪುರ, ಡೋಮಗೇರಾ ಮೊದಲಾದ ಹಳ್ಳಿಗಳಿಂದ ರೈತರು ಹಾಗೂ ಕೂಲಿಕಾರರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅರಣ್ಯ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವ ಭೂಹೀನರ ಮೇಲೆ ಪೊಲೀಸರು ಮೊಕದ್ದಮೆ ಹೂಡುವುದನ್ನು ನಿಲ್ಲಿಸಬೇಕು, ಅರಣ್ಯ ಭೂಮಿಯಿಂದ ಭೂಹೀನ ಬಡವರನ್ನು ಒಕ್ಕಲೆಬ್ಬಿಸಬಾರದು, ಕೃಷಿ ಯೋಗ್ಯ ಅರಣ್ಯ ಭೂಮಿಯನ್ನು ಬಡವರಿಗೆ ವಿತರಣೆ ಮಾಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು 28.5.1979 ರಂದು ಹಳಿಯಾಳದಲ್ಲಿ ಬೃಹತ್ ಮತಪ್ರದರ್ಶನವನ್ನು ನಡೆಸಿ ತಾಲೂಕ ತಹಶಿಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಮೊದಲ ಹಂತದ ಈ ಹೋರಾಟ ತುಂಬ ಯಶಸ್ವಿಯಾಗಿ ಜರುಗಿತು. ಮೇ 28 ರಂದು ಒಟ್ಟು 17 ಹಳ್ಳಿಗಳಿಂದ 2000 ಕ್ಕೂ ಹೆಚ್ಚು ಕೂಲಿಕಾರರು, ಬಡರೈತರು ಆಗಮಿಸಿ ತಾಲೂಕ ತಹಶಿಲ್ದಾರರ ಮತ್ತು ಅರಣ್ಯ ಅಧಿಕಾರಿಗಳ ಕಛೇರಿಗಳ ಎದುರು ಪ್ರದರ್ಶನ ನಡೆಸಿ ಮನವಿಗಳನ್ನು ಸಲ್ಲಿಸಿದರು. ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಎನ್.ಜಿ.ಮಾಳ್ಸೇಕರ್ ಮತ್ತು ದಾಂಡೇಲಿಯ ಕಾರ್ಮಿಕ ಮುಖಂಡರಾದ ಆರ್.ಜಿ.ಸ್ಥಳೇಕರ್ ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದರು. ದಿನಾಂಕ 05.06.1979ರಿಂದ ಹಳಿಯಾಳ ತಾಲೂಕಿನ 17 ಗ್ರಾಮಗಳಲ್ಲಿ ಅರಣ್ಯ ಭೂಮಿ ಸ್ವಾಧೀನ ಚಳುವಳಿಯನ್ನು ಆರಂಭಿಸುವುದೆಂದು, ಈ ಚಳುವಳಿಯಲ್ಲಿ ಕನಿಷ್ಠ 400 ಎಕರೆ ಅರಣ್ಯ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುದೆಂದು ಇದೇ ಸಭೆಯಲ್ಲಿ ನಿರ್ಧರಿಸಲಾಯಿತು.

ಚಳುವಳಿಯನ್ನು ಆರಂಭಿಸುವ ಹಿಂದಿನ ದಿನ ಅಂದರೆ 04.06.1979 ರಂದು ಹಳಿಯಾಳದಲ್ಲಿ 17 ಹಳ್ಳಿಗಳ ಮತ್ತು ಸುತ್ತಲಿನ ಗ್ರಾಮಗಳ ರೈತರ ಹಾಗೂ ಕೂಲಿಕಾರರ ಬೃಹತ್ ಸಭೆಯೊಂದನ್ನು ನಡೆಸಲಾಯಿತು. ಈ ಸಭೆಯಲ್ಲಿ ಮರುದಿನದಿಂದ ಆರಂಭವಾಗಲಿದ್ದ ಭೂಸ್ವಾಧೀನ ಚಳುವಳಿಯ ಸಿದ್ಧತೆಗಳನ್ನು ಪರಿಶೀಲಿಸಿ ಅಂತಿಮಗೊಳಿಸಲಾಯಿತು.

ತೀರ್ಮಾನದ ಪ್ರಕಾರ ಜೂನ್ 5 ರಂದು ಸಾತ್ಮಣಿ, ಜಾವಳ್ಳಿ, ಕೇರವಾಡ, ಕಂಚನಳ್ಳಿ, ಹವಗಿ ಮೊದಲಾದ ಹಳ್ಳಿಗಳಲ್ಲಿ ಅರಣ್ಯ ಭೂಮಿಯನ್ನು ಪ್ರವೇಶ ಮಾಡಿದ ರೈತರು ಮತ್ತು ಕೂಲಿಕಾರರು ಗಿಡಗಂಟಿಗಳನ್ನು ಕಡಿದು ಭೂಮಿ ಹಸನು ಮಾಡುವ ಕಾರ್ಯದಲ್ಲಿ ತೊಡಗಿದರು. ಅಂದು ಆರ್.ಜಿ.ಸ್ಥಳೇಕರ್ ಅವರನ್ನೊಳಗೊಂಡು 73 ರೈತರನ್ನು ಬಂಧಿಸಿ ಕಾರವಾರ ಜೈಲಿಗೆ ಕಳುಹಿಸಲಾಯಿತು. ರೈತ ಮುಖಂಡ ಅಪ್ಪುನ್ನಿ ಡಿ'ಸೋಜಾರನ್ನು ಬಂಧಿಸುವಾಗ ಪೊಲೀಸರು ಅವರನ್ನು ಮನ ಬಂದಂತೆ ಹೊಡೆದಿದ್ದರು.

ಆದರೆ ಚಳುವಳಿ ನಿಲ್ಲಲಿಲ್ಲ. ಜೂನ್ 6 ರಂದು ಇತರ ಹಳ್ಳಿಗಳಲ್ಲಿಯೂ ಭೂಸ್ವಾಧೀನ ಚಳುವಳಿ ಮುಂದುವರೆಯಿತು. ಅಂದು ಸುಮಾರು 900 ಜನರ ಬಂಧನವಾಯಿತು. ಪೊಲೀಸ್ ವ್ಯಾನುಗಳಲ್ಲಿ ಅವರನ್ನು ತುಂಬಿಸಿಕೊಂಡು ಹಳಿಯಾಳಕ್ಕೆ ತಂದು ಸಂಜೆಗೆ ಬಿಡುಗಡೆ ಮಾಡಲಾಯಿತು. ಆದರೆ ಮೊದಲ ದಿನ ಬಂಧಿಸಲ್ಪಟ್ಟವರನ್ನು ಬಿಡುಗಡೆ ಮಾಡಲಾಗಲಿಲ್ಲ. ಎಲ್ಲಾ ಬಂಧಿತರನ್ನು ಬಿಡುಗಡೆ ಮಾಡಬೇಕು ಮತ್ತು ಕೃಷಿ ಯೋಗ್ಯ ಅರಣ್ಯ ಭೂಮಿಯನ್ನು ಭೂಹೀನರಿಗೆ ಹಂಚಬೇಕು ಎಂಬ ಬೇಡಿಕೆಗಾಗಿ ಮರುದಿನ ಅಂದರೆ ಜೂನ್ 7 ರಂದು ಬಂದ್ ಆಚರಿಸಬೇಕೆಂದು ಕರೆ ನೀಡಲಾಯಿತು.

ಪೊಲೀಸ್ ದೌರ್ಜನ್ಯ:

ಬಂದ್ ಅತ್ಯಂತ ಶಾಂತರೀತಿಯಿಂದ ಯಶಸ್ವಿಯಾಗಿ ನಡೆದಿತ್ತು. ಆದರೆ ಪ್ರದರ್ಶನಕಾರರನ್ನು ಚದುರಿಸಿ ಅವರಲ್ಲಿ ಭೀತಿ ಹುಟ್ಟಿಸುವ ಉದ್ದೇಶದಿಂದ, ಯಾವುದೇ

→

ಹಳಿಯಾಳ ಹೋರಾಟದ ಸ್ಮರಣಾರ್ಥ

25 ವರ್ಷಗಳ ಹಿಂದೆ ಇಡೀ ರಾಜ್ಯದ ಗಮನ ಸೆಳೆದ ಹಳಿಯಾಳ ಭೂ ಹೋರಾಟದ ಸ್ಮರಣಾರ್ಥ ಹಳಿಯಾಳದಲ್ಲಿ ರಾಜ್ಯಮಟ್ಟದ ಭೂ ಸಮಾವೇಶವೊಂದನ್ನು ಜಂಟಿಯಾಗಿ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ತೀರ್ಮಾನಿಸಿವೆ. ಈ ಸಮಾವೇಶವನ್ನು ಕರ್ನಾಟಕದ ಭೂಸುಧಾರಣೆಗಳ ವಸ್ತುನಿಷ್ಠ ವಿಮರ್ಶೆ, ಅರಣ್ಯಭೂಮಿ ಸಾಗುವಳಿಗೆ ಸಂಬಂಧಿಸಿದ ಪ್ರಶ್ನೆಗಳ ಕುರಿತು ತಜ್ಞರಿಂದ ಪರಾಮರ್ಶೆಯೂ ಸೇರಿದಂತೆ ಭೂ ಪ್ರಶ್ನೆಯ ಕುರಿತಾಗಿ ಅರ್ಥಪೂರ್ಣವಾದ ಚರ್ಚೆಯನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಸಮಾವೇಶದಲ್ಲಿ ನಿರ್ಧರಿಸಲಾಗುವ ಬೇಡಿಕೆಗಳ ಆಧಾರದಲ್ಲಿ ರಾಜ್ಯದಲ್ಲಿ ಭೂ ಚಳುವಳಿಯನ್ನು ಮುನ್ನಡೆಸಲು ಹಳಿಯಾಳ ಹೋರಾಟದ ಸ್ಫೂರ್ತಿಯನ್ನು ಬಳಸಿಕೊಳ್ಳುವ ಉದ್ದೇಶದ ಈ ಕಾರ್ಯಕ್ರಮದಲ್ಲಿ ಕಾರ್ಮಿಕರಂಗದ ಎಲ್ಲಾ ಕಾರ್ಯಕರ್ತರು ಭಾಗವಹಿಸಿ ಪ್ರಯೋಜನ ಪಡೆಯಬೇಕಾಗಿದೆ.

ಪ್ರಚೋದನೆ ಇಲ್ಲದೆ ಅವರ ಮೇಲೆ ಪೊಲೀಸರು 3 ಸುತ್ತು ಗುಂಡು ಹಾರಿಸಿದರು. ಒಂದು ಗುಂಡು ತಗಲಿದ ಮಾರುತಿ ಪವಾರ್ ಸ್ಥಳದಲ್ಲೇ ಬಿದ್ದು ಸಾವನ್ನಪ್ಪಿದರು. ಇನ್ನೊಂದು ಗುಂಡು ತಗಲಿದ ವ್ಯಕ್ತಿಯೊಬ್ಬನು ಕೊನೆಯವರೆಗೂ ಪತ್ತೆಯಾಗಲಿಲ್ಲ ಎಂಬ ಪ್ರತೀತಿ ಇದೆ. ಅದರಂತೆ ಹಮಾಲಿ ಕೆಲಸ ಮಾಡುತ್ತಿದ್ದ ಗುಂದ ಗ್ರಾಮದ ನಾರಾಯಣ ತೋರ್ಲೇಕರ್ ಎಂಬುವನನ್ನು ಪೊಲೀಸರು ಸಿಕ್ಕಾಪಟ್ಟೆ ಹೊಡೆದು ನಾಪತ್ತೆ ಮಾಡಿದ್ದಾರೆ ಎಂದು ಹೇಳಲಾಗುತ್ತದೆ.

ಜೂನ್ 7 ರಂದು ಮುಂಜಾನೆ ಬಂದ್ ಪ್ರಾರಂಭವಾಗುವ ಮುಂಚೆಯೇ ಹಳಿಯಾಳದ ಮುನ್ಸಿಪಾಲಿಟಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದ ಬಸಣ್ಣ ನಾಗೇಶ್ ಪಟ್ಟೇಕರ್ ಅವರನ್ನು ಒಳಗೊಂಡಂತೆ ಹಲವಾರು ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ದಾಂಡೇಲಿ ಪುರಸಭಾ ಸದಸ್ಯ, ಸಿಪಿಐ(ಎಂ) ಮುಖಂಡ ಜಿ.ವಿ.ಪವಾರ್ ಮತ್ತು ಪ್ರಾಂತ ರೈತ ಸಂಘದ ಮಾಳ್ಸೇಕರ್ ಅವರನ್ನು ಬಂಧಿಸಲು ಪೊಲೀಸರು ಹೊಂಚುಹಾಕಿದ್ದರು. ಜನರು ಅವರನ್ನು ಸುತ್ತುವರೆದು ರಕ್ಷಣೆ ನೀಡುತ್ತಿದ್ದುದರಿಂದ ಅದು ಸಾಧ್ಯವಾಗಿರಲಿಲ್ಲ. ಆದರೆ ಅಶ್ರುವಾಯು ಪ್ರಯೋಗ, ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಿದ ನಂತರ ಪವಾರ್ ಮತ್ತು ಮಾಳ್ಸೇಕರ್ ಅವರನ್ನು ಬಂಧಿಸಲಾಯಿತು. ಈ ಸಂಭರ್ಭದಲ್ಲಿ ಜಿ.ವಿ.ಪವಾರ್ ಅವರ ಮೇಲೆ ಪೊಲೀಸರು ತೀವ್ರ ಹಲ್ಲೆ ನಡೆಸಿದರು. ಅಂದು ಸುಮಾರು 125 ಜನರನ್ನು ಬಂಧಿಸಿ ಕಾರವಾರ ಜೈಲಿಗೆ ಸಾಗಿಸಲಾಯಿತು.

ಮರುದಿನದಿಂದ ಹಳಿಯಾಳದ ಹಳ್ಳಿಗಳಲ್ಲಿ ಪೊಲೀಸ್ ದೌರ್ಜನ್ಯ ಮುಂದುವರೆಯಿತು. ವ್ಯಾನುಗಳಲ್ಲಿ ಬರುತ್ತಿದ್ದ ಪೊಲೀಸರು ರೈತರ, ಕೂಲಿಕಾರರ ಮನೆಗಳಿಗೆ ನುಗ್ಗಿ "ನಿಮಗೆ ಭೂಮಿ ಬೇಕಾ ಮಕ್ಕಳೆ'' ಎಂದು ಬೈದು ಬೂಟುಗಾಲುಗಳಿಂದ ಒದ್ದು ವ್ಯಾನುಗಳೊಳಗೆ ತಳ್ಳುತ್ತಿದ್ದರು. ಪುರುಷರು ಸಿಗದಿದ್ದಾಗ ಮನೆಯಲ್ಲಿದ್ದ ಮಹಿಳೆಯರನ್ನು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು. ಹಳಿಯಾಳದಲ್ಲಿ ಹನುಮಂತಪ್ಪ ಬೊಬಾಟಿ ಎಂಬ 80 ವರ್ಷದ ವೃದ್ಧರನ್ನು ಬಂಧಿಸಿದ್ದರು. ಯಶವಂತ ಬೊಬಾಟಿಯವರನ್ನು ಗೋಳಿಬಾರ್ ನಡೆದಿದ್ದ ಸ್ಥಳಕ್ಕೆ ಕರೆದೊಯ್ದು 'ನಿನ್ನನ್ನೂ ಇದೇ ರೀತಿ ಮುಗಿಸುತ್ತೇವೆ" ಎಂದು ಬೆದರಿಸಿದ್ದರು. ಈ ರೀತಿ ಪೊಲೀಸ್ ಅತಿರೇಕ ಹಲವು ದಿನಗಳವರೆಗೆ ಮುಂದುವರೆಯಿತು.

ಶ್ರೀಮಂತ ರೈತರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ಕೃಷಿ ಮಾಡುತ್ತಿರುವುದನ್ನು ನೋಡಿಯೂ ಸುಮ್ಮನಿರುವ ಪೊಲೀಸರು ಬಡ ಭೂಹೀನರು ಹೊಟ್ಟೆ ಪಾಡಿಗಾಗಿ ಗಿಡಗಂಟಿ ಕಡಿದು ಬೇಸಾಯ ಮಾಡಲು ಯತ್ನಿಸಿದರೆ ಯಾಕೆ ಇಷ್ಟೊಂದು ದೌರ್ಜನ್ಯ ಮಾಡುತ್ತಾರೆ? ಅರಣ್ಯ ಭೂಮಿಯನ್ನು ವಿತರಣೆ ಮಾಡುವ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದಿರುವ ಇಂದಿರಾ ಕಾಂಗ್ರೆಸ್ ಏಕೆ ಈಗ ಬಡಪಾಯಿ ಅರಣ್ಯ ಭೂಮಿ ಸಾಗುವಳಿದಾರರ ಮೇಲೆ ಸಶಸ್ತ್ರ ಪೊಲೀಸರನ್ನು ಛೂ ಬಿಡುತ್ತಿದೆ? ಹಳಿಯಾಳ ತಾಲೂಕಿನಾದ್ಯಂತ ಅಂದು ಕೇಳಿಬರುತ್ತಿದ್ದ ಪ್ರಶ್ನೆಗಳು ಇವು.

ರಾಜ್ಯಾದ್ಯಂತ ಪ್ರತಿಭಟನೆ

ಕಾರವಾರ ಜೈಲಿನಲ್ಲಿದ್ದ ಹೋರಾಟಗಾರರು ಜೈಲಿನಲ್ಲೇ ಮಾಳ್ಸೇಕರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹುತಾತ್ಮ ಮಾರುತಿ ಪವಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಭೂ ಚಳುವಳಿಯನ್ನು ಮುಂದುವರೆಸಲು ನಿರ್ಧರಿಸಿದರು.

ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿ ಸದಸ್ಯ ಎನ್.ಕೆ.ಉಪಾಧ್ಯಾಯರ ನೇತೃತ್ವದ ನಿಯೋಗವೊಂದು ಹಳಿಯಾಳದ ತೆಗ್ಗಿನಲ್ಲಿ ಗ್ರಾಮಕ್ಕೆ ತೆರಳಿ ದಿವಂಗತ ಮಾರುತಿ ಪವಾರ್ ಅವರ ಮಡದಿ ಮಕ್ಕಳನ್ನು ಭೇಟ್ಟಿಯಾಗಿ ಸಾಂತ್ವನ ಹೇಳಿದರು.

ಹಳಿಯಾಳ ಪೊಲೀಸ್ ದೌರ್ಜನ್ಯವನ್ನು ಖಂಡಿಸಿ, ಬಂಧಿತರ ಬಿಡುಗಡೆಗೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ರಾಜ್ಯ ಸಮಿತಿಗಳು 20-6-1979 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದವು. ಸಿಪಿಐ(ಎಂ) ರಾಜ್ಯಸಮಿತಿ ಈ ಕರೆಯನ್ನು ಬೆಂಬಲಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಸುಳ್ಯ, ಕುಂದಾಪುರ ಮೊದಲಾದ ಕೇಂದ್ರಗಳಲ್ಲಿ, ಕೊಡಗಿನ ವಿರಾಜಪೇಟೆ ಮತ್ತು ಗೋಣಿಕೊಪ್ಪಲು, ಕೋಲಾರ ಜಿಲ್ಲೆಯ ಶಿಡ್ಲಘಟ್ಟ, ಕೆ.ಜಿ.ಎಫ್ ಮತ್ತಿತರ ಕಡೆ, ಬೆಂಗಳೂರು ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರಗಳಲ್ಲಿ, ಶಿವಮೊಗ್ಗ, ತುಮಕೂರು, ಧಾರವಾಡ, ಹಾಸನ, ಹರಿಹರ, ಶಿರಸಿ ಮೊದಲಾದ ಕಡೆ ಯಶಸ್ವಿ ಪ್ರತಿಭಟನೆ ನಡೆಯಿತು.



ಭೂಮಿಯ ಹಕ್ಕಿಗಾಗಿ ನಿಲ್ಲದ ಹೋರಾಟ - ಕಾರವಾರದಲ್ಲಿ ಸಾಗುವಳಿಯಾದ ಅರಣ್ಯ ಭೂಮಿಯ ಹಕ್ಕಿಗಾಗಿ ಮುತ್ತಿಗೆ

ಬೆಂಗಳೂರಿನಲ್ಲಿ ಅಂದು ಮೈಸೂರ್ ಬ್ಯಾಂಕ್ ವೃತ್ತದಿಂದ ವಿಧಾನಸೌಧಕ್ಕೆ ಮೆರವಣಿಗೆಯೊಂದನ್ನು ಹೊರಡಿಸಲಾಗಿತ್ತು. ಮೆರವಣಿಗೆಯು ಗೋಪಾಲಗೌಡ ವೃತ್ತದಲ್ಲಿ ಸಭೆಯಾಗಿ ಮಾರ್ಪಟ್ಟಿತು. ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿದ್ದ ಎಚ್.ಮುಗುವಾಳಪ್ಪ, ಎಸ್.ಸೂರ್ಯನಾರಾಯಣರಾವ್, ವಿ.ಜೆ.ಕೆ. ನಾಯರ್‌ರವರು ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರನ್ನು ಭೆಟ್ಟಿಯಾಗಿ ಮನೆವಿಯೊಂದನ್ನು ಸಲ್ಲಿಸಿದರು.

30-6-1979 ರಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಸಭೆಯನ್ನು ಹಳಿಯಾಳದಲ್ಲೇ ಕರೆಲಾಗಿತ್ತು. ಹಳಿಯಾಳ ಭೂ ಚಳುವಳಿಯನ್ನು ವಿವರವಾಗಿ ವಿಮರ್ಶೆ ಮಾಡಿದ ನಂತರ ಭೂ ಹೋರಾಟವನ್ನು ಉತ್ತರಕನ್ನಡ ಜಿಲ್ಲೆಯಾದ್ಯಂತ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ವಿಸ್ತರಿಸಿ ಗಟ್ಟಿಗೊಳಿಸಲು ನಿರ್ಧರಿಸಲಾಯಿತು. ಹಳಿಯಾಳ ಹೋರಾಟಕ್ಕೆ ಆರ್ಥಿಕ ನೆರವು ಒದಗಿಸಲು ರಾಜ್ಯಾದ್ಯಂತ ಹಣ ಸಂಗ್ರಹ ಮಾಡಲು ನಿರ್ಧರಿಸಲಾಯಿತು.

ಮುಂದೇನು?

25 ವರ್ಷಗಳ ಹಿಂದೆ ಹಳಿಯಾಳದಲ್ಲಿ ಸ್ಫೋಟಗೊಂಡ ಭೂಚಳುವಳಿಯ ಸಂದೇಶ ಇಂದಿಗೂ ತುಂಬಾ ಪ್ರಸ್ತುತವಾಗಿದೆ. ವಿಶೇಷವಾಗಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹೆಸರಿನಲ್ಲಿ ಅರಣ್ಯಭೂಮಿಯಲ್ಲಿ ನೆಲೆಸಿರುವ ಮತ್ತು ಬೇಸಾಯ ಮಾಡುತ್ತಿರುವ ಬಡವರನ್ನು ಒಕ್ಕಲೆಬ್ಬಿಸುವ ಪ್ರಯತ್ನಗಳು ನಡೆದಿರುವಾಗ, ಹಳಿಯಾಳ ಹೋರಾಟದ ಸ್ಫೂರ್ತಿಯನ್ನು ಮೈಗೂಡಿಸಿಕೊಂಡು ರಾಜ್ಯದಲ್ಲಿ, ಮುಖ್ಯವಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ ಸಮರಶೀಲ ಭೂಚಳುವಳಿಯನ್ನು ಕಟ್ಟುವುದು ಸಾಧ್ಯವಾಗಬೇಕಾಗಿದೆ. ಇಂತಹ ಚಳುವಳಿಗೆ ರಾಜ್ಯದ ಕಾರ್ಮಿಕ ವರ್ಗ ಹಾಗೂ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ, ಸಂಘಟನೆಗಳ ದೃಢವಾದ ಬೆಂಬಲ ಅಗತ್ಯವಿದೆ.

ಬಿಜೆಪಿ ಮತ್ತು ಸಂಘ ಪರಿವಾರದವರ ಪ್ರಜಾಪ್ರಭುತ್ವ ವಿರೋಧಿ ಹುಯಿಲು

ಡಾ. ಆರ್.ವಿ.ಭಂಡಾರಿ

ನಮ್ಮ ನಿಮ್ಮ ಸಂವಾದ

ಪ್ರಜಾಪ್ರಭುತ್ವದಲ್ಲಿನ ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಪರಮಾಧಿಕಾರವಾಗಿ ಎತ್ತಿ ಹಿಡಿಯುವ ಒಂದು ಮಾತುಂಟು "ಅವರೆಷ್ಟೇ ಮಾತಾಡಲಿ, ಅವರಿಗೆ ಮಾತಾಡಲು ಅವಕಾಶ ಕೊಡಿ; ಅವರು ಎಷ್ಟು ಮೂರ್ಖರೆಂದು ಜಗತ್ತಿಗೆ ಗೊತ್ತಾಗಲಿ". ಇದು ಪ್ರಜಾಪ್ರಭುತ್ವದಲ್ಲಿನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೇನೋ ಹೌದು. ಆದರೆ ಎಲ್ಲಿ? ಎಲ್ಲಿ ಧರ್ಮನಿರಪೇಕ್ಷಿತ ಪ್ರಜಾಪ್ರಭುತ್ವ ದೀರ್ಘಕಾಲದಿಂದ ನೆಲೆಗೊಂಡಿದೆಯೋ ಅಲ್ಲಿ. ಅದಿಲ್ಲದಲ್ಲಿ ಇದು ಮತೀಯ ಅಥವಾ ಕೋಮು ಸನ್ನಿಯನ್ನು ಉಂಟು ಮಾಡಬಲ್ಲದು. ಇದು ಪ್ರಜಾಪ್ರಭುತ್ವದ ಮುಖವಾಡದಡಿಯಲ್ಲಿ ಪ್ರಜಾಪ್ರಭುತ್ವದ ಮೇಲೆ ಮಾಡುವ ಭಯೋತ್ಪಾದನೆಯಲ್ಲದೆ ಬೇರೆಯಲ್ಲ. ಈಗ ಬಿಜೆಪಿಯವರು ತಮ್ಮ ಹಿಂಬಾಲಕ (ರಿಮೋಟ್ ಕಂಟ್ರೋಲರ್ಸ್ ಕೂಡಾ ಹೌದು)ರಾದ ಸಂಘ ಪರಿವಾರದವರ ನೆರವಿನಿಂದ ಮಾಡುತ್ತಿರುವುದು ಇದೇ ಹುಯಿಲು.

ಬಿಜೆಪಿಯವರು ಅಧಿಕಾರ ಹಿಡಿದದ್ದೇ ಪಿನಾಶಕ ಕೃತಿಗಳಿಂದ. ಅಲ್ಪಸಂಖ್ಯಾತ ವಿರೋಧಿ ಧೋರಣೆಯಿಂದ ಮತ್ತು ಸಾಮಾಜಿಕ ಕೆಡುಕುಗಳಿಂದ. ಹಿಂದುತ್ವ, ಹಿಂದೂ ರಾಷ್ಟ್ರ, ರಾಮಮಂದಿರ ಇತ್ಯಾದಿಗಳ ಭಾವನಾತ್ಮಕವಾದ ವಿಷಯಗಳನ್ನೆತ್ತಿಕೊಂಡು ಸಮೂಹಸನ್ನಿಯನ್ನುಂಟು ಮಾಡಿದ್ದು ನಮ್ಮ ಮುಂದಿನದೇ ಇತಿಹಾಸ. ಆದರೆ ಜನ ಎಲ್ಲರೂ, ಎಲ್ಲಾ ಕಾಲದಲ್ಲೂ ಮರುಳಾಗಲು ಸಾಧ್ಯವಿಲ್ಲ. ಜನ ಬಿಜೆಪಿಗಳ ಅಧಿಕಾರ ದಾಹವನ್ನು, ಶ್ರೀಮಂತರ ಬಗೆಗಿನ ಪಕ್ಷಪಾತವನ್ನು ಅರಿತುಕೊಂಡೇ ಈಗಿನ ಸಂಸತ್ತಿನ ಚುನಾವಣೆಯಲ್ಲಿ ಬಿಜೆಪಿ-ಎನ್‌ಡಿಎಯನ್ನು ನಿರಾಕರಿಸಿದರು.

ಬಿಜೆಪಿಯವರ ಚುನಾವಣಾ ಪ್ರಣಾಳಿಕೆಯಲ್ಲಿ ಭಾರತದ ಬಹುಸಂಖ್ಯಾತ ರೈತರಿಗೆ, ಚಿಕ್ಕ ವ್ಯಾಪಾರಿಗಳಿಗೆ, ಕಾರ್ಮಿಕರಿಗೆ ಮತ್ತು ಬಡವರಿಗೆ ಹಿತವಾಗುವ ಯಾವ ಮುಖ್ಯ ಅಂಶವೂ ಇದ್ದಿರಲಿಲ್ಲ. 'ಭಾರತ ಪ್ರಕಾಶಿಸುತ್ತಿದೆ' ಎಂದು ಸರ್ಕಾರದ ಬೊಕ್ಕಸದಿಂದಲೇ ಐದು ನೂರು ಕೋಟಿ ರೂಪಾಯಿಯನ್ನು ಖರ್ಚು ಮಾಡಿ ಪ್ರಚಾರ ಮಾಡಿಕೊಂಡರು. ಆದರೆ ಅವರು ಪ್ರಕಾಶಕ್ಕೆ ತಂದ ಭಾರತ ಕೇವಲ ಪ್ರತಿಶತ ಹತ್ತು ಜನರಿಗೆ ಸಂಬಂಧಿಸಿತ್ತು. ಉಳಿದ ತೊಂಬತ್ತರಷ್ಟು ಜನರಿಗೆ ಜೀವನಾವಶ್ಯಕ ವಸ್ತುವಿನ ಕೊರತೆಯೇ ಇತ್ತು. ಅದು ಬಡತನದ ಕಗ್ಗತ್ತಲೆಯ ದೇಶವಾಗೇ ಇತ್ತು. ಇದೇ ಅವಧಿಯಲ್ಲಿ ದೇಶದಲ್ಲಿ ಸಾವಿರಾರು ರೈತರು ಸಾಲ ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡರು. ನಮ್ಮ ದೇಶದ ರೈತ ಬಡತನದಲ್ಲೇ ಹುಟ್ಟಿ, ಬಡತನದಲ್ಲೇ ಬೆಳೆದು ಬಡತನದಲ್ಲೇ ಸಾಯುತ್ತಾರೆ - ಎನ್ನುವ ಮಾತು ಬ್ರಿಟಿಷರ ಆಡಳಿತದಲ್ಲಿ ಹುಟ್ಟಿಕೊಂಡ ಮಾತಾಗಿತ್ತು. ಇದೇ ಮಾತು ರೈತರ ಪಾಲಿಗೆ ಸ್ವಾತಂತ್ರ್ಯ ಸಿಕ್ಕಿ ಅರ್ಧ ಶತಮಾನ ಕಳೆದರೂ ಬದಲಾಗಲಿಲ್ಲ. ಸರ್ಕಾರದ ಆರ್ಥಿಕ ನೀತಿ ಬಡವರ ವಿರೋಧಿಯಾಗಿತ್ತು. ಅದನ್ನು ತಿದ್ದುಕೊಳ್ಳುವ ಒಂದೇ ಒಂದು ಮಾತು ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿರಲಿಲ್ಲ. ಪೌಷ್ಠಿಕ ಆಹಾರದಿಂದ ಬಳಲುತ್ತಿರುವ ಜಗತ್ತಿನ ಅರ್ಧದಷ್ಟು ಮಕ್ಕಳು ಇರುವುದು ಭಾರತದಲ್ಲೇ. ಹತ್ತು ಜನ ಗರ್ಭಿಣಿಯರಲ್ಲಿ ಒಂಬತ್ತು ಜನ ಸಮತೋಲನ ಆಹಾರವಿಲ್ಲದೆ ರಕ್ತಹೀನತೆಯಿಂದ ಸಂಕಟಪಡುತ್ತಿದ್ದಾರೆ. ಸರ್ಕಾರಿ ಅಧಿಕೃತ ಲೆಕ್ಕದ ಪ್ರಕಾರವೇ 29,000 ಲಕ್ಷ ಜನರು ಹಸಿದುಕೊಂಡೇ ರಾತ್ರಿ ಕಳೆಯುತ್ತಾರೆ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕುಗಳು ಕ್ಲಾರ್ಕ್ ಹುದ್ದೆಗಳ ನೇಮಕಾತಿಯನ್ನೇ ನಿಲ್ಲಿಸಿವೆ. ಈಗ ಬ್ಯಾಂಕಿನಲ್ಲಿ ಕಂಪ್ಯೂಟರ್ ಜೋಡಿಸಲಾಗುತ್ತಿದೆ. ಹೊಸದಾಗಿ ಉದ್ಯೋಗ ಸೃಷ್ಟಿ ಇಲ್ಲ. ಜನಸಂಖ್ಯೆ ಅಧಿಕವಾಗಿರುವ ನಮ್ಮ ದೇಶದಲ್ಲಿ ಉದ್ಯೋಗವಕಾಶ ಹೆಚ್ಚಾಗುವ ಆರ್ಥಿಕ ನೀತಿ ಬೇಕು. ನಮ್ಮ ಹೈಟೆಕ್ ತಂತ್ರಜ್ಞಾನವಾಗಲೀ, ಮುಕ್ತ ಆರ್ಥಿಕ ನೀತಿಯಾಗಲೀ ಇದನ್ನು ಗಮನದಲ್ಲಿಟ್ಟು ಕೊಂಡೇ ಅಳವಡಿಸಲ್ಪಡಬೇಕು. ಅಂದರೆ ಒಂದು ಸಮತೋಲನ ಕಾಯ್ದುಕೊಳ್ಳಬೇಕು. ಆದರೆ ನಮ್ಮ ಚುನಾವಣೆಯಲ್ಲಿ ಈ ಕುರಿತು ಒಂದೇ ಒಂದು ಮಾತನಾಡಲಿಲ್ಲ. 2020 ಕ್ಕೆ ಜಗತ್ತಿನಲ್ಲೇ ಭಾರತ ಪ್ರಕಾಶಿಸುತ್ತದೆ ಎಂದು ಹೇಳಿದರು. ಅಂದರೆ ಬಡವರ ಎಲುಬಿನ ಮೇಲೆ ಪ್ರಕಾಶಿಸುವ ಭಾರತವನ್ನು ಕಟ್ಟಬಯಸುತ್ತಾರೆ ಎಂದಾಯಿತು. ಇದು ಬಿಜೆಪಿಯ ಅಭಿವೃದ್ಧಿಯ ಕಲ್ಪನೆ.

ಕಾಂಗ್ರೆಸ್ಸು ಇದರಿಂದ ಹೊರತು ಎಂದೇನೂ ಅಲ್ಲ. ಮುಕ್ತ ಆರ್ಥಿಕ ನೀತಿ ಶುರುವಾದುದೇ 1991 ರಲ್ಲಿ, ಮನಮೋಹನ ಸಿಂಗರಿಂದ. ಆದ್ದರಿಂದಲೇ ಕಾಂಗ್ರೆಸ್ ಸರ್ಕಾರ ನಿರ್ನಾಮವಾಗುವ ಮಟ್ಟಕ್ಕೆ ಬಂದು ಮುಟ್ಟಿತು. ಇದನ್ನು ಸರಿಪಡಿಸಿಕೊಳ್ಳದಿದ್ದರೆ ಕಾಂಗ್ರೆಸ್ಸಿಗೂ

ತ್ರಿಪುರಾ - ಹೊಸ ತೆರಿಗೆ ಇಲ್ಲದ ಬಜೆಟ್

ಸದಾ ಭಯೋತ್ಪಾದಕರ ಧಾಳಿಯಿಂದ ನಲುಗಿ, ಅಭಿವೃದ್ಧಿಯ ಕಾರ್ಯಗಳಿಗೆ ಕೇಂದ್ರದ ನೆರವೂ ಸಿಗದೇ ಹಲವಾರು ಸಮಸ್ಯೆಗಳನ್ನು ಎದುರಿಸಿಯೂ ತ್ರಿಪುರಾದ ಎಡರಂಗ ಸರ್ಕಾರ ಯಾವುದೇ ಹೊಸ ತೆರಿಗೆಗಳಿಲ್ಲದೇ ಜನರಿಗೆ ಹಲವು ಪರಿಹಾರ ಒದಗಿಸುವ ಜನಪರ ಬಜೆಟ್ ಅಂಗೀಕರಿಸಿದೆ.

ಸಂಸತ್ ಚುನಾವಣೆ ಸಂಬಂಧವಾಗಿ ಮುಂದೂಡಲ್ಪಟ್ಟಿದ್ದ ತ್ರಿಪುರಾ ರಾಜ್ಯದ ವಾರ್ಷಿಕ ಬಜೆಟ್ಟನ್ನು ಅಲ್ಲಿನ ಆರ್ಥಿಕ ಸಚಿವರಾದ ಬಾದಲ್ ಚೌಧುರಿಯವರು ಮೇ 28 ರಂದು ತ್ರಿಪುರಾ ವಿಧಾನಸಭೆಯಲ್ಲಿ ಮಂಡಿಸಿದರು. ಯಾವುದೇ ಹೊಸತೆರಿಗೆ ಇಲ್ಲದ 3182.93 ಕೋಟಿ ರೂ. ಬಜೆಟ್ಟಿನಲ್ಲಿ ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ವಿದ್ಯುತ್, ರಸ್ತೆ ಸಾರಿಗೆ, ಸಣ್ಣ ಕೈಗಾರಿಕೆ, ಕೃಷಿ, ಕುಡಿಯುವ ನೀರು, ಸ್ವ-ಸಹಾಯ ಕಾರ್ಯಕ್ರಮ ಇತ್ಯಾದಿಗಳಿಗೆ ಹೆಚ್ಚು ಒತ್ತು ನೀಡಲಾಗಿತ್ತು. 10,492 ಕಿ.ಮೀ ವಿಸ್ತೀರ್ಣವುಳ್ಳ ತ್ರಿಪುರಾದ ಜನಸಂಖ್ಯೆ ಸಾಧಾರಣ 32 ಲಕ್ಷ (ಬೆಂಗಳೂರಿನ ಜನಸಂಖ್ಯೆಗಿಂತ ಕಡಿಮೆ)

ತ್ರಿಪುರ ಸರಕಾರವು ಪೂರ್ಣಾವಧಿಯ ಬಜೆಟನ್ನು ಮಂಡಿಸಿದ್ದರೂ ಕೇಂದ್ರ ಸರಕಾರವು ರಾಜ್ಯಕ್ಕೆ ನೀಡಬೇಕಾಗಿದ್ದ ವಾರ್ಷಿಕ ಯೋಜನಾ ವೆಚ್ಚವನ್ನು ಪ್ರಕಟಿಸಿಲ್ಲ. ಅಲ್ಲದೆ 2002-2003 ರ ಹಣಕಾಸು ವರ್ಷಕ್ಕೆ ನೀಡಬೇಕಾಗಿದ್ದ 75 ಕೋಟಿ ರೂ. ಅನುದಾನವನ್ನು ಸಹ ನೀಡಿರಲಿಲ್ಲ. ತ್ರಿಪುರಾ ರಾಜ್ಯಕ್ಕೆ ಸಲ್ಲಬೇಕಾಗಿದ್ದ ಕೇಂದ್ರ ತೆರಿಗೆಗಳ ಪಾಲಿನಲ್ಲಿ 97 ಕೋಟಿ ರೂ. ಕಡಿತ ಮಾಡಿದೆ.

ಬಜೆಟ್ಟಿನಲ್ಲಿ 85.75 ಕೋಟಿ ರೂ. ಕೊರತೆ ಇದ್ದು, ಅಧಿಕ ತೆರಿಗೆ ಸಂಗ್ರಹ, ಕೇಂದ್ರ ಸರಕಾರದ ಯೋಜನೆಗಳಿಂದ ಸಹಾಯ, ಆಡಳಿತ ವೆಚ್ಚದಲ್ಲಿ ಕಡಿತ, ದಕ್ಷ ಹಣಕಾಸು ನಿರ್ವಹಣೆಗಳ ಮೂಲಕ ಸರಿದೂಗಿಸಬಹುದೆಂದು ಹಣಕಾಸು ಸಚಿವರು ತ್ರಿಪುರ ವಿಧಾನಸಭೆಗೆ ತಿಳಿಸಿದರು.

ಕಳೆದ ಆರ್ಥಿಕ ವರ್ಷಕ್ಕಿಂತ 174.5 ಕೋಟಿ ರೂ. ಅಧಿಕ ಆಯವ್ಯಯವನ್ನು ಹೊಂದಿರುವ ಬಜೆಟ್ಟಿನಲ್ಲಿ ಹೊಸ ತೆರಿಗೆಗಳಿಲ್ಲದಿರುವುದು ವಿಶೇಷ. ಹಿಂದೆ ಕೇಂದ್ರದಲ್ಲಿದ್ದ ಸರಕಾರದ ಅಸಹಕಾರ ಮತ್ತು ಉದಾರೀಕರಣ ನೀತಿಗಳ ನಡುವೆಯೂ ಹೊಸ ತೆರಿಗೆಗಳನ್ನು ಹೇರದೇ ಇರುವುದು ಅಲ್ಲಿನ


ಬಜೆಟ್ ಮಂಡಿಸುತ್ತಿರುವ ಅರ್ಥ ಸಚಿವರು

ಸರಕಾರದ ಜನಪರ ನೀತಿಗಳಿಗೆ ಸಾಕ್ಷಿ. 11ನೇ ಹಣಕಾಸು ಆಯೋಗವು ಅಂತಿಮಗೊಳಿಸಿದ್ದರೂ, ಮೊದಲ 4 ವರ್ಷಗಳಲ್ಲಿ ಕೇಂದ್ರ ಸರ್ಕಾರ ತ್ರಿಪುರ ಸರಕಾರಕ್ಕೆ ನಿಗದಿಪಡಿಸಿದ್ದಕ್ಕಿಂತ 306.71 ಕೋಟಿ ರೂ. ಕಡಿತ ಮಾಡಿದೆ.

ವಿಶೇಷ ಪರಿಹಾರ ಅಗತ್ಯ:

ದಿನ ಬೆಳಗಾದರೆ, ಪ್ರತ್ಯೇಕತಾವಾದಿ ಮತ್ತು ಭಯೋತ್ಪಾದನೆಯ 'ಧಾಳಿಯನ್ನು ಎದುರಿಸುವ ತ್ರಿಪುರ ರಾಜ್ಯದ ವಿಶೇಷ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರಕಾರವು ವಹಿಸಿಕೊಳ್ಳಬೇಕೆಂದು ರಾಜ್ಯ ಸರಕಾರ ಒತ್ತಾಯಿಸಿದೆ. ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರಕಾರದ ತಾರತಮ್ಯ ನೀತಿ ಸಲ್ಲದು. ಇಂತಹ ಕಠಿಣ ಪರಿಸ್ಥಿತಿಯಲ್ಲೂ ಹಣಕಾಸು ಭದ್ರತೆಯನ್ನು ಒದಗಿಸಲು ಸರಕಾರ ಶ್ರಮಿಸುವುದು ಹಾಗೂ ಆದ್ಯತಾ ವಲಯಗಳಾದ ಮನೆ, ನೀರಾವರಿ, ಸಾಕ್ಷರತೆ, ಪರಿಶಿಷ್ಟಜಾತಿ ಮತ್ತು ಪಂಗಡಗಳಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ವಿಶೇಷ ಸೌಲಭ್ಯ, ಮೊದಲಾದ ಕ್ಷೇತ್ರಗಳಿಗೆ ಹೆಚ್ಚು ಒತ್ತು ನೀಡಿ ಜನರ ಜೀವನಮಟ್ಟ ಸುಧಾರಿಸಲಾಗುವುದು ಎಂದು ಹಣಕಾಸು ಸಚಿವರು ತಿಳಿಸಿದರು.

ತನ್ನೆಲ್ಲ ಹಣಕಾಸು ಬಿಕ್ಕಟ್ಟಿನ ನಡುವೆ ತ್ರಿಪುರ ಸರಕಾರವು ತನ್ನ ಬಜೆಟ್ಟಿನ ಶೇ 16.32 ರಷ್ಟನ್ನು ಶಿಕ್ಷಣಕ್ಕೆ ಮೀಸಲಾಗಿಟ್ಟಿದೆ. ಕರ್ನಾಟಕ ರಾಜ್ಯ ಶೇ 14 ರಿಂದ 12 ಕ್ಕೆ ಇಳಿಸಿದೆ.

ಬಿಜೆಪಿ ಮತ್ತು ಸಂಘ ಪರಿವಾರದವರ ಪ್ರಜಾಪ್ರಭುತ್ವ ವಿರೋಧಿ ಹುಯಿಲು

ಪುಟ 9 ರಿಂದ

ಇದೇ ಗತಿ ಮುಂದೆಯೂ ಕಾದಿದೆ. ಬಿಜೆಪಿಯ ಸಮೂಹಸನ್ನಿಯೂ ಕಾರಣವಾಗಿ ಜನ ಬದಲಾವಣೆಯನ್ನು ಬಯಸಿ ಕಾಂಗ್ರೆಸ್ಸನ್ನು ನಿರಾಕರಿಸಿದರು. ಆದರೆ ಬಿಜೆಪಿ ಅದೇ ನೀತಿಯನ್ನು ಇನ್ನಷ್ಟು ತೀವ್ರಗೊಳಿಸಿ, ವಿಕಾರಗೊಳಿಸಿತು. ಅಂಥ ಬಂಡವಾಳ ಶಾಹಿ ಪರವಾದ ತನ್ನ ಧೋರಣೆಯನ್ನು ಮುಚ್ಚಿಕೊಳ್ಳಲು ರಾಮಮಂದಿರ, ಹಿಂದುತ್ವ, ಸೋನಿಯಗಾಂಧಿ ವಿದೇಶಿ ಮೂಲ ಇತ್ಯಾದಿ ಭ್ರಾಮಕ ವಿಷಯಗಳನ್ನು ಪ್ರಚಾರ ಮಾಡಿತು. ಆದರೆ ದೇಶದ ಜನತೆಗೆ ದೇವಸ್ಥಾನಗಳ ಕೊರತೆಯಿಲ್ಲ. ನಮ್ಮ ಸಾಹಿತ್ಯದಲ್ಲಂತೂ 'ಜಲಗಾರ' ಕೃತಿ ಈಗ ಅರವತ್ತು ವರ್ಷಗಳ ಹಿಂದೇ ಬಂದಿದೆ. ನಿಜವಾದ ಧಾರ್ಮಿಕ ತನ್ನ ದೇವಸ್ಥಾನಕ್ಕಾಗಿ ಅನ್ಯ ದೇವಸ್ಥಾನವನ್ನು ಕೆಡುಹುವುದನ್ನು ಮುಸ್ಲಿಂ, ಕ್ರಿಶ್ಚಿಯನ್ ಹತ್ಯೆಯನ್ನೂ ಬಯಸುವುದಿಲ್ಲ. ಅಂತಹುದಕ್ಕೆ ಧಕ್ಕೆ ಬಂದಾಗ ಪ್ರಜೆ ಸರ್ಕಾರದ ಕಡೆಗೆ ನೋಡಬಹುದು. ಆದರೆ ಅವರು ಸರ್ಕಾರದಿಂದ ಮೂಲಭೂತ ಸೌಕರ್ಯವಾಗಿ ಉಳಿಯಲೊಂದು ಗುಡಿಸಲು, ಕುಡಿಯಲೊಂದಿಷ್ಟು ನೀರು, ಉಣ್ಣಲು ಹೊಟ್ಟೆ ತುಂಬ ಅನ್ನ, ಮೈಮುಚ್ಚಲು ಬಟ್ಟೆ ಮತ್ತು ಮಕ್ಕಳಿಗೆ ಶಿಕ್ಷಣ. ಇದನ್ನು ಬಿಜೆಪಿ ನಿರ್ಲಕ್ಷಿಸಿತು. 'ಅಭಿವೃದ್ಧಿ' ಎಂಬ ಪರಿಕಲ್ಪನೆ ಈಗ ದಲಿತರ ಮತ್ತು ಮಹಿಳೆಯರ ದೃಷ್ಟಿಕೋನದಿಂದ ವ್ಯಾಖ್ಯಾನಿಸಲ್ಪಡಬೇಕು; ಶ್ರೀಮಂತರ, ಮೇಲ್ಜಾತಿಗಳ ದೃಷ್ಟಿಕೋನದಿಂದ ಅಲ್ಲ.

ಹಾಗಿದ್ದರೆ ಬಿಜೆಪಿಯ ಪ್ರಣಾಳಿಕೆ ಏನಿತ್ತು? ವಿದೇಶದ ಮೂಲದವರು ಪ್ರಧಾನಿ ಆಗಬಾರದು. ಅರ್ಥಾತ್ ಸೋನಿಯಾ ಪ್ರಧಾನಿ ಆಗಬಾರದು. ಕೊನೆಕೊನೆಗೆ ಎಷ್ಟು ಮಟ್ಟಕ್ಕೆ ತಲುಪಿತೆಂದರೆ ಪ್ರಧಾನಿ ವಾಜಪೇಯಿಯಂತಹ ಪ್ರಭಾವಿ ಮತ್ತು ಹಿರಿಯ ರಾಜಕಾರಣಿ ಸಹ ಸೋನಿಯಾರ ವಿದೇಶಿ ಮೂಲದ ಒನ್ ಪಾಯಿಂಟ್ ಪ್ರೋಗ್ರಾಮ್(ಒಂದಂಶದ ಕಾರ್ಯಕ್ರಮ)ಕ್ಕೆ ಬಂದು ತಲುಪಿದರು. ಆದರೂ ಜನತೆ ಬಿಜೆಪಿಯನ್ನು ನಿರಾಕರಿಸಿದೆ. ಕಾಂಗ್ರೆಸ್ ಬಹುಸಂಖ್ಯೆಯಲ್ಲಿ ಬಂದರೆ ಸೋನಿಯಾರೇ ಪ್ರಧಾನಿ ಆಗುತ್ತಾರೆ ಎಂಬುದನ್ನು ಎಲ್ಲರಿಗೂ ತಿಳಿದ (ಅಂಡರ್‌ಸ್ಟ್ಯಾಂಡಿಂಗ್) ವಿಷಯವೇ ಆಗಿತ್ತು. ಅದನ್ನು ಅರಿತೇ ಅವರಿಗೆ ವೋಟು ಮಾಡಿದ್ದಾರೆ. ಈಗ ಬಿಜೆಪಿ ಮತ್ತೆ ಸೋನಿಯಾರಿಗೆ ಸಂವಿಧಾನಬದ್ಧವಾದ ಹಕ್ಕನ್ನು ಕಸಿಯಲು ಅಸಂವಿಧಾನಿಕ, ಅಪ್ರಜಾಪ್ರಭುತ್ವವಾದಿ ಬಗೆಯ ಭಯೋತ್ಪಾದನೆಯನ್ನು ಶುರು ಮಾಡಿದ್ದಾರೆ.

ಸೋನಿಯಾ ಪ್ರಧಾನಿಯಾದರೆ ಉಡುಪಿ ಮಠದ ಸ್ವಾಮಿಯೋರ್ವರು ತಾನು ಪರದೇಶಕ್ಕೆ ಹೋಗುವುದಾಗಿ ಹೇಳಿದ್ದಾರೆ. ಮಠದ ಬಾಜುವಿನಲ್ಲೇ ತಿಂದೊಗೆದ ಎಂಜಲು ಬಾಳೆಯನ್ನು ನೆಕ್ಕಿ ಬದುಕುವ ಜನರಿದ್ದಾರೆ. ಅವರ ಪಾಡನ್ನು ತುಸುವಾದರೂ ನಿವಾರಿಸಲು ಪ್ರಯತ್ನಿಸದ ಧಾರ್ಮಿಕ ಗುರು ವಿದೇಶಿ ಮೂಲದವರು ಪ್ರಧಾನಿಯಾದರೆ ವಿದೇಶಕ್ಕೆ ಹೋಗುತ್ತಾರೆ! ಇನ್ನಾರೋ 'ಕ್ವಿಟ್ ಇಂಡಿಯಾ' ಸಾರಬೇಕೆಂದು ಹೇಳಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾದ 'ಕ್ವಿಟ್ ಇಂಡಿಯಾ' ದ ಸಮಯದಲ್ಲಿ ಇಂಗ್ಲೀಷರ ಪರವಾಗಿ ನಿಂತವರು ಮತ್ತು ಅಡಗಿಕೊಂಡವರು ಈಗ 'ಕ್ವಿಟ್ ಇಂಡಿಯಾ' ಕರೆ ಕೊಡುತ್ತಾರೆ! ಅಂದರೆ ಅವರಿಗೆ ಅವರೇ ಕ್ವಿಟ್ ಇಂಡಿಯಾದಿಂದ ಮಾಡಿಕೊಳ್ಳಲು. ಸುಷ್ಮಾಸ್ವರಾಜ್ ಬೋಳು ಕೆತ್ತಿಕೊಳ್ಳುತ್ತಾರಂತೆ. ಅದು ಯಾವ ರೀತಿಯ ಹಿಂದುತ್ವವೋ ತಿಳಿಯದು. ನಮ್ಮ ಹೆಚ್ಚಿನ ಪ್ರಚಾರ ಮಾಧ್ಯಮಗಳು 'ಸೋನಿಯಾ ಪ್ರಧಾನಿಯಾಗುವುದರ ವಿರುದ್ಧ ದೇಶದಾದ್ಯಂತ ಚಳುವಳಿಗಳೆದ್ದಿವೆ' ಎಂದೇ ಪ್ರಚಾರ ಮಾಡುತ್ತವೆ. ಇಂಥ ಮಾಧ್ಯಮಗಳ ಪಾಲಿಗೆ ದೇಶವೆಂದರೆ ಸಂಘ ಪರಿವಾರ ಮತ್ತು ಬಿಜೆಪಿ. ಇದೊಂದು ಎಲ್ಲರ ದಾರಿಯನ್ನು ತಪ್ಪಿಸುವ ಹುನ್ನಾರ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





'ಎಲ್ಲರಿಗೂ ಆರೋಗ್ಯ ಈಗಲೇ'

ಜನಾರೋಗ್ಯಕ್ಕೆ ಜನಾಂದೋಲನ (ಮುಂಬೈ ಘೋಷಣೆ)

ಹೆಚ್.ಐ.ವಿ. ಹಾಗೂ ಏಡ್ಸ್ ಪಿಡುಗನ್ನು ಎದುರಿಸುವುದು

ಆಫ್ರಿಕಾ ಹಾಗೂ ಏಶಿಯಾದಲ್ಲಿ 2000 ಇಸವಿಯಿಂದೀಚೆಗೆ ಹೆಚ್.ಐ.ವಿ ಪಿಡುಗು ಹೆಚ್ಚುತ್ತಿದೆ. ಇದಕ್ಕೆ ಒಂದು ಮುಖ್ಯ ಕಾರಣ ಜಾಗತೀಕರಣ - ಜನರ ವಲಸೆ ಹೋಗುವಿಕೆ, ಸಾಮಾಜಿಕ ಹಾಗೂ ಆರ್ಥಿಕ ನೀತಿ. ಹೆಚ್.ಐ.ವಿ ಹಾಗೂ ಏಡ್ಸ್ ಜೊತೆಗೆ ಬಡತನಕ್ಕೆ ಸಂಬಂಧಿಸಿದ ಇತರ ಸೋಂಕು ರೋಗಗಳು (ಕ್ಷಯ) ಹೆಚ್ಚಾಗುತ್ತಿವೆ. ಹೆಚ್.ಐ.ವಿಗೆ ಚಿಕಿತ್ಸೆಗಳು ದೊರಕುತ್ತಿವೆ, ಆದರೆ ದುಬಾರಿ. ಆ ಚಿಕಿತ್ಸೆಗಳು ರೋಗಿಯ ಜೀವತಾವಧಿಯನ್ನು ಹೆಚ್ಚಿಸುತ್ತವಲ್ಲದೇ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯ. ಆದರೆ ಈ ಔಷಧಿಗಳು ದುಬಾರಿಯಾಗಿ ರುವುದರಿಂದ ಈ ಔಷಧಿಗಳನ್ನು ಕೊಂಡುಕೊಳ್ಳಲು ಆಗುತ್ತಿಲ್ಲ. ಅನಾಥ ಮಕ್ಕಳು ಹಾಗೂ ಮಹಿಳೆಯರು ಹೆಚ್.ಐ.ವಿ. ಪೀಡಿತರಾದಲ್ಲಿ ಅವರ ಕಷ್ಟ ಹೇಳತೀರದು.

ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ಏಡ್ಸ್ ರೋಗಕ್ಕೆ ನೆರವು ನೀಡಲು ಮುಂದೆ ಬಂದು, ಮೂರು ದಶಲಕ್ಷ ಜನರಿಗೆ 2005 ರವರೆಗೆ ಚಿಕಿತ್ಸೆಗೆ ನೆರವು ಘೋಷಿಸಿದೆ. ಇದನ್ನು 3X5 ಗುರಿ ಎಂದು ಕರೆಯುತ್ತಾರೆ. ಆದರೆ ಈ ನೆರವು ಕೇವಲ ಚಿಕಿತ್ಸೆಗಾಗಿ. ಇದು ಏಡ್ಸ್ ಪಿಡುಗನ್ನು ಕಡೆಗಣಿಸುತ್ತಿದೆ.

ನಾಗರೀಕ ಸಮಾಜ, ಸರ್ಕಾರದ ಕರ್ತವ್ಯ

ಚಿಕಿತ್ಸೆ ಎಲ್ಲರ ಹಕ್ಕು, ಅದು ಎಲ್ಲರಿಗೂ ದೊರಕಬೇಕು.

ಚಿಕಿತ್ಸೆ ದುಬಾರಿಯಾಗಲು ಕಾರಣ ಹೊಸ ಪೇಟೆಂಟ್ ವ್ಯವಸ್ಥೆ. ಹೊಸ ಪೇಟೆಂಟ್ ವ್ಯವಸ್ಥೆಯನ್ನು ವಿರೋಧಿಸಬೇಕು.

ಸಮಗ್ರ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಸ್ಥಾಪಿಸಬೇಕು.

ಏಡ್ಸ್ ಬಗ್ಗೆ ಹಾಗೂ ಲೈಂಗಿಕ ಸುರಕ್ಷತೆ ಬಗ್ಗೆ ಮಾಹಿತಿ ಕೊಡಬೇಕು.

ಏಡ್ಸ್ ರೋಗಿಗಳಿಗೆ ಗೌರವಯುತವಾಗಿ ಚಿಕಿತ್ಸೆ ದೊರಕುವ ವ್ಯವಸ್ಥೆಯಾಗಬೇಕು.

ವಿಶ್ವ ಆರೋಗ್ಯ ಸಂಸ್ಥೆ ಔಷಧಿ ಬೆಲೆ ಕಡಿಮೆ ಮಾಡಲು ಪ್ರಯತ್ನಿಸಬೇಕು.

ಏಡ್ಸ್ ರೋಗಿಗಳಿಗೆ ಎಲ್ಲ ಹಂತದ ಚರ್ಚೆಗಳಲ್ಲಿ ಭಾಗವಹಿಸಲು ಅವಕಾಶ ನೀಡಬೇಕು.

ಪರಿಸರ ನಾಶವನ್ನು ಹಿಮ್ಮೆಟ್ಟಿಸುವುದು

ಜಾಗತಿಕ ಮಟ್ಟದಲ್ಲಿ ಪರಿಸರನಾಶ ಜನಾರೋಗ್ಯಕ್ಕೆ ಅಪಾಯ ಉಂಟುಮಾಡುತ್ತಿದೆ. ಪರಿಸರ ನಾಶದಿಂದ ನದಿಗಳು ಬತ್ತಿ ಹೋಗುತ್ತಿವೆ. ಉದಾ: ಫಿಲಿಪ್ಪೈನ್ಸ್ ದೇಶದ ಅಬ್ರಾ ನದಿ, ಭಾರತದ ನರ್ಮದಾ ನದಿ. ಈ ನದಿಯ ಮೇಲೆ ಅವಲಂಬಿತ ಕುಟುಂಬಗಳಿಗೆ ಈಗಾಗಲೇ ಅಪಾಯ ಬಂದಾಗಿದೆ.

ಕೀಟನಾಶಕಗಳಲ್ಲಿನ, ಗೊಬ್ಬರದಲ್ಲಿನ ವಿಷ (ಏಜೆಂಟ್ ಆರೆಂಜ್), ಈರಾಕ್ ಯುದ್ಧದಲ್ಲಿ ಸ್ಫೋಟಗೊಂಡ ಯುರೇನಿಯಂ ಧೂಳು, ಫಿಲಿಪ್ಪೈನ್ಸ್ ದೇಶದಲ್ಲಿ ಅಮೇರಿಕಾದ ಮಿಲಿಟರಿ ಆಕ್ರಮಣದಿಂದ ಉಂಟಾದ ತ್ಯಾಜ್ಯ, ಪರಿಸರ ನಾಶದ ಕೆಲವು ಉದಾಹರಣೆಗಳು. ಮೊದಲನೇ ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಅವುಗಳ ಸರಕಾರದ ತೀರ್ಮಾನಗಳು ಈ ಪರಿಸರ ನಾಶಕ್ಕೆ ಕಾರಣವಾಗಿದೆ.

ನಾಗರೀಕ ಸಮಾಜ ಹಾಗೂ ಸರಕಾರ ಏನು ಮಾಡಬಹುದು?

ಜನಾರೋಗ್ಯ ಸಂಘಟನೆಗಳು ಪರಿಸರ ವಾದಿಗಳೊಂದಿಗೆ ಸೇರಿ ಪರಿಸರ ನಾಶದ ವಿರುದ್ಧ ಹೋರಾಟ ಮಾಡಬೇಕು. ಪರಿಸರ ನಾಶವನ್ನು ಹಿಮ್ಮೆಟ್ಟಿಸುವುದು ಅವರ ಉದ್ದೇಶವಾಗಬೇಕು. ಸರಕಾರ ಪರಿಸರ ನಾಶಮಾಡುವ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲು ಕಾಯಿದೆ ಜಾರಿಗೊಳಿಸಬೇಕು.

ಮುಂದುವರಿಯುವುದು

ಜೂನ್ 8 ರ ಶುಕ್ರ ಸಂಕ್ರಮಣ – ಅಪರೂಪದ ಖಗೋಳ ವಿದ್ಯಮಾನ

ಜೂನ್ 8 ರಂದು ಶುಕ್ರ ಗ್ರಹ ಸೂರ್ಯನ ಮುಂದೆ ಸುಮಾರು ಆರು ಗಂಟೆಗಳು ಹಾದು ಹೋಗುವ 'ಶುಕ್ರ ಸಂಕ್ರಮಣ' ಅಪರೂಪದ ಖಗೋಳ ವಿದ್ಯಮಾನ. 122 ವರ್ಷಗಳ ನಂತರ ಮತ್ತೆ ನಡೆಯುತ್ತಿರುವ ಈ ಅಪೂರ್ವ ದೃಶ್ಯದ ಮಹತ್ವದ ಬಗ್ಗೆ ಕಿರು ಪರಿಚಯ

ಆಕಾಶದಲ್ಲಿ ಕಾಣಬರುವ (ಹಗಲಲ್ಲೂ ರಾತ್ರಿಯಲ್ಲೂ) ಸೂರ್ಯ, ನಕ್ಷತ್ರಗಳು, ಗ್ರಹಗಳು ಮನುಷ್ಯನಲ್ಲಿ ಸಾವಿರಾರು ವರ್ಷಗಳಿಂದ ಕುತೂಹಲ ಮೂಡಿಸಿದೆ. ಖಗೋಳ ವಿಜ್ಞಾನ ಮನುಷ್ಯ ಅಭಿವೃದ್ಧಿ ಪಡಿಸಿದ ಮೊದಲ ವಿಜ್ಞಾನ ಎಂದು ಹೇಳಬಹುದು. ಖಗೋಳ ವಿಜ್ಞಾನ - ಆದಿ ಕಾಲದ ಭ್ರಮೆಗಳು, ಮೂಢನಂಬಿಕೆಗಳು, ಬರಿಯ ವೀಕ್ಷಣೆಗಳ ಹಂತದಿಂದ ಹಾದು ಬಂದದ್ದು. ಆತನ ಜೀವನ ದೃಷ್ಟಿಕೋನದ ಮೇಲೂ ಗಾಢ ಪ್ರಭಾವ ಬೀರಿವೆ. ಭೂಮಿ ಇಡೀ ಜಗತ್ತಿನ ಕೇಂದ್ರ, ಮನುಷ್ಯ ಈ ಭೂಮಿಯ ಕೇಂದ್ರ ಎಂಬ ಮೊದಲ ದೃಷ್ಟಿಕೋನದಿಂದ ಜಗತ್ತು, ಜೀವರಾಶಿ ಬಗ್ಗೆ ವೈಜ್ಞಾನಿಕ ಮಾಹಿತಿ ಹೆಚ್ಚು ಹೆಚ್ಚು ತಿಳಿದುಬಂದಂತೆ, ಮನುಷ್ಯನ ಜೀವನ ದೃಷ್ಟಿಕೋನವೂ ಬದಲಾಗಿದೆ. ದೇವರು, ದೇವತೆಗಳು ಮತ್ತು ಅದರ ಸುತ್ತ ಬೆಳೆದ ಧರ್ಮ-ಮತಗಳ ಮೇಲೂ, ಖಗೋಳ ವಿಜ್ಞಾನ ತೀವ್ರ ಪ್ರಭಾವ ಬೀರಿದೆ. ಮೊದಲ ಬಾರಿ ಸೂರ್ಯನ ಸುತ್ತ ಭೂಮಿ ತಿರುಗುತ್ತದೆ. ಭೂಮಿ ಸೂರ್ಯನ ಸುತ್ತ ತಿರುಗುವುದಿಲ್ಲ. ಸೂರ್ಯ ನಮ್ಮ ತತ್ಕ್ಷಣದ ಸುತ್ತಮುತ್ತಲಿನ 'ಜಗತ್ತಿನ' ಕೇಂದ್ರ . ಆದರೆ ಇಂತಹ ನಕ್ಷತ್ರಗಳು, ನಕ್ಷತ್ರ ಮಂಡಲಗಳು ಅಸಂಖ್ಯಾತ - ಎಂದೆಲ್ಲಾ ಮನುಷ್ಯನ ದೃಷ್ಟಿಕೋನದಲ್ಲೂ ಮಹಾನ್ ಪರಿವರ್ತನೆ ತಂದಿವೆ. ಆಕಾಶಕಾಯಗಳಲ್ಲಿ ಸೂರ್ಯ, ಚಂದ್ರ, ಗ್ರಹಗಳು, ನಕ್ಷತ್ರಗಳು, ನಕ್ಷತ್ರ ಮಂಡಲಗಳು, ಉಲ್ಕೆಗಳು, ಧೂಮಕೇತುಗಳ ಗುರುತಿಸುವ ಮೂಲಕ ಅವುಗಳ ಚಲನವಲನ ವೀಕ್ಷಿಸುವ ಮೂಲಕ ಖಗೋಳ ವಿಜ್ಞಾನ ಬಹಳ ಬೆಳೆದಿದೆ.

ಜೂನ್ 8 ರಂದು ಕಾಣುವ 'ಶುಕ್ರ ಸಂಕ್ರಮಣ' ಈಗ ಜೀವಿಸಿರುವವರಲ್ಲಿ ಯಾರು ನೋಡಿಲ್ಲದ ಅಪೂರ್ವದೃಶ್ಯ. 122 ವರ್ಷಗಳ ನಂತರ ಮತ್ತೆ ಗೋಚರಿಸತ್ತಿದೆ ಎಂಬುದು ಇನ್ನೂ ವಿಶೇಷ. ಖಗೋಳ ವಿಜ್ಞಾನ ಸಾಕಷ್ಟು ಬೆಳೆದಿದ್ದು, ಇಂತಹ ಹಲವು ಖಗೋಳ ವಿದ್ಯಮಾನಗಳನ್ನು ನಿಖರವಾಗಿ (ವರ್ಷ, ದಿನ, ಗಂಟೆ, ಮಿನಿಟುಗಳಲ್ಲಿ) ಭವಿಷ್ಯ ನುಡಿಯುವುದು ಸಾಧ್ಯವಾಗಿದೆ. ಆದರೆ ಇಂತಹ ಭವಿಷ್ಯ ನುಡಿಯನ್ನು ನಿಜವಾಗಿಯೂ ವ್ಯಾಪಕವಾಗಿ ವೀಕ್ಷಿಸುವುದು, ಅದರ ಹಿಂದಿನ ವೈಜ್ಞಾನಿಕ ನಿಯಮಗಳನ್ನು ಖಚಿತಪಡಿಸುವುದು ಇಂತಹ ವಿದ್ಯಮಾನಗಳ ಮಹತ್ವ.



ಸಂಕ್ರಮಣಗಳ ಬಗ್ಗೆ ತಿಳಿಸಿಕೊಟ್ಟ ಕೆಪ್ಲರ್

ಭೂಮಿ ಸೂರ್ಯನ ಸುತ್ತು ತಿರುಗತ್ತದೆ. ಚಂದ್ರ ಭೂಮಿಯ ಸುತ್ತು ತಿರುಗುತ್ತದೆ. ಆದ್ದರಿಂದ ಹಲವು ಬಾರಿ ಚಂದ, ಸೂರ್ಯ ಭೂಮಿಗಳ ನಡುವೆ ಬರುತ್ತದೆ. ಇದೇ ಸೂರ್ಯಗ್ರಹಣಕ್ಕೆ ಕಾರಣ. ಹಾಗೆನೇ ಭೂಮಿ ಸೂರ್ಯ-ಚಂದ್ರರ ನಡುವೆ ಬಂದಾಗ ಚಂದ್ರಗ್ರಹಣವಾಗುತ್ತದೆ.

ಇದೇ ರೀತಿ ಸೌರವ್ಯೂಹದ ವ್ಯವಸ್ಥೆಯ ನಮ್ಮ ತಿಳುವಳಿಕೆಯಿಂದ ಸೂರ್ಯ-ಭೂಮಿಗಳ ನಡುವೆ ಇನ್ನೂ ಎರಡು ಗ್ರಹಗಳು ಬರುತ್ತವೆ. ಅವೇ ಶುಕ್ರ (ನಾವು ಸಾಮಾನ್ಯವಾಗಿ ಬೆಳ್ಳಿಚುಕ್ಕಿ ಎಂದು ಕರೆಯುವ) ಮತ್ತು ಬುಧ ಗ್ರಹಗಳು. ಅವು ಸೂರ್ಯ ಮತ್ತು ಭೂಮಿಗಳ ನಡುವೆ ಬಂದಾಗ ಗ್ರಹಣ ಏಕಾಗುವುದಿಲ್ಲ? ಇದಕ್ಕೆ ಕಾರಣ ಇವು ಚಂದ್ರನಿಗೆ ಹೋಲಿಸಿದರೆ ಬಹಳ ದೂರ ಇರುವುದು. ಇವೆರೆಡು ಗ್ರಹಗಳು ಚಂದ್ರನಿಗಿಂತ ದೊಡ್ಡವಾದರೂ



ಅವು ಸೂರ್ಯನ ಮುಂದೆ ಬರುವಾಗ ಒಂದು ಚುಕ್ಕೆಯಂತೆ ಕಾಣುತ್ತವೆ. ಜೂನ್ 8 ರ ಶುಕ್ರ ಸಂಕ್ರಮಣದಲ್ಲಿ ಸೂರ್ಯನ ಮೂವತ್ತನೆಯ ಒಂದು ಭಾಗದಷ್ಟು ಚುಕ್ಕೆ ಸುಮಾರು ಆರು ಗಂಟೆಗಳ ಕಾಲ ಸೂರ್ಯನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾದು ಹೋಗುತ್ತದೆ. ಆದರೆ ಇದು ಸೂರ್ಯ-ಚಂದ್ರ ಗ್ರಹಗಳಷ್ಟು ಇರದೆ, ತೀರಾ ಅಪರೂಪ ಯಾಕೆ? ಇದಕ್ಕೆ ಹಲವು ಕಾರಣಗಳಿವೆ. ಮುಖ್ಯ ಕಾರಣ ಭೂಮಿ ಸೂರ್ಯನ ಸುತ್ತದ ಕಕ್ಷೆ ಮತ್ತು ಶುಕ್ರನ ಕಕ್ಷೆ ಒಂದು ಪಾತಳಿಯಿಲ್ಲದೆ ಇರುವುದು (ವಿವರಗಳಿಗೆ ಬಾಕ್ಸ್ ನೋಡಿ) ಕೆಪ್ಲರ ಮೊದಲ ಬಾರಿಗೆ ಬುಧ ಮತ್ತು ಶುಕ್ರ ಸಂಕ್ರಮಣಗಳ ಬಗ್ಗೆ ಲೆಕ್ಕ ಹಾಕಿ ಇವು ನಡೆಯಲಿರುವ ದಿನಾಂಕ ಮತ್ತು ಸಮಯವನ್ನು ಪ್ರಕಟಿಸಿದ. ಇದು 17ನೇ ಶತಮಾನದಲ್ಲಿ

ಬುಧ-ಶುಕ್ರ ಜೋಡಿ ಸಂಕ್ರಮಣಗಳು

ಬುಧಗ್ರಹದ ಸಂಕ್ರಮಣಗಳು 6 ಅಥವಾ 13 ವರ್ಷಗಳಿಗೊಮ್ಮೆ ನಡೆಯುತ್ತವೆ. 1999 ರಲ್ಲಿ ನಡೆದಿತ್ತು. ಕಳೆದ ವರ್ಷ 2003 ರಲ್ಲಿ ನಡೆದಿತ್ತು. ಶುಕ್ರಗ್ರಹದ ಸಂಕ್ರಮಗಳು ವಿರಳ. ಎಂಟು ವರ್ಷದ ಜೋಡಿಗಳು ನೂರಕ್ಕೂ ಹೆಚ್ಚು ವರ್ಷಗಳ ಅಂತರದಲ್ಲಿ ನಡೆಯುತ್ತವೆ. 1631-39 ರ ಜೋಡಿಯ ನಂತರ, 1761-69 ರಲ್ಲಿ, 1874-82 ರಲ್ಲಿ ನಡೆದವು. ಇಂತಹ ಜೋಡಿಯ ಅವಧಿಯಲ್ಲಿ 2004-2012 ರಲ್ಲಿ ಈಗ ನಾವಿದ್ದೇವೆ.

ಆನಂತರ ಶುಕ್ರ ಸಂಕ್ರಮಣ ಪ್ರತಿಬಾರಿ ನಡೆದಾಗ ಕೌತುಕ, ಆಸಕ್ತಿ, ಸಂಭ್ರಮ ಉಂಟು ಮಾಡಿದೆ. 18ನೇ ಶತಮಾನದಲ್ಲಿ ಭೂಮಿ ಮತ್ತು ಸೂರ್ಯನ ನಡುವಿನ ನಿಖರ ದೂರ ಅಳೆಯುವುದು ಪ್ರಮುಖ ವೈಜ್ಞಾನಿಕ ಸಮಸ್ಯೆಯಾಗಿತ್ತು. ಧೂಮಕೇತುವಿಗೆ ಹೆಸರು ಕೊಟ್ಟ ಹ್ಯಾಲಿ ಎಂಬ ವಿಜ್ಞಾನಿ ಶುಕ್ರ ಸಂಕ್ರಮಣದಂದು ಇಂತಹ ನಿಖರವಾದ ಅಳತೆಗೆ ಸಹಾಯವಾಗುತ್ತದೆ ಎಂದು ಸೂಚಿಸಿದ. ಅಂದಿನಿಂದ ಶುಕ್ರ ಸಂಕ್ರಮಣಗಳಿಗೆ ಹೆಚ್ಚಿನ ಮಹತ್ವ ಬಂದಿದೆ. ಶುಕ್ರ ಸಂಕ್ರಮಣಗಳ ಈ ನಿಖರವಾದ ಅಳತೆ ಮಾಡುವ, ಮರು-ಖಚಿತಪಡಿಸಿಕೊಳ್ಳುವ ಸಂದರ್ಭಗಳಿವೆ.


ಜಾಗತೀಕರಣ-ಕೋಮುವಾದಿ ಶಕ್ತಿಗಳು ಇಂದು ಸಾಮಾನ್ಯ ಜನರನ್ನು ಪುನಃ ಅವೈಜ್ಞಾನಿಕ - ಧಾರ್ಮಿಕ ದೃಷ್ಟಿಕೋನದತ್ತ ತಳ್ಳುವ ಪ್ರಯತ್ನ ನಡೆಸುತ್ತಿವೆ. ಮನುಷ್ಯ ಸಾವಿರಾರು ವರ್ಷಗಳಿಂದ ಬೆಳೆಸಿದ, ಆತನ ಜೀವನ-ದೃಷ್ಟಿಕೋನ ಬದಲಾಯಿಸುವ, **ಇಂತಹ ಖಗೋಳ ವಿದ್ಯಮಾನಗಳು, ಇಂತಹ ಭೌತಿಕ ದೃಷ್ಟಿಕೋನಗಳನ್ನು ಪುನರುಚ್ಚರಿಸುವ ವಿಜ್ಞಾನದ ವಿಜಯ ಸಾಮೂಹಿಕವಾಗಿ ಆಚರಿಸುವ ಸಂದರ್ಭಗಳಾಗಬೇಕು.**

ಶುಕ್ರ ಸಂಕ್ರಮಣಗಳೇಕೆ ವಿರಳ

ಶುಕ್ರ ಗ್ರಹ ಚಂದ್ರನಿಗಿಂತ ದೊಡ್ಡ ಗಾತ್ರದ್ದು. ಆದರೂ ಅದು ಚಂದ್ರನಂತೆ ಸೂರ್ಯನನ್ನು ಪೂರ್ತಿಯಾಗಿ ಮುಚ್ಚಲಾರದು. ಇದಕ್ಕೆ ಕಾರಣ ಅದರ ದೂರ. ದೂರ ಸರಿದಂತೆ ಯಾವುದೇ ವಸ್ತು ಚಿಕ್ಕದಾಗಿ ಕಾಣುತ್ತದೆ. ಭೂಮಿಯಿಂದ ಶುಕ್ರದ ದೂರ ವ್ಯತ್ಯಾಸವಾಗುತ್ತಲೇ ಇರುತ್ತದೆ. ಗರಿಷ್ಠ ಸುಮಾರು 258 ಮಿಲಿಯನ್ ಕಿ.ಮೀ.ಗಳು, ಕನಿಷ್ಠ ಕೇವಲ(!) 42 ಮಿಲಿಯನ್ ಕಿ.ಮೀ.ಗಳು. ಆದರೆ ಕನಿಷ್ಠ ದೂರದಲ್ಲಿದ್ದಗಲೂ (ಉದಾಹರಣೆಗೆ ಜೂನ್ 8 ರಂದು) ಅದು ಸೂರ್ಯನ ಮೂವತ್ತನೆಯ ಒಂದು ಭಾಗದಷ್ಟು ಮಾತ್ರ ಕಾಣುತ್ತದೆ. ಆದ್ದರಿಂದ ಪ್ರತಿಬಾರಿ ಅದು ಸಂಜೆಯಿಂದ ಮುಂಜಾವಿಗೆ ಪಾಳಿ ಬದಲಾಯಿಸುವಾಗ ಭೂಮಿ-ಸೂರ್ಯ ನಡುವೆ ಹಾದು ಹೋದಾಗಲೂ (ಇದಕ್ಕೆ ಯುತಿ ಎಂದು ಹೆಸರು) ಸಂಕ್ರಮಣ ಉಂಟಾಗುವುದಿಲ್ಲ, ಈ ಚಿಕ್ಕ ಬಿಲ್ಲೆ ಸೂರ್ಯನ ಮೇಲ್ಭಾಗದಿಂದಲೋ ಕೆಳಭಾಗದಿಂದಲೋ ಹಾದು ಹೋದಂತೆ ಕಾಣುವುದು.

ಪ್ರತಿ ಯುತಿಯಲ್ಲೂ ಮೂರೂ ಕಾಯಗಳು ಒಂದೇ ರೇಖೆಯಲ್ಲಿ ಬಾರದಂತಾಗಲು ಇನ್ನೊಂದು ಕಾರಣವಿದೆ. ಅದೇ ಶುಕ್ರದ ಕಕ್ಷೆಯ ಓರೆಕೋನ. ಇದು ಕೇವಲ ಮೂರು ಡಿಗ್ರಿಗಳಷ್ಟೇ ಆದರೂ ಸರಳರೇಖೆಯಲ್ಲಿ ಅದು ಹಾದುಹೋಗದಂತೆ ಮಾಡುತ್ತದೆ. ಈ ಎರಡೂ ಕಕ್ಷೆಗಳ ತಲಗಳು ಒಂದನ್ನೊಂದು ಹಾಯುವ ಪರ್ವರೇಖೆ ಎಂಬುದರ ಮೇಲೆ ಭೂಮಿ ಮತ್ತು ಶುಕ್ರ ಇದ್ದರೆ ಮಾತ್ರ ಸಂಕ್ರಮಣ ಸಾಧ್ಯ. ಇದು ಜೂನ್ ಮತ್ತು ಡಿಸೆಂಬರ್‌ನಲ್ಲಿ ಸಾಧ್ಯ. ಹೀಗಾಗಿ ಸಂಕ್ರಮಣಗಳು ನಿರ್ದಿಷ್ಟ ದಿನಾಂಕಗಳಂದು ಮಾತ್ರ ನಡೆಯುತ್ತವೆ. 1631, 39ರ ಜೋಡಿ ಮತ್ತು 1874-82ರ ಜೋಡಿ ಸಂಕ್ರಮಣಗಳು ಡಿಸೆಂಬರ್‌ನಲ್ಲಿ ನಡೆದವು. 1761-69ರ ಜೋಡಿ ಜೂನ್ ತಿಂಗಳದ್ದು ಬರಲಿರುವ 2004-12 ಜೋಡಿಯೂ ಅಷ್ಟೇ.

ಮುಂದಿನ ಜೋಡಿ 2117ರ ಡಿಸೆಂಬರ್ 11 ಮತ್ತು 2125ರ ಡಿಸೆಂಬರ್ 8 ರಲ್ಲಿ ನಡೆಯಲಿದೆ. ನಿಮ್ಮ ಮೊಮ್ಮಕ್ಕಳಿಗಾದರೂ ನೋಡಲು ಸಿಗಬಹುದು.



ಶುಕ್ರ ಗ್ರಹದ ಸಂಕ್ರಮಣ

ಲೇ : ಬಿ.ಎಸ್.ಶೈಲಜಾ

ಬೆಲೆ : ರೂ. 30

ಪ್ರಕಾಶಕರು
ನವಕರ್ನಾಟಕ ಪ್ರಕಾಶನ
ಬೆಂಗಳೂರು


ಜೋತಿಷ್ಯ

ಮೌಢ್ಯಗಳ ಬಿತ್ತಿಯೇ ಅಳುತ್ತ ದೇಶ
ಮುಗ್ಧರನು ತುಳಿದಟ್ಟ ಮಾಡುತ್ತ ಮೋಸ
ಹೀಗಾಗಿ ಮೌಢ್ಯತೆಯ ಜೋತಿಷ್ಯ ಗೊತ್ತೆ
ಶಾಸನದ ಮಾನವಲಿಕೆ ತೊರಟಟರು ಮತ್ತೆ
- ವಿಚಂಬಾರಿ

ಶತಮಾನದ ಅಪ್ರತಿಮ ಮಾರ್ಕ್ಸ್‌ವಾದಿ ಬುದ್ಧಿಜೀವಿ

ಪಾಲ್ ಸ್ವೀಝಿ (1910-2004)

ಇಪ್ಪತ್ತನೇ ಶತಮಾನದ ಅಪ್ರತಿಮ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳೊಬ್ಬರಾಗಿದ್ದ ಪಾಲ್ ಸ್ವೀಝಿ ತಮ್ಮ ಸಾರ್ಥಕ 94 ವರ್ಷಗಳ ತುಂಬುಜೀವನದ ನಂತರ ಫೆಬ್ರವರಿ 28 ರಂದು ತೀರಿಕೊಂಡರು. ಅಮೆರಿಕದ ಆಗರ್ಭ ಶ್ರೀಮಂತ ಮನೆತನದಲ್ಲಿ ಜನಿಸಿ ಮಾರ್ಕ್ಸ್‌ವಾದವನ್ನು ಅಪ್ಪಿಕೊಂಡ ಪಾಲ್, ತಮ್ಮ ಜೀವನವನ್ನು ಸಮಕಾಲೀನ ಸಮಾಜದ ಮಾರ್ಕ್ಸ್‌ವಾದಿ ಅಧ್ಯಯನಕ್ಕೆ ಸಮರ್ಪಿಸಿಕೊಂಡರು. ಸಮಾಜವಾದಿ ಶತಮಾನದಲ್ಲಿ ಸಮಾಜವಾದದ ಬಗ್ಗೆ ಗಹನವಾದ ವಿಶ್ಲೇಷಣೆಗೆ, ಅಧ್ಯಯನಕ್ಕೆ ಮೀಸಲಾದ 'ಮಂಥ್‌ಲೀ ರಿವ್ಯೂ'ವನ್ನು 50 ವರ್ಷಗಳಷ್ಟು ಹೆಚ್ಚು ಕಾಲ ನಡೆಸಿ(ಈಗಲೂ ಅದು ಮುಂದುವರೆದಿದೆ)ಕೊಂಡು ಬಂದ ಕೀರ್ತಿ ಅವರದ್ದು. 'ಬಂಡವಾಳಶಾಹಿ ಬೆಳವಣಿಗೆಯ ಸಿದ್ಧಾಂತ' ಮತ್ತು 'ಗುತ್ತೇದಾರಿ ಬಂಡವಾಳಶಾಹಿ' ಅವರು ಬರೆದ ಶತಮಾನದ ಮೇರುಕೃತಿಗಳು. ಶತಮಾನದ ಪ್ರಮುಖ ಸಮಾಜವಾದಿ ಚರ್ಚೆಗಳಲ್ಲಿ ಭಾಗವಹಿಸಿ, ಸಮಾಜವಾದಿ ಚಿಂತನೆಗೆ ಮೂಲಭೂತ ಕಾಣಿಕೆ ಕೊಟ್ಟವರು ಪಾಲ್‌ಸ್ವೀಝ್. ಈ ಮಹಾಚೇತನದ ಕಿರು ಪರಿಚಯ.



ಶರತ್‌ಚಂದ್ರ

ಪಾಲ್ ಮರ್ಲೋರ್‌ಆರ್ ಸ್ವೀಝಿ ಅಮೆರಿಕದ ಪೂರ್ವ ಕರಾವಳಿಯ ಆಗರ್ಭ ಶ್ರೀಮಂತರ ಮನೆತನದಲ್ಲಿ ಹುಟ್ಟಿದವರು. ಅವರ ತಂದೆ ಪ್ರಸಿದ್ಧ ಬ್ಯಾಂಕೊಂದರ ಹಿರಿತನ ವಹಿಸಿದವರು. ಹಾರ್ವರ್ಡ್ ವಿಶ್ವ ವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಯನಕ್ಕೆ ತೆರಳಿದ ಪಾಲ್‌ಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಪಾಲ್ ಸಾಮ್ಯುಲ್‌ಸನ್ ಸಹಪಾಠಿಯಾಗಿದ್ದರು. ಅವರಿಬ್ಬರು ಇನ್ನೊಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೋಸೆಫ್ ಶುಮ್‌ಪೀಟರ್‌ನ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಪಾಲ್ ಸ್ವೀಝಿ ಮಾರ್ಕ್ಸ್‌ವಾದದತ್ತ ಆಕರ್ಷಿತರಾದದ್ದು ವಿಶಿಷ್ಟ ಬಗೆಯಲ್ಲಿ. ಹಾರ್ವರ್ಡ್‌ನಿಂದ ಪ್ರಸಿದ್ಧ 'ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್' ಗೆ ಅಧ್ಯಯನಕ್ಕೆ ತೆರಳಿದ ಪಾಲ್, ಫೆಡ್ರಿಕ್ ವಾನ್ ಹಾಯಕ್ ಎಂಬ ಪರಂಪರವಾದಿ ಆಸ್ಟ್ರೀಯನ್ ಅರ್ಥಶಾಸ್ತ್ರಜ್ಞನ ಕ್ಲಾಸುಗಳಿಗೆ ಭರ್ತಿಯಾದರು. ಫೈಡ್ರಿಕ್ ತಮ್ಮ ಪಾಠಗಳಲ್ಲಿ ಮಾರ್ಕ್ಸ್‌ವಾದವನ್ನು ಪ್ರಖರವಾಗಿ ಖಂಡಿಸುತ್ತಿದ್ದರು. ಅವರ ವಾದಗಳ ಸತ್ಯಾಸತ್ಯತೆ ಪರೀಕ್ಷಿಸಲು ಮಾರ್ಕ್ಸ್‌ವಾದದ ಆಳವಾದ ಅಧ್ಯಯನ ಮಾಡಿದ ಪಾಲ್. ಆ ಅಧ್ಯಯನ ಮುಗಿಯುವ ಹೊತ್ತಿಗೆ ಪಾಲ್ ಮಾರ್ಕ್ಸ್‌ವಾದಕ್ಕೆ ಮಾರುಹೋದರು! ಆ ಅಧ್ಯಯನ ಫಲವೇ 1942 ರಲ್ಲಿ ಅವರು ಪ್ರಕಟಿಸಿದ ಮೇರುಕೃತಿ 'ಬಂಡವಾಳ ಶಾಹಿ ಬೆಳವಣಿಗೆಯ ಸಿದ್ಧಾಂತ'

ಸಕ್ರಿಯ ಹೋರಾಟಗಾರ

ಪಾಲ್ ಸ್ವೀಝಿ ಪತ್ರಿಕೆ, ಪುಸ್ತಕ ಬರೆಯುವುದಕ್ಕೆ ಮಾತ್ರ ಸೀಮಿತರಾದವರಲ್ಲ. ಅವರು ಆ ಕಾಲದ ಎಲ್ಲಾ ಪ್ರಮುಖ ರಾಜಕೀಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ ಸಕ್ರಿಯ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಂಡವರು. ಸೋವಿಯತ್ ಒಕ್ಕೂಟಕ್ಕೆ ಬೆಂಬಲ, ಫ್ಯಾಸಿಸಂ ವಿರುದ್ಧ ಹೋರಾಟ, ಕ್ಯೂಬನ್ ಕ್ರಾಂತಿಗೆ ಬೆಂಬಲ, ವಿಯೆಟ್ನಾಂ ಯುದ್ಧ ವಿರೋಧಿ ಚಳುವಳಿ, 60 ರ ದಶಕದ ವಿದ್ಯಾರ್ಥಿ ದಂಗೆಗಳು - ಹೀಗೆ ಪಾಲ್ ಭಾಗವಹಿಸದ ಹೋರಾಟಗಳಿಲ್ಲ. ಎರಡನೇ ಮಹಾಯುದ್ಧ ಸಮಯದಲ್ಲಿ ಫ್ಯಾಸಿಸಂ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದ ಪಾಲ್, ಅಮೆರಿಕನ್ ಸರ್ಕಾರ ರಕ್ಷಣಾ ಖಾತೆಯಲ್ಲಿ ದುಡಿದಿದ್ದರು.

1954 ರಲ್ಲಿ 'ಅಮೆರಿಕ - ವಿರೋಧಿ' ಚಟುವಟಿಕೆಗಳ ತನಿಖೆ ಹೆಸರಲ್ಲಿ ಎಡ-ಪ್ರಗತಿ ಪಂಥೀಯರೆಲ್ಲರ ಬೇಟೆ ಆರಂಭಿಸಲಾಯಿತು. ಪಾಲ್ ಸ್ವೀಝಿನ್ ಸಹ ಇದಕ್ಕೆ ಬಲಿಯಾಗಬೇಕಾಯಿತು. ಅವರು ತಮ್ಮ ಯಾವುದೇ ಸಹಚರರ ವಿರುದ್ಧ ಸಾಕ್ಷಿ ಹೇಳಿದೆ, ಅವರ ಹೆಸರು ಬಿಟ್ಟುಕೊಡದಿದ್ದರಿಂದ ತನಿಖೆ ಜತೆ ಸಹಕರಿಸಲಿಲ್ಲ ಎಂದು ಅವರನ್ನು ಜೈಲಿಗೆ ಕಳಿಸಲಾಯಿತು. ಅದರ ವಿರುದ್ಧ ಕೋರ್ಟ್‌ನಲ್ಲಿ ಅವರ ಹೋರಾಟ ಪ್ರಸಿದ್ಧವಾಯಿತು. ಕೊನೆಗೂ ಸುಪ್ರೀಂ ಕೋರ್ಟ್ ಅವರ ಪರವಾಗಿ ತೀರ್ಪು ನೀಡಿ, ಅವರು ದೊಡ್ಡ 'ಹೀರೋ' ಆದರು.

ಮೇರುಕೃತಿಗಳು

40 ರ ದಶಕದಲ್ಲಿ ಅವರ 'ಬಂಡವಾಳಶಾಹಿ ಬೆಳವಣಿಕೆಯ ಸಿದ್ಧಾಂತ' ಎಂಬ ಮೇರುಕೃತಿ ಸಮಕಾಲೀನ ಬಂಡವಾಳಶಾಹಿ ಅರ್ಥೈಸುವಲ್ಲಿ, ಮಾರ್ಕ್ಸ್ ವಾದದ ವಿಚಾರಧಾರೆ ಬೆಳೆಸುವಲ್ಲಿ ದೊಡ್ಡ ಪಾತ್ರ ವಹಿಸಿತು. ಮಾರ್ಕ್ಸ್‌ವಾದಿ ಆರ್ಥಿಕ ವಿಶ್ಲೇಷಣೆಯ ನೆಲೆಯಿಂದ ಆರಂಭಿಸಿ, ಸಾಮ್ರಾಜ್ಯ ಶಾಹಿಗಳ ನಡುವಣ ಪೈಪೋಟಿ, ಫ್ಯಾಸಿಸಂನ ಉದಯ ಮುಂತಾದ ಪ್ರಗಳು ಅರ್ಥ ಮಾಡಿಕೊಳ್ಳುವಲ್ಲಿ ಸಹಕಾರಿಯಾಯಿತು.

60 ರ ದಶಕದಲ್ಲಿ ಅವರು ಪಾಲ್ ಬಾರಾನ್ ಜತೆ ಬರೆದ 'ಗುತ್ತೇದಾರಿ ಬಂಡವಾಳಶಾಹಿ' ಸಮಕಾಲೀನ ಬಂಡವಾಳಶಾಹಿ ಎಲ್ಲಾ ಆಯಾಮಗಳನ್ನು ಅರ್ಥೈಸುವ ಮೇರುಕೃತಿ. ಮಾರ್ಕ್ಸ್‌ವಾದಿ ಅರ್ಥಶಾಸ್ತ್ರ ಮತ್ತು ಸಿದ್ಧಾಂತಕ್ಕೆ ಅವರ ಪ್ರಮುಖ ಕೊಡುಗೆ.

ಪಾಳೆಯಗಾರಿ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆ ಹೇಗಾಯಿತು? ಸಮಾಜವಾದಿ ದೇಶಗಳಲ್ಲಿ ಸ್ಥಾಪಿತವಾದ ಸಾಮಾಜಿಕ-ಆರ್ಥಿಕ ವ್ಯವಸ್ಥೆ, ಚೀನಾದ ಕ್ರಾಂತಿ, ಚೀನಾದ ಸಾಂಸ್ಕೃತಿಕ ಕ್ರಾಂತಿ, ಗ್ಲಾಸ್‌ನೋಸ್ತ್-ಪೆರೆಸ್ರೋಯಿಕಾಗೆ ಸೋವಿಯತ್ ಸಮಾಜವಾದ ಸರಿಪಡಿಸುವುದೆ? - ಇವು ಪಾಲ್ ಸ್ವೀಝಿ ಭಾಗವಹಿಸಿ ಪ್ರಮುಖ ಕೊಡುಗೆ ಕೊಟ್ಟ ಈ ಯುಗದ ಪ್ರಮುಖ ಚರ್ಚೆಗಳು.

20ನೇ ಶತಮಾನದ ಎಲ್ಲಾ ಪ್ರಮುಖ ವಿದ್ಯಮಾನಗಳನ್ನು ಸಮಾಜವಾದಿ ದೃಷ್ಟಿಕೋನದ ಅಧ್ಯಯನ ಮಾಡಿ ವಿಶ್ಲೇಷಿಸಿ ಅರ್ಥೈಸಿದ ಕೀರ್ತಿಗೆ ಪಾಲ್ ಅವರಿಗೆ ಸೇರಿದ್ದು. ಹೆಚ್ಚು ಕಡಿಮೆ ಇಡೀ ಶತಮಾನ ನೋಡಿದ, ಅನುಭವಿಸಿದ ಅಪರೂಪದ ವ್ಯಕ್ತಿ ಪಾಲ್ ಸ್ವೀಝಿ. ಅವರ ಅಪಾರ ಬರವಣಿಗೆ, ಸಮಾಜವಾದಿ ದೃಷ್ಟಿಕೋನಕ್ಕೆ ಅವರ ಕೊಡುಗೆ - ಅವರನ್ನು 20ನೇ ಶತಮಾನದ ಅಪ್ರತಿಮ ಬುದ್ಧಿಜೀವಿಗಳ ಸಾಲಿಗೆ ಏರಿಸಿದೆ.

'ಮಂಥ್‌ಲೀ ರಿವ್ಯೂ' ಪ್ರಕಟಣೆ

ಪಾಲ್ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಾಗಿ ಸೇರಿದ್ದರು. ಹಾಗಗಲೇ ಅವರು ಪಕ್ಕಾ ಮಾರ್ಕ್ಸ್‌ವಾದಿ ಎಂದು ಪ್ರಸಿದ್ಧರಾಗಿದ್ದರಿಂದ ಅವರ ಶಿಕ್ಷಕ ಹುದ್ದೆ ಶಾಶ್ವತವಾಗಲಿಲ್ಲ. ಪಾಲ್ ವಿಶ್ವವಿದ್ಯಾಲಯದ ಉಸಾಬರಿ ಬಿಟ್ಟು, ನಂತರ ಪ್ರಸಿದ್ಧವಾದ 'ಮಂಥ್‌ಲೀ ರಿವ್ಯೂ' ಮಾಸಿಕ ಆರಂಭಿಸಿದ್ದರು. 'ಸ್ವತಂತ್ರ ಸಮಾಜವಾದಿ ಪತ್ರಿಕೆ' ಎಂದು ಅವರು ಕರೆದ ಮಾಸಿಕ ಹಲವು ಪೀಳಿಕೆಗಳ ಸಮಾಜವಾದಿ ಯುವ ಬುದ್ಧಿಜೀವಿಗಳು, ಕ್ರಾಂತಿಕಾರಿಗಳ ವೇದಿಕೆಯಾಗುವ ಪತ್ರಿಕೆಯಾಗಿ ಬೆಳೆಯಿತು. ಈ ಪತ್ರಿಕೆಯ ಮೊದಲ ಸಂಚಿಕೆಯಲ್ಲೇ, ಆಲ್ಬರ್ಟ್ ಐನ್‌ಸ್ಟೇನ್ ರವರ ಸಮಾಜವಾದ ಏಕೆ? ಎಂಬ ಪ್ರಸಿದ್ಧ ಲೇಖನ ಬಂದಿತ್ತು. ಅದರಲ್ಲಿ ಅವರ ನೆರವಿಗೆ ಬಂದವರು ('ಮಾನವನ ಐಹಿಕ ಅಭ್ಯುದಯ' ಎಂಬ ಮಾರ್ಕ್ಸ್‌ವಾದಕ್ಕೆ ಪ್ರಾಥಮಿಕ ಪಾಠ ಮತ್ತು ಇತರ ಮೂಲಭೂತ ಕೊಡುಗೆಗಳಿಗೆ) ಪ್ರಸಿದ್ಧವಾದ ಲಿಯೋ ಹ್ಯೂಮರಮನ್ ಮತ್ತು ಹ್ಯಾರಿ ಮ್ಯಾಗಡೊಫ್ ('ಸಾಮ್ರಾಜ್ಯಶಾಹಿ ಯುಗ' ಎಂಬ ಪ್ರಸಿದ್ಧ ಪುಸ್ತಕದ ಲೇಖಕ) 'ಮಂಥ್‌ಲೀ ರಿವ್ಯೂ'ನ ಅಪಾರ ಜನಪ್ರಿಯತೆಗೆ ಅದರ ಒಟ್ಟಾರೆ ಸೈದ್ಧಾಂತಿಕ ಕಣ್ಣೋಟವೇ ಕಾರಣವಾಗಿತ್ತು. ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ವಹಿಸುತ್ತಿರುವ ಪ್ರಮುಖ ಪಾತ್ರದ ಅರಿವಿದ್ದ ಈ ದೃಷ್ಟಿಕೋನ ಹೊಂದಿದ್ದ ಪ್ರಮುಖ ಇಂಗ್ಲೀಷ್ ಪತ್ರಿಕೆಯಾಗಿತ್ತು. ಅದರ ಸರಳತೆ, ನಿರ್ದಿಷ್ಟ ಸಮಕಾಲೀನ ವ್ಯವಸ್ಥೆಯ ನಿರ್ದಿಷ್ಟ ಅಧ್ಯಯನ, ಮೂರನೇ ಜಗತ್ತಿನ ಬಗ್ಗೆ ಕಾಳಜಿ, ಸಮಾಜವಾದದ ಬಗೆಗೆ ಪಕ್ಷಪಾತಗಳೂ ಅವರ ಜನಪ್ರಿಯತೆಗೆ ಕಾರಣವಾಗಿದ್ದವು.

ಯಹೂದಿ ಗೆಳೆಯನಿಗೆ....

ಅಸಾಧ್ಯ ಕೆಲಸಗಳನ್ನು
ನನ್ನಿಂದ ನಿರೀಕ್ಷಿಸಬೇಡ.
ನಕ್ಷತ್ರಗಳನ್ನು ಬೇಟೆ
-ಯಾಡಲು ಹೇಳ ಬೇಡ.
ಸಾಗರವನ್ನು ಖಾಲಿ ಮಾಡೆಂದು
ನನ್ನ ಕೇಳಬೇಡ.
ಹಗಲು - ಬೆಳಕನ್ನು
ಕತ್ತರಿಸಿ ಹಾಕೆಂದು ಹೇಳಬೇಡ
ಯಾಕೆಂದರೆ ನಾನೊಬ್ಬ ಮನುಷ್ಯ.

ನನ್ನಕಂಗಳನ್ನು, ಪ್ರೀತಿಯನ್ನು
ಬಾಲ್ಯದ ನೆನಪುಗಳನ್ನು
ತೊರೆಯಲು ದಯವಿಟ್ಟು ಕೇಳಬೇಡ.

ಈ ಆಲಿವ್ ಮರದ ನೆರಳಲ್ಲೆ
ನಾನು ಬೆಳೆದಿದ್ದೇನೆ.

ನನ್ನದೇ ತೋಟದ ಅಂಜೂರ
ತಿಂದು ದೊಡ್ಡವನಾಗಿದ್ದೇನೆ.
ಕಣಿವೆಗಳ ಗುಂಟ ಬೆಳೆದ
ನನ್ನದೇ ದ್ರಾಕ್ಷಿ ತೋಟಗಳ
ಹಣ್ಣುಗಳಿಂದ ತಯಾರಿಸಿದ
ದ್ರಾಕ್ಷಾರಸದ ರುಚಿ ನವಿದಿದ್ದೇನೆ,
ಮತ್ತೆ ಮತ್ತೆ.

ಕೋಗಿಲೆ ನನ್ನ ಕಿವಿಗಳಲ್ಲಿ
ಮಧುರ ಸ್ವರ ಉಲಿದಿದೆ.
ನನ್ನ ತೋಡದ, ನನ್ನ ಊರಿನ
ಸ್ವತಂತ್ರ ಗಾಳಿ ಸದಾ ನನಗೆ
ಕಚಗುಳಿ ಇಟ್ಟಿದೆ.
ಇಂಥ ನನ್ನ ತಾಯ್ನೆಲವನ್ನೇ
ತ್ಯಜಿಸೆಂದು ಹೇಳುವ ಹಕ್ಕು
ನಿನಗಿಲ್ಲ ನನ್ನ ಗಳೆಯಾ.

(Poems From an Israeli Prison ಸಂಕಲನದಿಂದ)
ಮೂಲ-ಫೌಜಿಯಲ್ ಅಸ್ಸದ್ ಅನುವಾದ - ವಿಶಾ
ಕೃಪೆ: ಜೋಗತಿ



ದೇವನಿಗೆ

ದೇವನಿಗೆ ಅರಗಳಿಗೆ ಬಿಡುವಿರದು ದಿವಸ
ಒಂದಲ್ಲ ಎರಡಲ್ಲ ಭಕ್ತಜನ ಕೆಲಸ
ಈ ನಡುವೆ ಈಗಿತ್ತ ಇನ್ನೊಂದು ಪೇರ
ಹೊತ್ತಿಹನು ಕಳ್ಳ ಹಣ ರಕ್ಷಿಸುವ ಭಾರ

ಬಾಬಾಗಳು

ಉಳ್ಳವನು ಎರಗಿದರೆ ಉಂಗುರವ ನೀಡಿ
ಬಡಜನರು ಬಾಗಿದರೆ ನೀಡುವನು ಬೂದಿ
ಕಾರಣವು ಉಳ್ಳವನು ನಾಲ್ಕಾರು ಪಟ್ಟು
ಹಣ ಕೊಡುವನೆನ್ನುವುದು ಬಾಬಾಗೆ ಗೊತ್ತು.

ಬಾಬಾಗಳ ನಂಟು

ಸಾಚಾ ಜನ ತಾವೆಂಬ ಮಂದಿಗಳ ಇಂದೆ
ಮೋಸಗಾರ ಬಾಬಾಗಳ ಬಳಿಯಲ್ಲಿ ಕಂಡೆ
ಕಾರಣವು ಚುನಾವಣೆಗೆ ಬೇಕಾದ ಗಂಟು
ಅಲ್ಲಿಯೇ ಮಡಗುವುದು ಹೀಗಾಗಿ ನಂಟು

\- ವಿಡಂಬಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH